ಪುರಾಮುಕ್ತಿಗಾನ


-೧೨-೦.]

ಯುನ್ನ ಡಿಯಿಂದ
ತಿಳಿಯುವುದು.
ಲ್ಲಿಯ ಜೀವನ
ನ ಸ್ಥಿತಿಗತಿಗಳು
ಗಳನ್ನು, ಕೇವಲ
ಅಥವಾ ಪ್ರಬಂಧ
ಬೇಕೆಂಬುದೇ ಈ
ಯಕೆಯು ಈಡೇ

ಗುಡಿಸಲ ಗುರು

ರಾಜಸೇವಾಸಕ್ತ

ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರ

ಮುನ್ನುಡಿಯೊಡನೆ

ಎನ್. ಸಿ. ಅಣ್ಣಯ್ಯ

ಮೊದಲನೆಯ ಮುದ್ರಣ
೧೯೪೪

ತಿದ್ದಿದ ಎರಡನೆಯ ಮುದ್ರಣ
೧೯೪೬

ಕೃತಜ್ಞತೆ

ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ ಚನ್ನಪಟ್ಟಣದಲ್ಲಿ ಒಕ್ಕಲಿಗರ ಯುವಜನ ಮಹಾ ಸಮ್ಮೇಳನ ಸಂದರ್ಭದಲ್ಲಿ ನಡೆದ ಸಣ್ಣ ಕಥೆಗಳ ಸ್ಪರ್ಧೆಗಾಗಿ ಕೇವಲ ಎಂಟೊಂಭತ್ತು ಪುಟಗಳ ಕಥೆಯೊಂದನ್ನು ಬರೆದು ಕಳುಹಿಸಿದ್ದೆ. ನನ್ನ ಮಿತ್ರರಾದ ಶ್ರೀಮಾನ್ ಆರ್. ಕೆ. ನಾರಾಯಣ್‌ರವರು (ಇಂಡಿಯನ್ ಥಾಟ್ ಸಂಪಾದಕರು) ಒಮ್ಮೆ ಅದನ್ನು ಓದಿಸಿ ಕೇಳಿ "ಇದನ್ನೇ ಇನ್ನೂ ಸ್ವಲ್ಪ ವಿಸ್ತರಿಸಿ ಬರೆಯಬಹುದಲ್ಲವೆ?" ಎಂದರು. ಬರೆದೆ. ಅಚ್ಚುಹಾಕಿಸುವ ಮುನ್ನ ಅದನ್ನು ನೋಡಿದ ನನ್ನ ಅಣ್ಣಂದಿರಾದ ಶ್ರೀ|| ಅಣ್ಣಯ್ಯಪ್ಪನವರು, 'ಮತ್ತೊಮ್ಮೆ ಬರೆ,' ಎಂದರು. ಹಾಗೆಯೇ ಮಾಡಿದೆ. ಅದೇ ಇದು. ನನ್ನ ಮಿತ್ರರಾದ ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್ಯರವರು ದಯಮಾಡಿ ಹಸ್ತಪ್ರತಿಯನ್ನು ಓದಿಕೊಟ್ಟರು.

ಕನ್ನಡ ಸಾಹಿತ್ಯ ರಂಗದಲ್ಲಿ ನಾಡಿನ ಯುವಕರಿಗೆ ಆಚಾರ್ಯರಂತಿರುವ "ಶ್ರೀ" ಯವರು ಮುನ್ನುಡಿಯನ್ನು ಬರೆದು ಆಶೀರ್ವಾದ ಮಾಡಿದ್ದಾರೆ.

ಇವರೆಲ್ಲರಿಗೂ ನಾನು ತುಂಬಾ ಋಣಿಯಾಗಿದ್ದೇನೆ.

—ಅಣ್ಣಯ್ಯ.

ತಿದ್ದಿದ ದ್ವಿತೀಯ ಮುದ್ರಣ

ಈ ಪುಸ್ತಕವನ್ನು ೧೯೪೬–೪೭ ನೇ ವರ್ಷದ ಮಿಡ್ಲ್ ಸ್ಕೂಲ್ ಪರೀಕ್ಷೆಗೆ ಪಠ್ಯಪುಸ್ತಕವನ್ನಾಗಿ ಅಂಗೀಕರಿಸಿದುದಕ್ಕಾಗಿ ಮೈಸೂರು ಸಂಸ್ಥಾನದ ವಿದ್ಯಾಇಲಾಖಾ ಟೆಕ್ಸ್ಟ್‌ಬುಕ್ ಕಮಿಟಿಯ ಸದಸ್ಯರಿಗೂ ಡೈರೆಕ್ಟರವರಿಗೂ ತುಂಬಾ ಕೃತಜ್ಞನಾಗಿದ್ದೇನೆ.

ಶ್ರೀ ಯವರ ಭಾವಚಿತ್ರವನ್ನು ದೊರಕಿಸಿದ ಶ್ರೀಮಾನ್ ವಿ. ಸೀ. ಯವರಿಗೂ ೭೧ ನೆ ಪುಟದ ಚಿತ್ರವನ್ನು ಒದಗಿಸಿದ ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯವರಿಗೂ, ಪುಸ್ತಕದ ಎರಡನೇ ಮುದ್ರಣವನ್ನೂ ಸಾವಧಾನದಿಂದ ನಿರ್ವಹಿಸಿದ ತರುಣರಾದ ಶ್ರೀ ಜಿ. ಎಚ್. ರಾಮರಾಯರಿಗೂ ನನ್ನ ವಂದನೆಗಳು.

—ಅಣ್ಣಯ್ಯ.

ಪ್ರಕಾಶಕರು:— **ಎನ್. ಸಿ. ಅಣ್ಣಯ್ಯ, ಬಿ.ಎ., ಬಿ.ಟಿ.,**
ವ್ಯವಸ್ಥಾಪಕ, ಸಂಸ್ಥಾನದ ವಯಸ್ಕರ ವಿದ್ಯಾಸಮಿತಿ,
ಮೈಸೂರು.



ಮುನ್ನುಡಿ

ಮಹಾತ್ಮಾ ಗಾಂಧಿಯವರು ಭಾರತದ ಸ್ವಾತಂತ್ರ್ಯಕ್ಕೆ ಹಳ್ಳಿಗಳ ಏಳಿಗೆಯೇ ತಳಹದಿಯೆಂದು ಸಾರಿ ಸಾರಿ ಹೇಳುತ್ತಿದ್ದಾರೆ; ಮತ್ತು ಅದಕ್ಕೆ ಬೇಕಾದ ಏರ್ಪಾಡುಗಳನ್ನು ಹೂಡುತ್ತಿದ್ದಾರೆ.

ವಿಧಿವಿಲಾಸದಿಂದ ನೂರು ನೂರೈವತ್ತು ವರ್ಷಗಳಿಂದೀಚಿಗೆ ಖಿಲವಾಗಿ ಕೆಟ್ಟರುವ ನಮ್ಮ ಹಳ್ಳಿಗಳ ಎಲ್ಲ ಬಗೆಯ ಕೊಳಕು ಕೊರತೆಗಳು ಮಾಯವಾಗಿ ಅವು ಮತ್ತೊಮ್ಮೆ ನಂದನವನಗಳಾಗಬೇಕು. ಜನ ತೇಜಸ್ವಿಗಳಾಗಬೇಕು. ಚೊಕ್ಕಟ, ಆರೋಗ್ಯ, ವಿದ್ಯೆ, ಒಕ್ಕಟ್ಟು, ಸಾಹಸ, ದೇಶಾಭಿಮಾನ, ಭಾಷಾಭಿಮಾನ, ಧರ್ಮಶ್ರದ್ಧೆ, ತುಂಬು ಬದುಕು ಹಳ್ಳಿಗಳಲ್ಲಿ ಮತ್ತೆ ಮನೆಮಾಡಬೇಕು. ಎಲ್ಲೆಲ್ಲಿಯೂ ಸಿರಿಯೂರು, ಸಿರಿಹಟ್ಟಿ, ಸಿರಿಹೊಳಲು ಎಂಬ ಹೆಸರುಗಳು ಒಪ್ಪಿಕೆಯಾಗಿ ಹೊಂದಿ ಜನಪದದ ಹಾಡುಗಳು ಮತ್ತೆ ಊಟೆ ಬುಗ್ಗೆಯಂತೆ ನಲಿದಾಡಬೇಕು. ಗೆಯ್ಮೆಗೆಯ್ಯುತ್ತಾ ಹಾಡು ಹೊಮ್ಮಬೇಕು, ನಾಡು ಹಸನಾಗಬೇಕು. ನಾಡಿನ ಮುಂದಾಳುಗಳ ಆಸೆ ಇದು.

ಹಳ್ಳಿಗಳು ದೊಡ್ಡ ಬದುಕು ಬದುಕಿದರೆ ನಾಡಿಗೆನಾಡೇ ಬಾಳೀತು, ಬೆಳಗೀತು. ಇದೇ ನನ್ನ ಕೆಳೆಯರಾದ ಶ್ರೀ ಅಣ್ಣಯ್ಯನವರು ಬರೆದಿರುವ "ಗುಡಿಸಲ ಗುರು" ಎಂಬ ಗ್ರಂಥದ ತಿರುಳು, ಉದ್ದೇಶ, ಗುರಿ. ವಿದ್ಯೆಯನ್ನು ಪಡೆದು, ಸರ್ಕಾರದ ನೌಕರಿಯ ಹಂಬಲನ್ನು ಬಿಟ್ಟು, ಮಾದರಿಗ್ರಾಮವನ್ನು ನಿರ್ಮಿಸಿದ ಒಬ್ಬ ಯುವಕನ ಜೀವನವನ್ನು ಅವರು ರಮ್ಯವಾಗಿ ಸರಳ ಕನ್ನಡದಲ್ಲಿ ಚಿತ್ರಿಸಿದ್ದಾರೆ. ಈ ಕೆಲಸದಲ್ಲಿ ಬ್ರಾಹ್ಮಣನ ಸತ್ರೀರಣೆ ಸಹಕಾರಗಳೂ ಇದ್ದುವೆಂದು ಕಲ್ಪಿಸಿದ್ದಾರೆ. ಮುಂದರಿಯುವ ಹಳ್ಳಿ ಹೇಗಿರಬೇಕೆಂಬ ಹೊರಗೆರೆಗಳನ್ನು ಎಳೆದಿದ್ದಾರೆ.

ಶ್ರೀ ಅಣ್ಣಯ್ಯನವರು ವಯಸ್ಕರಲ್ಲಿ ಅಕ್ಷರಪ್ರಚಾರ ಮಾಡುವ ಸಮಿತಿಯಲ್ಲಿ ದುಡಿಯುತ್ತಿದ್ದಾರೆ. ಉತ್ಸಾಹಿಗಳು. ಅವರ ಈ ಕೆಲಸವೂ, ಅವರಲ್ಲಿರುವ ಇನ್ನೂ ಹಲವು ಕನ್ನಡ ಹೊತ್ತಗೆಗಳೂ ಹೆಚ್ಚುತ್ತಾ ಹೋಗಲೆಂದು ಹಾರೈಸುತ್ತೇನೆ.

ಧಾರವಾಡ, ೧–೨–೧೯೪೫. ಬಿ. ಎಂ. ಶ್ರೀ.

ವಿ ವ ರ

ಗುಡಿಸಲ ಗುರು

೧. ಸಾಧುಸಮಾಗಮ

ಬೇಸಿಗೆ ಉರಿಬಿಸಿಲು. ಸೂರ್ಯದೇವನು ನಡುನೆತ್ತಿಯ ಮೇಲೆ ಪ್ರಜ್ವಲಿಸುತ್ತಿದ್ದನು. ಪಕ್ಷಿಗಳು ಬಿಸಲಿನ ತಾಪವನ್ನು ತಡೆಯಲಾರದೆ ಮರಗಳ ಮೇಲೆ ಕುಳಿತು ವಿಶ್ರಮಿಸಿಕೊಳ್ಳುತ್ತಿದ್ದುವು. ದನಕರುಗಳು ಮರಗಳ ನೆರಳಿನಲ್ಲಿ ಮೆಲಕು ಹಾಕುತ್ತಾ ಮಲಗಿದ್ದುವು.

ಕಂದಾಯದ ವಸೂಲಿಗಾಗಿ ಪಕ್ಕದ ಗ್ರಾಮಕ್ಕೆ ಹೋಗಿದ್ದ ಕರಣಿಕರು ಸ್ವಗ್ರಾಮಾಭಿಮುಖವಾಗಿ ಬರುತ್ತಿದ್ದರು. ತಳವಾರನು ಅವರ ಹಿಂದೆ ದಫ್ತರದ ಗಂಟನ್ನು ಹೊತ್ತುಕೊಂಡು ಬರುತ್ತಿದ್ದನು. ಬರುವಾಗ ಊರ ಪಕ್ಕದ ಹಳ್ಳವನ್ನು ದಾಟಿಕೊಂಡು ಬರಬೇಕು. ಕರಣಿಕರು ಹಳ್ಳಕ್ಕೆ ಇಳಿಯುವ ವೇಳೆಗೆ ಸರಿಯಾಗಿ ಎದುರುಗಡೆಯಿಂದ ಮಧ್ಯವಯಸ್ಸಿಗೆ ಮೀರಿದ ಅಪರಿಚಿತರೊಬ್ಬರು ಬರುತ್ತಿದ್ದರು. ಅವರು ಸೊಂಟಕ್ಕೆ ಒದ್ದೆ ಮಡಿಪಂಚೆಯೊಂದನ್ನು ಸುತ್ತಿಕೊಂಡಿದ್ದರು. ಹೆಗಲ ಮೇಲೆ ಒಗೆದು ಹಿಂಡಿದ ಒಂದು ಪಂಚೆ. ತಲೆಯ ಮೇಲೆ ಬಟ್ಟೆಗಳ ಒಂದು ಚಿಕ್ಕ ಗಂಟು. ಗಟ್ಟಿಮುಟ್ಟಾದ ಮೈಕಟ್ಟು. ತೇಜಃಪುಂಜವಾದ ಮುಖ. ವಿಶಾಲವಾದ ಹಣೆ. ಹಣೆಯ ಮೇಲೂ ರಟ್ಟೆಗಳ ಮೇಲೂ ಭಸ್ಮಧಾರಣೆ. ನೋಡಿದವರನ್ನು ಭಕ್ತಿಪರವಶರನ್ನಾಗಿ ಮಾಡುವಂತೆ ಕಣ್ಣುಗಳಿಂದ ಹೊರಸೂಸುತ್ತಿದ್ದ ಸಾತ್ವಿಕ ತೇಜಸ್ಸು.

ಹತ್ತಿರ ಬಂದೊಡನೆಯೇ ಕರಣಿಕರು ನಿಂತು ನಮಸ್ಕಾರಮಾಡಿದರು. ಅಪರಿಚಿತರೂ ನಿಂತು ಪ್ರತಿನಮಸ್ಕಾರಮಾಡಿದರು.

ಕರಣಿಕರು—ಯಾವೂರು ಸ್ವಾಮಿ?

ಅಪರಿಚಿತರು—ಯಾವುದೋ ದೂರದ ಪರಸ್ಥಳ.

ಕರಣಿಕರು—ಭೋಜನವಾಗಿದೆಯೆ ?

ಅಪರಿಚಿತರು—ಇಲ್ಲ.

ಕರಣಿಕರು—ಹಾಗಾದರೆ ದಯಮಾಡಿ ನಮ್ಮ ಮನೆಗೆ ಬಂದು ಭೋಜನ ತೀರಿಸಿಕೊಂಡು ಹೋಗಬೇಕು.

ಅಪರಿಚಿತರು—ಇಂಥ ಅವೇಳೆಯಲ್ಲಿ ಬಂದು ತೊಂದರೆಕೊಡಲು ಇಷ್ಟವಿಲ್ಲ.

ಕರಣಿಕರು—ತೊಂದರೆ ಏನೂ ಇಲ್ಲ. ಸಾಧಾರಣವಾಗಿ ಹೆಚ್ಚಿಗೆ ಒಬ್ಬಿಬ್ಬರ ಊಟ ಇದ್ದೇ ಇರುತ್ತೆ. ನನಗೂ ಊಟವಿಲ್ಲ. ತಾವು ಉಪವಾಸ ಹೋಗುತ್ತಿರುವುದನ್ನು ನೋಡಿ ನಾನು ಊಟಮಾಡುವುದು ಹೇಗೆ ಸಾಧ್ಯ? ದಯವಿಟ್ಟು ಬರಬೇಕು.

ಅಪರಿಚಿತರು—ಹಾಗಿದ್ದರೆ ಸರಿ. ತಮ್ಮ ನಾಮಧೇಯವೇನೆಂದು ಹೇಳಿದರೆ ಸಾಕು. ಅಲ್ಲಿ ಕಾಣುವ ದೇವಸ್ಥಾನಕ್ಕೆ ಹೋಗಿ ಆಮೇಲೆ ನಿಮ್ಮ ಮನೆಯನ್ನು ವಿಚಾರಿಸಿಕೊಂಡು ಬರುತ್ತೇನೆ.

ಕರಣಿಕರು—ಕರಣಿಕರ ಮನೆ ಯಾವುದೆಂದು ಕೇಳಿದರೆ ಸಾಕು. ಯಾರಾದರೂ ತೋರಿಸುತ್ತಾರೆ.

ಅಪರಿಚಿತರು—ಒಳ್ಳೆಯದು, ಇನ್ನು ಅರ್ಧ ಗಂಟೆಯೊಳಗಾಗಿ ಬರುತ್ತೇನೆ. ತಾವು ಹೊರಡಿ.

ಕರಣಿಕರು ಮನೆಯಕಡೆ ಹೊರಟರು. ಅಪರಿಚಿತರು ದೇವಸ್ಥಾನಾಭಿಮುಖವಾಗಿ ಹೊರಟರು. ದಾರಿಯಲ್ಲಿ ಸಿಕ್ಕಿದ ಹೂಗಳನ್ನು ಬಿಡಿಸಿಕೊಂಡು ದೇವಸ್ಥಾನದ ಹಜಾರದಲ್ಲಿ ಬಟ್ಟೆಗಳನ್ನಿರಿಸಿ ಹೆಗಲ ಮೇಲಿದ್ದ ಒಗೆದ ಪಂಚೆಗಳನ್ನು ಆರಹಾಕಿ ಗರ್ಭಗುಡಿಯನ್ನು ಹೊಕ್ಕು ಈಶ್ವರನ ಪೂಜೆಗಾಗಿ ಕುಳಿತರು. ಸ್ವಲ್ಪಹೊತ್ತಿನೊಳಗಾಗಿ ಹೊರಗಡೆ ಯಾರೋ ಬರುವ ಸದ್ದಾಯಿತು. ಆಕಡೆ ನೋಡುವಷ್ಟರೊಳಗಾಗಿ ಎಂಟು ಮತ್ತು ಹತ್ತು

ವರ್ಷದ ಬಾಲಕರಿಬ್ಬರು ಬುಸುಗುಟ್ಟುತ್ತಾ ಓಡಿಬಂದು ತಾವು ತಂದಿದ್ದ ತೆಂಗಿನಕಾಯಿ ಕರ್ಪೂರ ಹೂಗಳನ್ನು ಅವರ ಮುಂದಿರಿಸಿ ನಿಂತುಕೊಂಡರು.

ಅಪರಿಚಿತರು—(ಲವಕುಶರಂತಿದ್ದ ಆ ಹುಡುಗರಕಡೆ ನೋಡಿ) "ಇದನ್ನು ಯಾರು ಕಳುಹಿಸಿದರು?" ಎಂದು ಕೇಳಿದರು.

ಬಾಲಕರು—ನಮ್ಮ ತಾತ ಕಳುಹಿಸಿದರು.

ಅಪರಿಚಿತರು—ಅವರ ಹೆಸರು?

ಬಾಲಕರು—ಕರಣಿಕರು.

ಅಪರಿಚಿತರು ಸಂತೋಷದಿಂದ ಶಿವಪೂಜೆಯನ್ನು ತೀರಿಸಿಕೊಂಡು ಹುಡುಗರ ಜೊತೆಯಲ್ಲಿ ಕರಣಿಕರ ಮನೆಗೆ ಬಂದರು. ಇವರಿಗಾಗಿಯೇ ಕಾದುಕುಳಿತಿದ್ದ ಕರಣಿಕರು ಅವರೊಡನೆ ಭೋಜನಕ್ಕೆ ಎದ್ದರು.

ಭೋಜನಾನಂತರ ತಾಂಬೂಲಚರ್ವಣಕ್ಕಾಗಿ ಮಹಡಿಯ ಮೇಲೆ ಹೋಗಿ ಕುಳಿತರು. ಅಪರಿಚಿತರು ತಾಂಬೂಲಹಾಕುವ ಅಭ್ಯಾಸವಿಲ್ಲವೆಂದು ಹೇಳಿದರು.

ಕರಣಿಕರು—ಈಗ ತಾವು ಎಲ್ಲಿಂದ ದಯಮಾಡಿಸಿದ್ದು?

ಅಪರಿಚಿತರು—ಮಾಗಡಿ ಪ್ರಾಂತ್ಯದಿಂದ.

ಕರಣಿಕರು—ಮುಂದೆ ಪ್ರಯಾಣ?

ಅಪರಿಚಿತರು—ಬೆಂಗಳೂರಿಗೆ.

ಕರಣಿಕರು—ಬೆಳಗಿನ ಪ್ರಯಾಣದಿಂದ ತುಂಬಾ ಆಯಾಸವಾಗಿರಬಹುದು. ಪುನಃ ಈ ಉರಿಬಿಸಿಲಿನಲ್ಲಿ ನಡೆಯುವುದೆಂದರೆ ಬಹಳ ಶ್ರಮವಾಗುವುದು. ಆದ್ದರಿಂದ ಈ ದಿನ ಇಲ್ಲಿಯೇ ಇದ್ದು ಬೆಳಗ್ಗೆ ತಮ್ಮ ಪ್ರಯಾಣ ಬೆಳಸಬಹುದು. (ಅಪರಿಚಿತರು ಒಪ್ಪಿ ಆದಿನ ಅಲ್ಲಿಯೇ ಇರುವುದಾಗಿ ಹೇಳಿದರು.)

ಆದಿನ ಸಂಜೆ ಆರುಗಂಟೆ ಸಮಯ. ಹೊಳೆಯ ಆಚೆ ದಡದಲ್ಲಿದ್ದ ಶಿವಾಲಯದ ಮುಂಭಾಗದ ಬಂಡೆಯ ಮೇಲೆ ಕರಣಿಕರೂ ಅಪರಿಚಿತರೂ

ಮಾತನಾಡುತ್ತಾ ಕುಳಿತಿದ್ದರು. ಸೂರ್ಯದೇವನು ಊರಿಗೆ ಪಶ್ಚಿಮ ದಿಕ್ಕಿನ ಬೈರೇದೇವರ ಬೆಟ್ಟದ ಹಿಂದೆ ಮರೆಯಾಗುತ್ತಿದ್ದನು. ಪಕ್ಷಿಗಳು ಚಿಲಿಪಿಲಿ ಗುಟ್ಟುತ್ತಾ ಗೂಡುಗಳನ್ನು ಸೇರುತ್ತಿದ್ದವು. ಊರ ಕಡೆ ಹೋಗುತ್ತಿದ್ದ ದನಕರುಗಳು ನದಿಯ ಪಾತ್ರದಲ್ಲಿ ಒಂದೆಡೆ ತೆಳುವಾಗಿ ಹರಿಯುತ್ತಿದ್ದ ನೀರನ್ನು ಕುಡಿಯಲು ಅರೆಕ್ಷಣ ನಿಂತು ಮುಂದೆ ಹೋಗುತ್ತಿದ್ದವು. ಅವುಗಳ ಹಿಂದೆ ಹುಲ್ಲುಸೊಪ್ಪುಗಳನ್ನು ಹೊತ್ತ ರೈತರು ದನಗಳನ್ನು ಅದ್ದಲಿಸುತ್ತಾ ಹೋಗುತ್ತಿದ್ದರು. ನದಿ ದಂಡೆಯ ಮಾವಿನ ಮರದ ಮೇಲೆ ಕಿಚಿಪಿಚಿ ಗುಟ್ಟುತ್ತಿದ್ದ ಕೋತಿಗಳು ಹೊತ್ತಿಳಿಯುತ್ತಾ ಬಂದಹಾಗೆ ಮೌನವನ್ನವಲಂಬಿಸಿದುವು. ಸುತ್ತಮುತ್ತಿನ ಪ್ರಕೃತಿಸೌಂದರ್ಯವನ್ನು ನೋಡುತ್ತಾ ಕುಳಿತಿದ್ದ ಅಪರಿಚಿತರನ್ನು ಕುರಿತು,

ಕರಣಿಕರು—'ತಮ್ಮ ಸ್ಥಳ?' ಎಂದರು.

ಅಪರಿಚಿತರು—ಬೆಂಗಳೂರು.

ಕರಣಿಕರು—ಈಗ ಬಂದದ್ದು ಎಲ್ಲಿಂದ?

ಅಪರಿಚಿತರು—ಎಲ್ಲಿಂದಲೋ ಏನೋ—ಆ ಪೂರ್ವೋತ್ತರಗಳನ್ನೆಲ್ಲಾ ಹೇಳಲು ಇಷ್ಟವಿಲ್ಲ.

ಕರಣಿಕರು—ತಮಗೆ ಇಷ್ಟವಿಲ್ಲದ ಮೇಲೆ ಒತ್ತಿ ಕೇಳುವುದಿಲ್ಲ. ಆದರೆ ತಮ್ಮ ದರ್ಶನವಾದಾಗಿನಿಂದ ತಮ್ಮ ಜೀವಿತವನ್ನು ತಿಳಿಯಬೇಕೆಂದು ಮನಸ್ಸು ಕಾತರಪಡುತ್ತಿತ್ತು; ಅಷ್ಟೆ.

ಅಪರಿಚಿತರು—ಆ ನಿಮ್ಮ ಕುತೂಹಲವನ್ನು ಈಗ ತೃಪ್ತಿಪಡಿಸಲಾರೆ. ಆದರೂ ಇಷ್ಟನ್ನು ಮಾತ್ರ ಹೇಳುತ್ತೇನೆ. ತಾರುಣ್ಯದಲ್ಲಿಯೇ ಸಂಸಾರ ಚಕ್ರದ ಸೆಳೆತಕ್ಕೆ ಸಿಕ್ಕಿ ಅತಿಯಾಗಿ ನೊಂದು ಜುಗುಪ್ಸೆಯಿಂದ 'ಐಹಿಕ ಸುಖದುಃಖಗಳನ್ನು ದೂರಮಾಡಿ ಶಾಂತತೆಯ ಬೀಡನ್ನು ಹುಡುಕುತ್ತಾ ಪ್ರಯಾಣಮಾಡುತ್ತಿದ್ದೇನೆ. ಆಂತರಿಕವಾದ ಶಾಂತಿಯೇ ನೈಜವಾದುದಾದರೂ ಬಾಹ್ಯದ ಪ್ರಶಾಂತ ವಾತಾವರಣವು ಅದಕ್ಕೆ ಸಹಾಯವೆಂದರಿತು

ಅಂಥ ಸನ್ನಿವೇಶವೊಂದನ್ನು ಹುಡುಕುತ್ತಾ ಪ್ರವಾಸಮಾಡುತ್ತಿದ್ದೇನೆ.

ಕರಣಿಕರು—ಅಂಥಾ ಸ್ಥಳವಿನ್ನೂ ನಿಮಗೆ ದೊರೆಯಲಿಲ್ಲವೆ?

ಅಪರಿಚಿತರು—ಇಲ್ಲ. ಇನ್ನೂ ಸಿಕ್ಕಿಲ್ಲ.

ಕರಣಿಕರು—ಅಂದರೆ ಆ ಸ್ಥಳವು ಹೇಗಿರಬೇಕೆಂದು ತಮ್ಮ ಅಭಿಪ್ರಾಯ?

ಅಪರಿಚಿತರು—ನಿಸರ್ಗದ ನಡುವೆ ಜನಸಂದಣಿಗೆ ಅವಕಾಶವಿಲ್ಲದ ಸ್ಥಳವಾಗಿರಬೇಕು. (ಎಂದು ಸುತ್ತಲೂ ಒಂದು ಬಾರಿ ನೋಡಿದರು.)

ಇದರ ಇಂಗಿತವನ್ನು ಅರಿತ ಕರಣಿಕರು, "ಈಗ ನಾವು ಕುಳಿತಿರುವ ಸ್ಥಳವು ತಮ್ಮ ಮನಸ್ಸಿಗೆ ಹೇಗೆ ತೋರುವುದು?" ಎಂದರು.

ಅಪರಿಚಿತರು—ಹಾಗೆಯೇ ನೋಡಿದರೆ ಈ ಸನ್ನಿವೇಶವು ಮನಸ್ಸಿಗೆ ಹಿತವಾಗಿ ತೋರುತ್ತಿರುವುದು.

ಕರಣಿಕರು—(ಉತ್ಸುಕತೆಯಿಂದ) ಸ್ವಾಮಿ, ಹಾಗಿದ್ದರೆ ನನ್ನದೊಂದು ವಿಜ್ಞಾಪನೆ. ತಮ್ಮನ್ನು ನೋಡಿದಾಗಿನಿಂದಲೂ ಅದು ಹೇಗೋ ನನ್ನ ಹೃದಯದಲ್ಲಿ ಭಕ್ತಿಯು ಉತ್ಪನ್ನವಾಗಿರುತ್ತೆ. ತಾವು ಇಲ್ಲಿಯೇ ನೆಲಸಿ, ನನಗೆ ತಮ್ಮ ಸಹವಾಸವು ಲಭಿಸುವುದಾದರೆ ತಮ್ಮ ವಾಸಕ್ಕೆ ಬೇಕಾದ ಎಲ್ಲ ಅನುಕೂಲಗಳನ್ನು ಕಲ್ಪಿಸಿ ನಾನಿರುವ ವರೆಗೂ ತಮ್ಮ ಸೇವೆಮಾಡುತ್ತೇನೆ.

ಬಹುಕಾಲ ಪ್ರವಾಸಮಾಡಿ ಪರರ ಇಂಗಿತವನ್ನು ಜಾಗ್ರತೆ ತಿಳಿಯುವ ಶಕ್ತಿಯುಳ್ಳ ಅಪರಿಚಿತರಿಗೆ ಕರಣಿಕರ ನಿಷ್ಕಳಂಕ ಹಾಗೂ ಸರಳ ಹೃದಯವು ತಿಳಿಯಿತು.

ಅಪರಿಚಿತರು—ಒಳ್ಳೆಯದು. ನನಗೂ ನಿಮ್ಮಂಥ ಸಾತ್ವಿಕರ ಸಹವಾಸವೇ ಪ್ರಿಯವಾದದ್ದು. ಆದರೆ ನನ್ನದೊಂದು ಆಶಯ. ಕೇವಲ ನನ್ನೊಬ್ಬನ ಶಾಂತಿಸಾಧನೆಗಾಗಿಯೇ ನನ್ನ ಎಲ್ಲಾ ಕಾಲವನ್ನೂ ಕಳೆಯುವುದರ ಜೊತೆಗೆ, ನನ್ನಿಂದ ಯಾವುದಾದರೊಂದು ರೀತಿಯಲ್ಲಿ ಇತರರಿಗೂ ಕೈಲಾದ ಅಲ್ಪಸ್ವಲ್ಪ ಸೇವೆ ದೊರೆಯುವಂತಾದರೆ ನನಗೆ ಬಹಳ ಸಂತೋಷ.

ಕರಣಿಕರು—ತಮ್ಮಂಥ ವಿರಕ್ತರ ಸಹವಾಸಕ್ಕಿಂತಲೂ ಮತ್ತೇನು ಹೆಚ್ಚಿನ ಪ್ರಯೋಜನವಾಗಬೇಕು?

ಅಪರಿಚಿತರು—ಅದಿರಲಿ. ಈದಿನ ಮಧ್ಯಾಹ್ನ ದೇವಸ್ಥಾನಕ್ಕೆ ಬಂದಿದ್ದ ಇಬ್ಬರು ಬಾಲಕರಿಗೆ ನೀವು ಹೇಗೆ ತಾತಂದಿರಾಗಬೇಕು?

ಕರಣಿಕರು—ಸ್ವಾಮಿ, ಅದೊಂದು ನನ್ನ ಜೀವಾವಧಿ ಬಾಧಿಸುತ್ತಿರುವ ಚಿಂತೆ. ನನಗೊಬ್ಬನೇ ಮಗನಿದ್ದ. ವಯಸ್ಸು ಇಪ್ಪತ್ತಾರಾಗಿತ್ತು. ಈ ಆರು ಗ್ರಾಮದ ಶಾನುಬೋವಿಕೆ ಮತ್ತು ನಮ್ಮ ಗೃಹಕೃತ್ಯದ ಎಲ್ಲಾ ಕೆಲಸ ಕಾರ್ಯಗಳನ್ನೂ ಸುಸೂತ್ರವಾಗಿ ನಡೆಸಿಕೊಂಡು ಹೋಗುತ್ತಿದ್ದನಲ್ಲದೆ ಸುತ್ತು ಮುತ್ತಿನ ಹತ್ತಾರು ಗ್ರಾಮಗಳಲ್ಲಿ ತನ್ನ ಸರಳತೆಯಿಂದ ನನಗಿಂತಲೂ ಹೆಚ್ಚಿನ ಗೌರವವನ್ನು ಸಂಪಾದಿಸಿದ್ದ. ಅಂಥಾ ಮಗನನ್ನು ಅನುಗ್ರಹಿಸಿದ ಭಗವಂತನನ್ನು ಕೊಂಡಾಡುತ್ತಾ ಲೌಕಿಕ ವಿಚಾರಗಳನ್ನು ಆದಷ್ಟು ದೂರ ಮಾಡಿ ಸುಖಿಯಾಗಿದ್ದೆ. ದುರ್ದೈವದಿಂದ ಈಗ್ಗೆ ನಾಲ್ಕು ವರ್ಷಗಳ ಕೆಳಗೆ ಅವನು ತೀರಿಹೋದ. ಅವರಿಬ್ಬರೂ ಅವನ ಮಕ್ಕಳು. (ಎಂದು ಒಂದು ಬಾರಿ ನಿಟ್ಟುಸಿರುಬಿಟ್ಟರು.)

ಅಪರಿಚಿತರು—ಆಹಾ! (ಎಂದು ಆಶ್ಚರ್ಯಚಕಿತರಾಗಿ ಒಮ್ಮೆ ನಿಟ್ಟುಸಿರುಬಿಟ್ಟು) ಏನು ದುರಾದೃಷ್ಟ! ಎಲ್ಲವೂ ವಿಧಿಯ ಸಂಕಲ್ಪ. ಅದನ್ನು ಮೀರಲು ಯಾರಿಗೂ ಸಾಧ್ಯವಿಲ್ಲ. ಅದೆಲ್ಲವೂ ಪ್ರಾರಬ್ಧ ಫಲವೆಂದು ಭಾವಿಸಿ ಸುಖದುಃಖಗಳೆರಡೂ ಭಗವಂತನಿಗೆ ಸೇರಿದುವೆಂದು ತಿಳಿದು ವ್ಯಾಮೋಹವನ್ನು ಆದಷ್ಟು ದೂರಮಾಡಿ ಶಾಂತಚಿತ್ತರಾಗಬೇಕು. ಅಭಿಮನ್ಯುವಿನ ವಿಯೋಗದಿಂದ ಅರ್ಜುನನಿಗೆ ಎಷ್ಟು ಸಂಕಟವಾಗಿರಬಹುದು? ರಾಜಾಧಿರಾಜರಿಗೂ ಇದು ತಪ್ಪಿದ್ದಲ್ಲ. ಅವರವರ ಸಂಕಟ ಅವರವರಿಗೆ ದೊಡ್ಡದು. ಅದರ ಆಳವನ್ನು ಕಂಡುಹಿಡಿಯಲು ಸಾಧ್ಯವಿಲ್ಲ. ಆದರೂ ಅಷ್ಟು ತರುಣ ವಯಸ್ಸಿನಲ್ಲಿಯೇ ಜನಾನುರಾಗವನ್ನು ಸಂಪಾದಿಸಿ ತನ್ಮೂಲಕ ಸಾಯುಜ್ಯವನ್ನು ಪಡೆದು ಧನ್ಯನಾದನೆಂದು ಭಾವಿಸಿ ಸಮಾಧಾನವನ್ನು ಹೊಂದಬೇಕು.

ಅಲ್ಲದೆ ನಿಮಗಿರುವ ಮುಂದಿನ ಜವಾಬ್ದಾರಿಯನ್ನು ಯೋಚಿಸಿ ಹಿಂದೆ ಹೋದುದನ್ನು ಮರೆಯಬೇಕು.

ಕರಣಿಕರು—ಸ್ವಾಮಿ, ಇನ್ನೇನು ಜವಾಬ್ದಾರಿ,—ಆ ಎರಡು ಮಕ್ಕಳನ್ನು ದೊಡ್ಡವರನ್ನಾಗಿ ಮಾಡುವುದು.

ಅಪರಿಚಿತರು—ಹುಡುಗರಿಬ್ಬರೂ ಪಾಠಶಾಲೆಗೆ ಹೋಗುತ್ತಿದ್ದಾರೆಯೋ?

ಕರಣಿಕರು—ಸ್ವಾಮಿ, ನಮ್ಮ ಗ್ರಾಮದಲ್ಲಿ ಪಾಠಶಾಲೆಯಿಲ್ಲ. ತಕ್ಕಮಟ್ಟಿಗೆ ವಿದ್ಯಾವಂತನಾದ ಹುಡುಗನೊಬ್ಬನನ್ನು ಕರೆಸಿ ನಮ್ಮ ಮನೆಯಲ್ಲಿಯೇ ಆತನ ಊಟವಸತಿಗಳಿಗೆ ಅನುಕೂಲಪಡಿಸಿ ಹುಡುಗರಿಗೆ ಪಾಠ ಹೇಳಿಸುತ್ತಿದ್ದೆ. ಈಗ್ಗೆ ಕೆಲವು ದಿನಗಳ ಹಿಂದೆ ಸರ್ಕಾರಿ ಉದ್ಯೋಗವು ದೊರೆತು ಆತನು ಹೊರಟುಹೋದ. ಆಗಿನಿಂದಲೂ ಮಕ್ಕಳಿಗೆ ವ್ಯಾಸಂಗವು ತಪ್ಪಿದೆ.

ಅಪರಿಚಿತರು—ಇಲ್ಲಿಗೆ ಹತ್ತಿರದಲ್ಲಿ ಎಲ್ಲಿಯೂ ಪಾಠಶಾಲೆ ಇಲ್ಲವೆ?

ಕರಣಿಕರು—ಇಲ್ಲ. ಇಲ್ಲಿಗೆ ಎರಡು ಮೈಲಿ ದೂರದ ಪೇಟೆಯಲ್ಲಿ ಲೋವರ್ ಸೆಕಂಡರಿ ಪೂರ್ತ ವ್ಯಾಸಂಗಕ್ಕೆ ಅನುಕೂಲವಿದೆ. ಆದರೆ ಅಷ್ಟು ದೂರ ಮಕ್ಕಳು ಪ್ರತಿದಿನವೂ ಹೋಗಿ ಬರುವುದು ನನ್ನ ಮನಸ್ಸಿಗೆ ಕಷ್ಟವಾಗಿ ತೋರಿತು. ಅಲ್ಲದೆ ಹೆಚ್ಚು ಹೊತ್ತು ಅವರನ್ನು ಅಗಲಿರುವುದು ನನಗೆ ಸಾಧ್ಯವಿಲ್ಲ. ಅವರು ಸದಾ ನನ್ನ ಹತ್ತಿರದಲ್ಲಿರುವುದರಿಂದ ಪುತ್ರವಿಯೋಗದ ದುಃಖವನ್ನು ಮರೆಯಲು ಅವಕಾಶವಾಗಿದೆ.

ಅಪರಿಚಿತರು—ಹಾಗಿದ್ದರೆ ನನ್ನದೊಂದು ಸಲಹೆ. ಆ ಮಕ್ಕಳು ಇನ್ನೂ ಸ್ವಲ್ಪ ದೊಡ್ಡವರಾಗುವವರೆಗೂ ಅವರ ವಿದ್ಯಾವ್ಯಾಸಂಗದ ಜವಾಬ್ದಾರಿಯನ್ನು ನನಗೊಪ್ಪಿಸಿ. ಅವರಿಗೆ ಪೇಟೆಯಲ್ಲಿರುವ ಎ. ವಿ. ಸ್ಕೂಲಿನ (Angio-Vernacular School) ಮೂರನೆ ತರಗತಿಯ ಮಟ್ಟದ ವರೆಗಿನ ಶಿಕ್ಷಣವನ್ನು ಇಲ್ಲಿಯೇ ಕೊಡುತ್ತೇನೆ. ಆಮೇಲೆ ಅವರು ಪೇಟೆ ಸ್ಕೂಲನ್ನು ಸೇರಿ ಆ ವರ್ಷವೇ ಕನ್ನಡ ಲೋವರ್ ಸೆಕಂಡರಿ ಪರೀಕ್ಷೆಗೆ ಕುಳಿತುಕೊಳ್ಳ

ಬಹುದು. ಅದರಲ್ಲಿ ಉತ್ತೀರ್ಣರಾದರೆ ಅಲ್ಲಿಂದ ಎರಡು ವರ್ಷದಲ್ಲಿ ಇಂಗ್ಲಿಷ್ ಲೋವರ್ ಸೆಕೆಂಡರಿ ಪರೀಕ್ಷೆಗೆ ಕುಳಿತುಕೊಳ್ಳಬಹುದು. ಬೆಳಿಗ್ಗೆ ಮತ್ತು ಸಾಯಂಕಾಲ ನಾನೂ ಅವರಿಗೆ ಬೇಕಾದ ಲೆಕ್ಕ ಪಾಠಗಳನ್ನು ಹೇಳಿಕೊಡುತ್ತಿರುತ್ತೇನೆ. ಸಧ್ಯದಲ್ಲಿ ನಿಮ್ಮ ಹುಡುಗರ ಜೊತೆಗೆ ಅವರ ವಯಸ್ಸಿನ ಗ್ರಾಮದ ಇತರ ಮಕ್ಕಳೂ ನನ್ನಲ್ಲಿಗೆ ಬರುವಂತೆ ಏರ್ಪಡಿಸಿ. ಎಲ್ಲರಿಗೂ ಸಾಧ್ಯವಾದಷ್ಟು ವಿದ್ಯಾಭ್ಯಾಸಮಾಡಿಸುತ್ತೇನೆ. ಅಷ್ಟಾದರೆ ಇಲ್ಲಿರಲು ನನಗೆ ಸಂಕೋಚವಿಲ್ಲ.

ಕರಣಿಕರು—ಸರಿ. ನಮ್ಮ ಹುಡುಗರು ಮತ್ತು ಪುರೋಹಿತರ ಒಬ್ಬ ಹುಡುಗ ಇವರು ಮೂವರು ಮಾತ್ರ ಕ್ರಮವಾಗಿ ಬರಬಹುದು. ಆದರೆ ಉಳಿದ ರೈತರ ಮಕ್ಕಳಿಗೆ ಬರಲು ಸಾಧ್ಯವಾಗಲಾರದು. ಏಕೆಂದರೆ ಏಳೆಂಟು ವರ್ಷದ ಮಕ್ಕಳು ಕೂಡ ದನ ಮೇಯಿಸುವುದು, ಕುರಿ ಮೇಕೆಗಳನ್ನು ಕಾಯುವುದು, ಹುಲ್ಲು ಸೊಪ್ಪುಗಳನ್ನು ತರುವುದು ಮುಂತಾದ ಕೆಲಸ ಕಾರ್ಯಗಳಲ್ಲಿ ದೊಡ್ಡವರಿಗೆ ನೆರವಾಗುತ್ತವೆ. ರೈತರಿಗೂ ಕೂಡ ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಬೇಕೆಂಬ ಆಶೆಯೂ ಇಲ್ಲ.

ಅಪರಿಚಿತರು—ಆದರೆ ಮಕ್ಕಳ ವಿದ್ಯಾಭ್ಯಾಸದಲ್ಲಿ ಆಸಕ್ತಿ ಹುಟ್ಟು ವಂತೆ ದೊಡ್ಡವರಿಗೆ ಉಚಿತರೀತಿಯಲ್ಲಿ ತಿಳಿಯ ಹೇಳಿದರೆ ಕೆಲವರಾದರೂ ಮಕ್ಕಳನ್ನು ವ್ಯಾಸಂಗಕ್ಕೆ ಕಳುಹಿಸಬಹುದು. ನಿಮ್ಮ ಮಾತಿಗೆ ಯಾರೂ ಪ್ರತಿ ಹೇಳಲಾರರು.

ಕರಣಿಕರು ಪ್ರಯತ್ನಿಸುವುದಾಗಿ ಒಪ್ಪಿದರು. ಯಾವ ಸಮಸ್ಯೆಯ ಬಗ್ಗೆ ಅವರು ಹಗಲಿರಳೂ ಯೋಚಿಸುತ್ತಿದ್ದರೋ ಅದು ತಾನಾಗಿಯೇ ಬಗೆಹರಿದಂತಾಯ್ತು. ಅವರ ಮಾತಿಗೆ ಸಂತೋಷದಿಂದ ಒಪ್ಪಿ ಅವರ ಇಷ್ಟದಂತೆ ದೇವಸ್ಥಾನದ ಪಕ್ಕದಲ್ಲಿ ಅವರ ವಾಸಕ್ಕಾಗಿ ಒಂದು ಗುಡಿಸಲನ್ನೂ ಪಾಠಶಾಲೆಗಾಗಿ ಒಂದು ಗುಡಿಸಲನ್ನೂ ಕಟ್ಟಿಸಿದರು. ಅಂದಿನಿಂದ ಅಪರಿಚಿತರು ಆ ಗ್ರಾಮಕ್ಕೇ ಗುರುಗಳಾದರು. ಅವರ ಗುಡಿಸಲೇ ಒಂದು ಪುಟ್ಟಗುರುಕುಲವಾಯಿತು.

೨. ಆದರ್ಶ

ಶಿವಪುರವು ಸುಮಾರು ಒಂದುನೂರು ಮನೆಗಳ ಗ್ರಾಮ. ಊರಲ್ಲಿ ಎರಡೇ ಬ್ರಾಹ್ಮಣರ ಮನೆಗಳು—ಕರಣಿಕರ ಮನೆ, ಪುರೋಹಿತರ ಮನೆ. ಊರಿಗೆ ಬೇಕಾದ ಅಗಸ, ಹಜಾಮ, ಕುಂಬಾರ, ಬಡಗಿ, ಕಮ್ಮಾರ ಇವರ ಒಂದೊಂದು ಮನೆಗಳು. ಎಂಟು-ಹತ್ತು ಕೂಳವಾಡಿಗಳ ಮನೆಗಳು. ಉಳಿದುವೆಲ್ಲಾ ರೈತರ ಮನೆಗಳು.

ಊರ ಸುತ್ತಲೂ ಫಲವತ್ತಾದ ಭೂಮಿ. ಊರಪಕ್ಕದಲ್ಲಿ ಹರಿಯುವ ಸ್ವರ್ಣಮುಖಿ ನದಿಯಿಂದ ಕಾಲುವೆಯು ತೋಡಲ್ಪಟ್ಟು ಅದರ ಆಸರೆಯಲ್ಲಿ ಸ್ವಲ್ಪ ತರಿ ಸಾಗುವಳಿ ಆಗುತ್ತಿತ್ತು. ರೈತರೆಲ್ಲರೂ ಅಷ್ಟಿಷ್ಟು ಸ್ವಂತ ಜಮೀನುಳ್ಳವರಾಗಿದ್ದರು. ಕಷ್ಟಪಟ್ಟು ತಮಗೂ ತಮ್ಮ ದನಕರುಗಳಿಗೂ ಅತ್ಯಾವಶ್ಯಕವಾದ ಬೆಳೆಗಳನ್ನು ಬೆಳೆಯುತ್ತಿದ್ದರು. ಆದರೂ ಬಹುಮಂದಿ ಸಾಲಗಳಿಗೆ ಸಿಕ್ಕಿದ್ದರು. ಅವರ ವ್ಯಾಪಾರ ಸಣ್ಣಪುಟ್ಟ ಲೇವಾದೇವಿ ಎಲ್ಲವೂ ಅಲ್ಲಿಗೆ ಎರಡು ಮೈಲಿ ದೂರದಲ್ಲಿದ್ದ ಪೇಟೆ ವರ್ತಕರ ಕೈಲಿದ್ದವು. ರೈತರು ಹೆಚ್ಚು (ಅವರಷ್ಟು) ತಿಳಿವಳಿಕಸ್ಥರಾಗಿರಲಿಲ್ಲ. ಲೆಕ್ಕಾಚಾರ ತಿಳಿಯದು. ದೊಡ್ಡ ದೊಡ್ಡ ಊರುಗಳಲ್ಲಿನ ಧಾರಣೆವಾಸಿಗಳನ್ನು ತಿಳಿಯಲಾರದೆ ತಾವು ಬೆಳೆದ ದವಸಧಾನ್ಯಗಳನ್ನು ಹತ್ತಿರದ ಪೇಟೆ ವರ್ತಕರು ಕೇಳಿದ ಬೆಲೆಗೆ ಕೊಡುತ್ತಿದ್ದರು. ಕಾರಣಾಂತರದಿಂದ ವರ್ತಕರಲ್ಲಿ ಮಾಡಿದ ಅಲ್ಪಸ್ವಲ್ಪ ಸಾಲಗಳಿಗಾಗಿ ತಾವು ಬೆಳೆದ ದವಸವನ್ನು ಅವರಿಗೇ ಮಾರ ಬೇಕಾಗಿತ್ತು. ಹೀಗೆ ಕೆಲವರ ಸಾಲದ ಹೊರೆಗಳು ಒಂದೆರಡು ತಲೆ ಗಳಿಂದಲೂ ನಡೆದುಬಂದಿದ್ದವು. ಪ್ರತಿಯೊಬ್ಬ ಪೇಟೆ ವರ್ತಕನೂ ಇಂಥ ನಾಲ್ಕಾರು ರೈತರನ್ನು ತನ್ನ ನಿತ್ಯದ ಗಿರಾಕಿಗಳನ್ನಾಗಿ ಮಾಡಿಕೊಂಡು ಸುಖದಿಂದ ಜೀವಿಸುತ್ತಿದ್ದನು. ಶಿವಪುರದ ರೈತರೆಲ್ಲರೂ ತಮ್ಮ ಪ್ರಾಮಾಣಿ ಕತೆಯಿಂದ ಸಂಪೂರ್ಣ ನಂಬಿಕೆಗೆ ಅರ್ಹರಾಗಿದ್ದರು.

ಊರಿಗೆಲ್ಲಾ ಗಣ್ಯವ್ಯಕ್ತಿಗಳೆಂದರೆ ಪಟೇಲರು ಮತ್ತು ಶಾನುಬೋಗರು. ಪಟೇಲ್ ತಿಮ್ಮೆಗೌಡರು ತುಂಬಾ ಅನುಕೂಲಸ್ಥರು. ದೊಡ್ಡ ಜಮೀನುದಾರರು. ಹತ್ತಾರುಸಾವಿರ ರೂಪಾಯಿ ಲೇವಾದೇವಿಯನ್ನೂ ಮಾಡುತ್ತಿದ್ದರು. ಊರಿನ ರೈತರಲ್ಲಿ ಅನೇಕರ ಭೂಮಿಕಾಣಿಗಳು ಆಧಾರ ಅಥವಾ ಭೋಗ್ಯ ರೀತಿಯಲ್ಲಿ ಇವರ ವಶವಾಗಿದ್ದವು. ಇವರು ತಮ್ಮ ಹಣದ ಬಡ್ಡಿಗಾಗಿ ನಗದು ಹಣವನ್ನು ತೆಗೆದುಕೊಳ್ಳದೆ ದವಸವನ್ನೇ ತೆಗೆದುಕೊಳ್ಳುವ ಪದ್ಧತಿ. ವರ್ಷಕ್ಕೆ ನೂರಾರು ಖಂಡುಗ ದವಸವನ್ನು ಮಾರುತ್ತಿದ್ದರು. ಮನೆಯಲ್ಲಿಯೂ ಹೆಚ್ಚು ಖರ್ಚಿರಲಿಲ್ಲ. ಪುಟ್ಟಸಂಸಾರ. ತಾನು, ತನ್ನ ಹೆಂಡತಿ, ಒಂದು ಮಗು. ಇವರಲ್ಲದೆ ಒಬ್ಬಳು ಅಡಿಗೆ ಹೆಂಗಸು ಮತ್ತು ದನಕಾಯುವ ಒಬ್ಬ ಆಳು. ಗೌಡರ ಕೈಯೂ ಸ್ವಲ್ಪ ಹಿಡಿತ. ಹೀಗಾಗಿ ವರ್ಷವರ್ಷವೂ ಹಣವು ಶೇಖರಿಸಲ್ಪಟ್ಟು ಧನಿಕರಾಗಿದ್ದರು.

ಶಾನುಬೋಗ್ ನಾರಣಪ್ಪನವರಿಗೆ ಕರಣಿಕರೆಂಬುದು ಅಡ್ಡಹೆಸರು. ಇವರ ಪೂರ್ವಿಕರು ಮಾಗಡಿ ಸಂಸ್ಥಾನದ ಗೌಡದೊರೆಗಳ ಆಶ್ರಯದಲ್ಲಿ ಕರಣಿಕರಾಗಿದ್ದು ಆ ಸಂಸ್ಥಾನವು ಹಾಳಾದನಂತರ ಅಲ್ಲಿಂದ ಬಂದು ತೃಣ ಜಲಕಾಷ್ಠತರು ಸಮೃದ್ಧವಾದ ಶಿವಪುರದಲ್ಲಿ ನೆಲಸಿದರು. ಆಗಲೇ ಅವರಿಗೆ ಇಲ್ಲಿನ ಆರು ಗ್ರಾಮಗಳ ಶಾನುಬೋಗಿಕೆಯೂ ಅನುಕೂಲವಾದ ಭೂಮಿಕಾಣಿಕೆಗಳೂ ಸಿಕ್ಕಿದವು. ಜನರೆಲ್ಲರೂ ಅವರನ್ನು ಮನೆತನದ ಹೆಸರಿನಿಂದ 'ಕರಣಿಕರು' ಎಂದೇ ಕರೆಯುತ್ತಿದ್ದರು. ನಾರಣಪ್ಪನವರಿಗೆ ಜೀವನಕ್ಕೆ ಸಾಕಾದಷ್ಟು ಜಮೀನಿದ್ದರೂ ಮನೆತನದ ಗೌರವಕ್ಕಾಗಿ ಶಾನುಬೋಗರಾಗಿದ್ದರು. ಆ ಪ್ರಾಂತ್ಯ ಬರುತ್ತಿದ್ದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಜನರಿಗೂ ಅವರ ಮನೆಯಲ್ಲಿಯೇ ಅತಿಥಿಸತ್ಕಾರ. ಅತಿಥಿಸತ್ಕಾರವೆಂಬುದು ಅವರ ಮನೆತನಕ್ಕೇ ಬಂದ ಒಂದು ಸದ್ಗುಣ. ರೈತರನ್ನು ಕಂಡರೆ ಅವರಿಗೆ ತುಂಬಾ ಪ್ರೀತಿ. ಪ್ರತಿಯೊಬ್ಬನನ್ನೂ ತನ್ನ ಆತ್ಮಬಂಧುವೆಂದು ತಿಳಿದಿದ್ದರು.

ರೈತರೂ ಏಕರೀತಿಯಾದ ವಿಶ್ವಾಸದಿಂದ ಅವರನ್ನು ಗೌರವಿಸುತ್ತಿದ್ದರು. ಯಾವ ವರ್ಷವಾದರೂ ಸರಿಯಾಗಿ ಮಳೆಬೆಳೆಗಳಾಗದೆ ರೈತರಿಗೆ ಮುಗ್ಗಟ್ಟು ಬಂದರೆ ಕರಣಿಕರು ಸ್ವಂತ ಕಣಜಗಳಿಂದ ದವಸಧಾನ್ಯಗಳನ್ನು ತೆಗೆಯಿಸಿ ರೈತರಿಗೆ ಹಂಚುತ್ತಿದ್ದರು. ಕಂದಾಯ ವಸೂಲಿ ವಿಚಾರದಲ್ಲಿ ಮಸಿಕಾಣಿಕೆ ಮೊದಲಾದ ಮಾಮೂಲುಗಳನ್ನು ಅವರು ಕಂಡವರೇ ಅಲ್ಲ. ಕೆಲವು ವೇಳೆ ವಾಯಿದೆಗೆ ಸರಿಯಾಗಿ ರೈತರಿಂದ ಕಂದಾಯ ವಸೂಲಾಗದಿದ್ದರೆ ತಮ್ಮ ಕೈಯಿಂದಲೇ ಹಾಕಿ ಅದನ್ನು ಆಮೇಲೆ ರೈತರಿಂದ ಬರಮಾಡಿಕೊಳ್ಳುತ್ತಿದ್ದರು. ರೈತರ ಸುಖವೇ ತನ್ನ ಸುಖ, ರೈತರ ಕಷ್ಟವೇ ತನ್ನ ಕಷ್ಟವೆಂದು ಭಾವಿಸಿದ್ದರು. ಒಟ್ಟಿನಲ್ಲಿ 'ಸರ್ವೇಜನಾಸ್ಸುಖಿನೋಭವಂತು' ಎಂಬ ಹಿರಿಯರ ವಾಕ್ಯವನ್ನು ಮನಸಾ ವಾಚಾ ಕಾಯಾ ಆಚರಿಸುತ್ತಿದ್ದವರೆಂದರೆ ನಾರಣಪ್ಪನವರು.

ಇತ್ತೀಚೆಗೆ ಬಂದು ನೆಲಸಿದ ಗುರುಗಳು ಗ್ರಾಮದ ಎಲ್ಲಾ ಪಂಗಡದ ಜನಗಳ ಪ್ರೀತಿಗೂ ಪಾತ್ರರಾಗಿದ್ದರು. ಕರಣಿಕರ ಮೊಮ್ಮಕ್ಕಳ ಜೊತೆಯಲ್ಲಿ ಕೆಲವು ರೈತರ ಹುಡುಗರೂ ವಿದ್ಯಾಭ್ಯಾಸಕ್ಕಾಗಿ ಆಶ್ರಮಕ್ಕೆ ಹೋಗಿ ಬರುತ್ತಿದ್ದರು. ರೈತರ ಮಕ್ಕಳು ಹತ್ತು ಹನ್ನೆರಡು ವರ್ಷ ವಯಸ್ಸಿಗೆ ಬಂದ ಕೂಡಲೆ ಹಿರಿಯರಿಗೆ ನೆರವಾಗಲು ವ್ಯಾಸಂಗವನ್ನು ಬಿಟ್ಟುಬಿಡುತ್ತಿದ್ದರು. ಹಾಗೆ ಬಿಟ್ಟು ಒಂದೆರಡು ವರ್ಷಗಳೊಳಗಾಗಿ ಕಲಿತ ಅಕ್ಷರಗಳನ್ನೂ ಮರೆತು ಬಿಡುತ್ತಿದ್ದರು. ಕರಣಿಕರ ಹಿರಿಮೊಮ್ಮಗ ನರಸಿಂಹಮೂರ್ತಿಯೂ ಅಷ್ಟಕ್ಕೇ ಬಿಟ್ಟು ತಾತನ ಶಾನುಭೋಗಿಕೆ ಲೆಖ್ಖ ಪತ್ರಗಳನ್ನು ನೋಡಿಕೊಳ್ಳಲುಪಕ್ರಮಿಸಿದನು. ಆವರ ಕಿರಿಯ ಮೊಮ್ಮಗ ಮತ್ತು ಪುರೋಹಿತರ ಮಗ ಇಬ್ಬರು ಮಾತ್ರ ಪೇಟೆ ಸ್ಕೂಲಿಗೆ ಹೋಗಿ ಸೇರಿದರು. ಪುರೋಹಿತರ ಮಗನೂ ಕೂಡ ಲೋವರ್ ಸೆಕಂಡರಿ ಪರೀಕ್ಷೆಯಾದನಂತರ ಸ್ಕೂಲನ್ನು ಬಿಟ್ಟನು. ಕರಣಿಕರ ಕಿರಿಯ ಮೊಮ್ಮಗ ಕೃಷ್ಣಮೂರ್ತಿ ಮಾತ್ರ ಪ್ರೌಢ ಶಿಕ್ಷಣಕ್ಕಾಗಿ ಬೆಂಗಳೂರನ್ನು ಸೇರಿದನು.

ಬೆಂಗಳೂರಲ್ಲಿ ಸರ್ಕಾರಿ ಉದ್ಯೋಗದಲ್ಲಿದ್ದ ಬಡವರಾದ ನೆಂಟರೊಬ್ಬರ ಮನೆಯಲ್ಲಿ ಕರಣಿಕರು ಕೃಷ್ಣಮೂರ್ತಿಯ ಊಟೋಪಚಾರಗಳಿಗೆ ಅನುಕೂಲಮಾಡಿದರು. ಅವರ ಗೃಹಕೃತ್ಯಕ್ಕೆ ಕೈಲಾದ ಸಹಾಯ ಮಾಡುತ್ತಿದ್ದರು. ಕೃಷ್ಣಮೂರ್ತಿಯೂ ಅವರ ಮನೆ ಹುಡುಗನಂತೆ ಸಲಿಗೆಯಾಗಿದ್ದುಕೊಂಡು ಅನ್ಯಾಕ್ರಾಂತವಾಗಿ ಕಾಲಹರಣೆ ಮಾಡದೆ ತನ್ನ ವ್ಯಾಸಂಗದಲ್ಲಿ ಆಸಕ್ತಿಯುಳ್ಳವನಾಗಿದ್ದನು. ರಜಾ ಕಾಲದಲ್ಲಿ ಊರಿಗೆ ಬಂದಾಗ ಪ್ರತಿದಿನವೂ ಗುರುಗಳಿಂದ•ಪುರಾಣ ಇತಿಹಾಸಗಳಲ್ಲಿನ ಧಾರ್ಮಿಕ ಮತ್ತು ನೈತಿಕ ವಿಚಾರಗಳನ್ನು ತಿಳಿದುಕೊಳ್ಳುತ್ತಿದ್ದನು. ಆಶ್ರಮದಲ್ಲಿ ವ್ಯಾಸಂಗಮಾಡುತ್ತಿದ್ದ ಕಿರಿಯ ಸಹೋದರರನ್ನೆಲ್ಲಾ ಸುತ್ತಲೂ ಕೂರಿಸಿಕೊಂಡು ಪಟ್ಟಣವಾಸದ ರೀತಿಯನ್ನೂ ಅಲ್ಲಿನ ವಿದ್ಯಾಭ್ಯಾಸದ ಕ್ರಮವನ್ನೂ ವಿವರಿಸುತ್ತಿದ್ದನು. ಅವರೊಡನೆ ಬೆರತು ಆಶ್ರಮದ ಆವರಣದಲ್ಲಿ ಗಿಡಗಳಿಗೆ ನೀರೆರೆಯುವುದು, ಗುರುಗಳ ದೇವತಾರ್ಚನೆಗೆ ಪುಷ್ಪಗಳನ್ನು ಕೊಯ್ದು ತರುವುದು, ಇವೇ ಮುಂತಾದ ಸಣ್ಣಪುಟ್ಟ ಕೆಲಸಗಳನ್ನು ಉತ್ಸಾಹದಿಂದ ಮಾಡುತ್ತಿದ್ದನು. ಗುರುಕುಲದ ವಿದ್ಯಾರ್ಥಿಗಳೆಲ್ಲರೂ ಎಂದಿಗೆ ರಜ ಬರುವುದೋ, ಕೃಷ್ಣಮೂರ್ತಿಯು ಹಳ್ಳಿಗೆ ಬಂದರೆ ಸಾಕು ಎಂದು ತವಕಪಡುತ್ತಿದ್ದರು.

ಶಿವಪುರದಲ್ಲಿ ಒಂದು ದಿನ ಬೆಳಗ್ಗೆ ಪಟೇಲರೂ ಶಾನುಬೋಗರೂ ಕುಳವಾರು ಬಾಕಿಪಟ್ಟಿಯನ್ನು ಮುಂದಿಟ್ಟುಕೊಂಡು ಕಂದಾಯ ವಸೂಲ್ಮಾಡುತ್ತಿದ್ದರು. ಕೈಯಲ್ಲಿದ್ದವರು ಕಂದಾಯದ ಹಣವನ್ನು ಕೊಟ್ಟರು. ಇಲ್ಲದವರು ಒಂದೆರಡು ದಿನಗಳ ವಾಯಿದೆ ಹೇಳಿ ಹೊರಟುಹೋದರು. ಬೋರೆಗೌಡ ಮಾತ್ರ ಕಡೆಯುವರೆಗೂ ನಿಂತಿದ್ದು ಶಾನುಬೋಗರ ಕಡೆ ನೋಡಿ, "ಬುದ್ದಿ, ಈ ಬಾರಿ ತೊಂದ್ರೇಲಿದ್ದೀನಿ, ಈ ವರ್ಸದ ಕಂದಾಯ ನೀವೇ ಆಕ್ಕೊಂಡು ಕಾಪಾಡಬೇಕು. ಮಾಗಡಿ ಪರ್ಸೆ ಆದಮೇಲೆ ಕೊಟ್ಬುಬಿಡ್ತೀನಿ" ಎಂದ. ಪಟೇಲರು ಇದನ್ನು ಕೇಳಿ, "ಅದಾಗೋದಿಲ್ಲ. ಏನಾದರೂ

ಮಾಡಿ ಕೊಟ್ಟುಬಿಡು. ಸರ್ಕಾರಿ ಹಣ ನಿಲ್ಲಿಸೋಕಾಗೋಲ್ಲ," ಎಂದು ಸ್ವಲ್ಪ ಕಠಿನವಾಗಿ ನುಡಿದರು. ಬೋರೇಗೌಡ ಕೊಡಲು ಯತ್ನವಿಲ್ಲದೆ, "ಈಗ ಕೈಲಿ ದುಡ್ಡಿಲ್ಲ, ಗೌಡ್ರೆ. ನನ್ನ ಗಾಚಾರಕ್ಕೆ ಒಂದು ಎತ್ತೂ ಸತ್ತೋಯ್ತು. ನಾಳೆ ಮುಂಗಾರಿಗೆ ಉಳೋಕೆ ಜೊತೆ ಎತ್ತಿಲ್ಲ. ರಾಗಿ ಕಾಳು ಮಾರಾನಾ ಅಂದ್ರೆ ಇನ್ನೂ ವರ್ಷತನಕಾ ಜೀವಣಕ್ಕಾಗಬೇಕು" ಎಂದ.

ಪಟೇಲರು—ಇರೋ ಒಂದೆತ್ತೂ ಮಾರಿ ಕಂದಾಯ ಕಟ್ಟು.

ಬೋರೆಗೌಡ—ಆಮೇಲೆ ವಲಾ ಉಳೋಕೆ ಏನ್ಮಾಡಲಿ ಗೌಡ್ರೆ?

ಪಟೇಲರು—ನಮ್ಮ ಎತ್ತುಗಳನ್ನೇ ಕೊಡುತ್ತೇನೆ. ನಮ್ಮದೇ ಹೊಲಾನೂ ಕೊಡುತ್ತೇನೆ. ಆರಂಬಮಾಡು.

ಬೋರೆಗೌಡ—ನಮ್ಮ ವಲಾ ಏನ್ಮಾಡಲೀ?

ಪಟೇಲರು—ಹುರುಳಿ ಚಲ್ಲಿಕೋ.

ವರ್ಷವೆಲ್ಲಾ ಜೀವನ ನಡೆಸುವ ತನ್ನ ಹೊಲವನ್ನು ತಕ್ಕಲು ಬಿಡಲು ಅಥವಾ ಕೇವಲ ಹುರುಳಿ ಬೆಳೆಯುವುದಕ್ಕಾಗಿ ಉಪಯೋಗಿಸಿಕೊಂಡು ಗೌಡರ ಹೊಲ ಉತ್ತು ರಾಜಪಾಲನ್ನು ಅವರಿಗೆ ಕೊಟ್ಟು ಕುಳಪಾಲನ್ನು ತಂದು ಜೀವಿಸುವುದು ಬೋರೆಗೌಡನಿಗೆ ಕಷ್ಟವಾಗಿ ತೋರಿತು. ಶಾನುಭೋಗರ ಕಡೆ ತಿರುಗಿ, "ಬುದ್ದಿ, ಈ ವರ್ಷ ಬಲು ಕಷ್ಟದಾಗಿದ್ದೀನಿ. ಎಷ್ಟೋ ಬಾರಿ ಕಾಪಾಡಿದ್ದೀರಿ. ಈಬಾರಿನೂ ವಸಿ ಕಾಪಾಡ್ರಿ. ಮನೇಲಿ ರೊದೊಂದು ಮ್ಯಾಕೆಮರಿ ಮಾರಿ ನಿಮ್ಮ ದುಡ್ಡು ಕೊಡ್ತೀನಿ" ಎಂದ. ಶಾನುಭೋಗರು ಪಟೇಲರ ಸ್ವಾರ್ಥಪರ ದೂರಾಲೋಚನೆಯನ್ನು ಅರಿತು ಬಡರೈತನಿಗಾಗಿ ಮರುಕಪಟ್ಟು "ಆಗಲಿ, ಹೋಗಪ್ಪ" ಎಂದು ಹೇಳಿ ಕಳುಹಿಸಿಕೊಟ್ಟರು. ವಸೂಲಿ ಮುಗಿಸಿಕೊಂಡು ಪಟೇಲರೂ ಮನೆಗೆ ಹೊರಟರು.

ಅಷ್ಟುಹೊತ್ತಿಗೆ ಸರಿಯಾಗಿ ಅಂಚೆ ಶಿವರಾಮಯ್ಯನವರು ಬಂದು, ಮೇಲೆ "ಅರ್ಜೆಂಟ್" ಎಂದು ಬರೆದಿದ್ದ ಲಕೋಟೆಯೊಂದನ್ನು ಕರಣಿಕರ

ಕೈಲಿ ಕೊಟ್ಟರು. ಲಕೋಟೆಯನ್ನು ಒಡೆದು ನೋಡಲು ಅದರಲ್ಲಿ ಹೀಗೆ ಬರೆದಿತ್ತು.—

ಬೆಂಗಳೂರು ಸಿಟಿ,
ತಾ॥ — —

ತೀರ್ಥರೂಪರವರ ದಿವ್ಯಸನ್ನಿಧಿಯಲ್ಲಿ ಬಾಲಕನ ಸಾಷ್ಟಾಂಗ ನಮಸ್ಕಾರಗಳು. ಅದಾಗಿ—ಉಭಯಕ್ಷೇಮ ಸಾಂಪ್ರತ. ನಮ್ಮ ಪರೀಕ್ಷೆಯು ನಾಳೆ ಸಾಯಂಕಾಲ ಪೂರೈಸುತ್ತದೆ. ನಾಡಿದ್ದು ಮಧ್ಯಾಹ್ನ ರೈಲಿನಲ್ಲಿ ಹೊರಟುಬರುತ್ತೇನೆ. ಸ್ಟೇಷನ್ ಬಳಿ ಗಾಡಿ ಕಳುಹಿಸಿ.

ಇಂತೀ ಸಾಷ್ಟಾಂಗ ನಮಸ್ಕಾರಗಳು,
ಬಾಲಕ ಕೃಷ್ಣಮೂರ್ತಿ.

ಆ ದಿನ ಮಧ್ಯಾಹ್ನವೇ ಕೃಷ್ಣಮೂರ್ತಿಯು ಬರಬೇಕಾಗಿತ್ತು. ಶಿವರಾಮಯ್ಯನವರನ್ನು ಸ್ನಾನಕ್ಕೆಬ್ಬಿಸಿ, ಕರಣಿಕರು ಬೋರೆಗೌಡನಿಗೆ ಹೇಳಿ ಕಳುಹಿಸಿದರು. ಬೋರೆಗೌಡನಿಗೆ ಎತ್ತುಗಾಡಿ ಎಂದರೆ ಬಲು ಷೋಕಿ. ಎಷ್ಟೇ ಬಡತನದಲ್ಲಿದ್ದರೂ ಒಳ್ಳೇ ಗಾಡಿಯನ್ನೂ ಅದಕ್ಕೆ ಸರಿಯಾಗಿ ಒಂದು ಜೊತೆ ಎತ್ತುಗಳನ್ನೂ ಇಟ್ಟಿರುತ್ತಿದ್ದ. ಘಂಟೆಸರದ ಘಲಿಘಲಿ ಶಬ್ದ ಕೇಳಿದೊಡನೆಯೇ ಅದು ಬೋರೆಗೌಡನ ಗಾಡಿಯೆಂದು ಊರಿಗೆಲ್ಲಾ ಗೊತ್ತು. ಅವನನ್ನು ಬಂಡಿ ಬೋರೆಗೌಡನೆಂದೇ ಅಡ್ಡಹೆಸರು ಹಿಡಿದು ಕೂಗುತ್ತಿದ್ದರು. ಕರಣಿಕರಿಗೆ ಅವನು ಅವಿಚ್ಛಿನ್ನ ಭಕ್ತ. ತಮಗಾಗಲಿ ಆ ಗ್ರಾಮಕ್ಕೆ ಬಂದ ಯಾವ ಅಧಿಕಾರಿಗಳಿಗೇ ಆಗಲಿ ಬೋರೇಗೌಡನ ಬಂಡಿಯನ್ನೇ ಕಳುಹಿಸುತ್ತಿದ್ದರು. ಕರಣಿಕರು ಹೇಳಿಕಳುಹಿಸಿದ ಕೂಡಲೇ ಬೋರೇಗೌಡ ಬಂದ. ಸಮಾಚಾರವನ್ನು ತಿಳಿಸಿದರು. ಆದರೆ ಬೋರೇಗೌಡ ತನ್ನದೊಂದು ಎತ್ತು ಸತ್ತುಹೋದುದನ್ನು ನೊಂದುಕೊಂಡು ಜ್ಞಾಪಿಸಿದ. "ಹಾಗಾದರೆ, ನಾವು ಮೊನ್ನೆ ಕೊಂಡಿರುವ ಹೋರಿಗಳನ್ನೇ ಕಟ್ಟಿಕೊಂಡು ಹೋಗಪ್ಪ. ಸ್ವಲ್ಪ ಎಚ್ಚರಿಕೆಯಿಂದ ಹೋಗಬೇಕು. ಪೇಟೆ

ಯಿಂದ ಸ್ಟೇಷನ್ಗೆ ಹೋಗುವ ರಸ್ತೆಯಲ್ಲಿ ಮೋಟಾರ್ ಗಾಡಿ ಮುಂತಾದ್ದು ಬಂದರೆ ಬೆದರಬಹುದು. ನೀನಾದ್ದರಿಂದ ಪರವಾ ಇಲ್ಲ. ಇನ್ನಾರಾದರೂ ಆಗಿದ್ದರೆ ಆ ಹೋರಿಗಳನ್ನು ಮನೆಬಿಟ್ಟು ಆಚೆ ಕಳುಹಿಸುತ್ತಿರಲಿಲ್ಲ" ಎಂದರು. ಬೋರೇಗೌಡ ಹೋರಿಗಳನ್ನು ತನ್ನ ಮನೆಗೆ ಹೊಡೆದುಕೊಂಡು ಬಂದು ತನ್ನ ಎತ್ತುಗಳ ಘಂಟೆ ಸರಗಳನ್ನು ಅವುಗಳ ಕೊರಳಿಗೆ ಕಟ್ಟಿ ಬಂಡಿ ಹೂಡಿಕೊಂಡು ಹೊರಟ. ಆ ದಿನ ಆಶ್ರಮದ ಪಾಠಶಾಲೆಗೆ ರಜವಾದ್ದರಿಂದ ಮನೆಯಲ್ಲಿದ್ದ ಅವನ ಮಗ ಎಲ್ಲಿಗೆ ಹೊರಟಿರುವುದೆಂದು ತಂದೆಯನ್ನು ಕೇಳಿದ. ರೈಲು ಸ್ಟೇಷನ್ಗೆ ಎಂದು ತಿಳಿದ ಮೇಲೆ ರೈಲು ಗಾಡಿಯನ್ನು ಹತ್ತಿರದಿಂದ ನೋಡಬೇಕೆಂಬ ಕುತೂಹಲದಿಂದ ತಾನೂ ಬರುವುದಾಗಿ ಹೇಳಿ ತಂದೆಯೊಡನೆ ಹುಡುಗನೂ ಹೊರಟ.

ಇವರು ಹೋದ ಸ್ವಲ್ಪ ಹೊತ್ತಿನಲ್ಲಿಯೇ ರೈಲುಗಾಡಿ ಬಂತು. ಕೃಷ್ಣ ಮೂರ್ತಿ ಗಾಡಿಯಿಂದಿಳಿದು ಸುತ್ತಲೂ ನೋಡಿದ. ಮರದ ದೆಬ್ಬೆಗಳಿಂದ ಮಾಡಿದ ಕಟಕಟೆಯ ಹೊರಗೆ ನಿಂತು ರೈಲುಗಾಡಿ ಕಡೆ ನೋಡುತ್ತಿದ್ದ ಬೋರೇಗೌಡನನ್ನು ಗುರ್ತಿಸಿ ಕೂಗಿ, "ಏನು ಬೋರೇಗೌಡ, ಊರಿಂದ ಗಾಡಿ ಬಂದಿದೆಯೇ" ಎಂದು ಕೇಳಿದ. "ನಾನೇ ಒಡಕೊಂಡು ಬಂದಿದ್ದೇನಿ ಕಾಣಪ್ಪ" ಎನ್ನುತ್ತಾ ಬೋರೇಗೌಡ ಕೃಷ್ಣಮೂರ್ತಿಯ ಸಂಜ್ಞೆಯಂತೆ ಒಳಗೆ ಹೋಗಿ ಅವನ ಹಾಸಿಗೆಯನ್ನೂ ಟ್ರಂಕನ್ನೂ ಬುಟ್ಟಿಯನ್ನೂ ಎತ್ತಿ ಕೊಂಡು ಬಂದು ಬಂಡಿಯಲ್ಲಿಟ್ಟ. ಅವನ ಮಗ ರೈಲುಗಾಡಿ ಹೊರಡುವ ವರೆಗೂ ಉತ್ಸುಕತೆಯಿಂದ ಅದನ್ನೇ ನೋಡುತ್ತಾ ನಿಂತಿದ್ದು ಆ ಮೇಲೆ ತಮ್ಮ ಗಾಡಿ ಹತ್ತಿರಬಂದ. ಬೋರೇಗೌಡ ಕೃಷ್ಣಮೂರ್ತಿಯನ್ನೂ ತನ್ನ ಮಗನನ್ನೂ ಬಂಡಿಯಲ್ಲಿ ಕೂರಿಸಿಕೊಂಡು ಹೊರಟ. ಕೃಷ್ಣಮೂರ್ತಿ ಹೋರಿಗಳ ಕಡೆ ನೋಡಿ—"ಏನು, ಬೋರೇಗೌಡ, ಒಳ್ಳೇ ಹೋರಿಗಳನ್ನು ತಂದಿದ್ದೀಯ. ಬಂಡಿ ಎತ್ತು ಇಡೋದರಲ್ಲಿ ನೀನು ನಿಸ್ಸೀಮ. ಎಷ್ಟು ಬಿತ್ತು ಹೋರಿಗಳಿಗೆ" ಎಂದ. ಬೋರೇಗೌಡ—"ಇವು ನನ್ನೋವಲ್ಲ, ಕಿಟ್ಟಪ್ಪ. ನಿಮ್ಮ ತಾತನೋರು ಮೊನ್ನೆ ತಾನೆ ಮುನ್ನೂರು ರೂಪಾಯಿಗೆ ಕೊಂಡರು.

ಕೃಷ್ಣ—ನಿನ್ನ ಎತ್ತುಗಳನ್ನ ಏಕೆ ಕಟ್ಟಿಕೊಂಡು ಬರಲಿಲ್ಲ?

ಬೋರೇಗೌಡ—ನಮ್ಮದು ಒಂದು ಎತ್ತು ಚಪ್ಪೆರೋಗ ಬಂದು ಸತ್ತೋಯ್ತು. ಅದರಿಂದ ನಿಮ್ಮೋವೇ ಕಟ್ಟಿಕೊಂಡು ಬಂದೆ.

ಕೃಷ್ಣ—ಅಯ್ಯೋ ಪಾಪ. ಮುಂದೇನು ಮಾಡ್ತೀಯೆ?

ಬೋರೆ—ಮನೇಲಿ ದೊಡ್ಡ ಸ ಗಬ್ಬಾಗೈತೆ. ಇನ್ನೊತ್ತೋ ನಾಳೆಯೋ ಈಯ್ತದೆ. ಮಾಗಡಿ ಪರ್ಸೇಲಿ ಆ ಅಸಕರ ಅದರ ಜೊತೆಗೆ ಮನೇಲಿರೊ ಹೋರಿಗರ ಎಲ್ಲಾ ಮಾರಿ ಒಂದು ಎತ್ತು ಕೊಂಡುಕೊಂಡು ಬರಬೇಕು ಅಂತ ಇದ್ದೀನಿ.

ಕೃಷ್ಣ—ಅದರೊಳಗಾಗಿಯೇ ಮುಂಗಾರು ಮಳೆ ಬಂದರೆ ಉಳೋಕೆ ಏನ್ಮಾಡ್ತೀಯೆ?

ಬೋರೆ—ಏನ್ಮಾಡಲಿ? ಪರ್ಸೆ ಆಗೋವರೆಗೂ ಉಳೋ ಹಂಗಿಲ್ಲ.

ಕೃಷ್ಣ—ನೀನೇನೂ ಯೋಚನೆಮಾಡಬೇಡ, ಬೋರೆಗೌಡ. ಕರೆಯೊ ಹಸು ಮಾರಬೇಡ. ಅದು ಒಳ್ಳೇ ಕರುಗಳು ಕೊಡೊ ತಳಿ ಅಂತ ನೀನೇ ಹೇಳ್ತಿದ್ದೆ. ಹಾಗೇನಾದರೂ ಮುಂಗಾರು ಮಳೆ ಮೊದಲೇ ಪ್ರಾರಂಭವಾದರೆ ನಮ್ಮ ತಾತನವರಿಗೆ ಹೇಳಿ ನಮ್ಮ ಮನೇ ಪೈಕಿ ಯಾವುದಾದರೂ ಒಂದು ಉಳೋ ಎತ್ತು ಕೊಡಿಸ್ತೇನೆ. ಬೇಸಿಗೆ ರಜದಲ್ಲಿ ಊರಲ್ಲೆ ಇರ್ತೇನೆ. ಸದ್ಯಕ್ಕೆ ಈ ವರ್ಷ ಹೇಗಾದರೂ ಕೆಲ್ಸ ತೂಗಿಸಿಬಿಡು. ಮುಂದಿನ ವರ್ಷ ನೋಡಿಕೊಳ್ಳೋಣ. ಆಗ್ಗೆ ನಿನ್ನ ಹೋರಿಗರೂಗೆ ಒಳ್ಳೇ ಬೆಲೆ ಬರುತ್ತೆ.

ಬೋರೆ—ಆಗಲಿ ನಮ್ಮಪ್ಪ. ತಣ್ಣಗೆ ಬದುಕು. ತಾತನಂತ ಮಮ್ಮಗ. ಈ ಉಪಕಾರ ನಾನೆಂದಿಗೆ ತೀರಿಸಲಿ. ಆಸ ಈದ ಮೇಲೆ ನಿಮ್ಮ ಮನೇಲಿ ಕಟ್ತೇನಿ. ಚನ್ನಾಗಿ ಆಲು ತುಪ್ಪ ತಿನ್ನಿ.

ಕೃಷ್ಣ—ಏನೂ ಬೇಡ. ನಮ್ಮನೇಲಿ ಕರಾವಿಗೇನೂ ಕಮ್ಮಿ ಇಲ್ಲ. ನೀನು ನಮ್ಮ ಮನೇಲಿ ಎಷ್ಟೋ ಕೆಲಸಮಾಡಿದ್ದೀಯೆ. ಅಷ್ಟೇ ಸಾಕು ಅದಿರ್ಲಿ, ಇದೇನು ಮಗನನ್ನೂ ಕರಕೊಂಡು ಬಂದಿದ್ದೆ?

ಬೋರೆ—ಏನೋ ರೈಲ್‌ಗಾಡಿ ನೋಡಬೇಕೂ ಅಂದ. ಕರಕೊಂಡು ಬಂದೆ.

ಕೃಷ್ಣ—ಹುಡುಗನ್ನೇನು ಮಠಕ್ಕೆ ಕಳುಹಿಸುತ್ತಿದ್ದೀಯೋ ಅಥವಾ ದನಾ ಕಾಯೋಕೆ ಕಳುಹಿಸುತ್ತಿದ್ದೀಯೋ ?

ಬೋರೆ—ಮೊನ್ನೆ ದನಾ ಕಾಯೋಕೆ ಕಳಿಸಿದ್ದೆ. ಗುರುಗಳು ನನ್ನ ಕರೆಸಿ, 'ಇನ್ನೂ ಹುಡುಗ ಚಿಕ್ಕೋನು. ವುಸಾರಾಗವನೆ. ನಾಕುದಿನ ಓದ್ಲಿ' ಅಂದರು. ಅವರ ಮಾತು ಮೀರಲಾರದೆ ಪ್ಯಾಟೆ ಮಠಕ್ಕೆ ಕಳಿಸ್ತಾ ಇದ್ದೀನಿ.

ಕೃಷ್ಣ—ಒಳ್ಳೇಮಾತು. ಗುರುಗಳು ಸಾಕು ಅನ್ನೋವರೆಗೂ ಕಳುಹಿಸುತ್ತಿರು. ಅವರ ಮಾತು ಮೀರಬೇಡ.

ಹೀಗೆ ಅದೂ ಇದೂ ಮಾತನಾಡುತ್ತಾ ಗಾಡಿ ಊರ ಹತ್ತಿರಕ್ಕೆ ಬರುವ ವೇಳೆಗೆ ಸಾಯಂಕಾಲ ಸುಮಾರು ಐದು ಗಂಟೆಯಾಗಿತ್ತು. ಅಷ್ಟು ಹೊತ್ತಿಗೆ ಕರಣಿಕರು ಒಂದು ಬಾರಿ ಊರ ಹೊರಗೆ ಬಂದು ಪೇಟೆ ಕಡೆ ಯಿಂದ ಇನ್ನೂ ಗಾಡಿ ಬರದಿದ್ದುದನ್ನು ಕಂಡು ನಿರುತ್ಸಾಹದಿಂದ ಬಂದು ಮನೆಯ ಮುಂದಿನ ಜಗುಲಿಯ ಮೇಲೆ ಕುಳಿತಿದ್ದರು. ಕೆಲಸವಿಲ್ಲದೆ ಅವರು ಹಾಗೆ ಜಗುಲಿಯ ಮೇಲೆ ಒಬ್ಬರೇ ಕುಳಿತಿರುವುದೆಂದರೆ ಎಲ್ಲರಿಗೂ ಆಶ್ಚರ್ಯ. ಆದರಿಂದಲೇ ಅವರು ಕೃಷ್ಣಮೂರ್ತಿಯ ಆಗಮನವನ್ನು ನಿರೀಕ್ಷಿಸುತ್ತಿರಬಹುದೆಂದು ಕೆಲವರ ಊಹೆ. ಕೃಷ್ಣಮೂರ್ತಿಯು ವ್ಯಾಸಂಗ ಕ್ಕಾಗಿ ಬೆಂಗಳೂರಿಗೆ ಹೋದುದು ಯಾವುದೋ ದೂರದೇಶಕ್ಕೆ ಹೋದಂತೆ ಕೆಲವರ ಭಾವನೆ. ಅವನು ಓದುತ್ತಿರುವುದೂ ಅಷ್ಟೇ ಹೆಚ್ಚಿನ ದರ್ಜೆಯ ವಿದ್ಯೆವೆಂದು ತಿಳಿದಿದ್ದರು. ಏಕೆಂದರೆ ಪ್ರೌಢಶಿಕ್ಷಣಕ್ಕಾಗಿ ಅಲ್ಲಿಂದ ಪರಸ್ಥಳಕ್ಕೆ ಹೋದವರಲ್ಲಿ ಕೃಷ್ಣಮೂರ್ತಿಯೇ ಮೊದಲನೆಯವನು. ಕ್ರಿಸ್‌ಮಸ್ ರಜ ಪೂರೈಸಿಕ್ಕೊಂಡು ಊರಿಂದ ಹೋದವನು ಮಧ್ಯೆ ಒಂದು ಬಾರಿಯೂ ಊರಿಗೆ ಬಂದಿರಲಿಲ್ಲ. ಆದ್ದರಿಂದ ಕರಣಿಕರು ಅವನ ಆಗಮನ ವಿಚಾರ

ದಲ್ಲಿ ಅಷ್ಟು ಉತ್ಸಾಹದಿಂದಿದ್ದರು. ದೂರದಿಂದಲೇ ಹೋರಿಗಳಿಗೆ ಕಟ್ಟಿದ್ದ ಗಂಟೆ ಶಬ್ದವನ್ನು ಕೇಳಿ ಪುನಃ ಊರಹೊರಗೆ ಬಂದರು. ಗಾಡಿಯು ಬರುತ್ತಿತ್ತು. ಅದು ಊರ ಬಾಗಿಲಿಗೆ ಬಂದೊಡನೆಯೇ ಗಾಡಿಯೊಳಗಿದ್ದ ಕೃಷ್ಣಮೂರ್ತಿಯನ್ನು ನೋಡಲು ಹುಡುಗರೆಲ್ಲರೂ ಗಾಡಿಯನ್ನು ಹಿಂಬಾಲಿಸುತ್ತಾ ಹೊರಟರು. ಅದು ಕರಣಿಕರ ಮನೆ ಮುಂದೆ ನಿಂತಿತು. ಕರಣಿಕರು ತರಕಾರಿ ಬುಟ್ಟಿಯನ್ನು ತಾವೇ ಕೈಗೆ ತೆಗೆದುಕೊಂಡರು. ನೆರೆಹೊರೆಯ ಹೆಂಗಸರು ಕೃಷ್ಣಮೂರ್ತಿ ಗಾಡಿಯಿಂದಿಳಿದು ಒಳಗೆ ಹೋಗುವವರೆಗೂ ಅವನನ್ನೇ ನೋಡುತ್ತಿದ್ದರು. ಅವನ ಹಾಸಿಗೆಯನ್ನೂ ಟ್ರಂಕನ್ನೂ ಒಳಕ್ಕೆ ಕೊಟ್ಟು ಬೋರೆಗೌಡ ಗಾಡಿಯನ್ನು ತನ್ನ ಮನೆ ಕಡೆ ತಿರುಗಿಸಿದ. ಅಷ್ಟು ಹೊತ್ತಿಗೆ ಪುರೋಹಿತರೂ ಅಲ್ಲಿಗೆ ಬಂದು ಕೃಷ್ಣಮೂರ್ತಿಯ ಯೋಗಕ್ಷೇಮವನ್ನೂ ಅವನು ಪರೀಕ್ಷೆಯಲ್ಲಿ ಹೇಗೆ ಮಾಡಿದ್ದಾನೆಂದೂ ವಿಚಾರಿಸಿದರು.

ಇದೆಲ್ಲವನ್ನೂ ಉತ್ಸುಕತೆಯಿಂದ ನೋಡುತ್ತಿದ್ದ ಬೋರೆಗೌಡನ ಮಗ ಮರಿಗೌಡನಿಗೆ ಕೃಷ್ಣಮೂರ್ತಿಯ ವಿಚಾರದಲ್ಲಿ ಸಂತೋಷವು ಮಾತ್ರವಲ್ಲದೆ ಗೌರವವೂ ಉಂಟಾಯಿತು. ಮಕ್ಕಳ ಸ್ವಭಾವಜನ್ಯವಾದ ಆಸೆಗನುಗುಣವಾಗಿ ತಾನೂ ಕೃಷ್ಣಮೂರ್ತಿಯಂತೆಯೇ ಓದಿ ಎಲ್ಲರ ಪ್ರೀತ್ಯಾದರಗಳಿಗೂ ಪಾತ್ರನಾಗಬೇಕೆಂದು ಬಯಸಿದ. ಅಂದಿನಿಂದ ಕೃಷ್ಣಮೂರ್ತಿಯನ್ನೇ ತನ್ನ ಭಾಗದ ಆದರ್ಶವ್ಯಕ್ತಿಯನ್ನಾಗಿ ಭಾವಿಸಿದ.

೩. ವಿದ್ಯಾದಾಹ.

ಕೃಷ್ಣಮೂರ್ತಿ ಯೂನಿವರ್ಸಿಟಿ ಎಂಟ್ರೆನ್ಸ್ ಪರೀಕ್ಷೆ ಪೂರೈಸಿಕೊಂಡು ಊರಿಗೆ ಬಂದಿದ್ದ. ಬೇಸಿಗೆ ರಜ ಮುಗಿಯುವುದರೊಳಗಾಗಿ ಫಲಿತಾಂಶವು ಬಂತು. ಅದು ಸ್ವಲ್ಪ ಕಷ್ಟವಾದ ಪರೀಕ್ಷೆಯೆಂದು ಕರಣಿಕರು ಕೇಳಿದ್ದರು. ಕೃಷ್ಣಮೂರ್ತಿ ಪರೀಕ್ಷೆಯಲ್ಲಿ ತೇರ್ಗಡೆಯಾದುದನ್ನು ತಿಳಿದು ತಮ್ಮ ಸಂತೋಷವನ್ನು ವ್ಯಕ್ತಪಡಿಸಲು ಮನೆಯಲ್ಲಿ ಒಂದು ಔತಣವನ್ನು ಏರ್ಪಡಿಸಿದರು. ತಮಗೆ ಆಪ್ತರಾದವರನ್ನೆಲ್ಲಾ ಔತಣಕ್ಕೆ ಬರಹೇಳಿದ್ದರು. ಪಟೇಲ್ ತಿಮ್ಮೆಗೌಡರೂ ಬಂದಿದ್ದರು. ಭೋಜನಾನಂತರ ತಾಂಬೂಲವನ್ನು ಹಾಕಿಕೊಂಡು ಪಟೇಲರು ಮಹಡಿಯ ಮೇಲಿನಿಂದ ಕೆಳಕ್ಕೆ ಇಳಿದುಬಂದರು. ಅಷ್ಟುಹೊತ್ತಿಗೆ ಸರಿಯಾಗಿ ಬೋರೆಗೌಡ ಕರಣಿಕರ ಮನೆಬಾಗಿಲಿಗೆ ಬಂದ. ಅವನನ್ನು ನೋಡಿ ಕರಣಿಕರು, "ಇಷ್ಟು ಹೊತ್ತು ಎಲ್ಲಿ ಹೋಗಿದ್ದೆ? ಇಲ್ಲಿಗೇ ಊಟಕ್ಕೆ ಬರಬೇಕೆಂದು ಆಗಲೇ ಹೇಳಿಕಳುಹಿಸಿದ್ದೆ" ಎಂದರು. "ನಾನು ಮನೇಲಿರ್ಲಿಲ್ಲ ಕಾಣ್ರಪ್ಪ. ಗ:ರುಗಳು ಯೇಳಿಕಳಿಸಿದ್ರು. ಏನೋ ಮಾತಾಡ್ತಾ ಇದ್ರು. ಅದಕ್ಕೆ ವಸಿ ವೊತ್ತಾಯ್ತು. ಗೌಡರನ್ನು ನೋಡಬೇಕು ಅಂತಿದ್ದೆ. ಅವರೂ ಇಲ್ಲೇ ಸಿಕ್ಕಿದರು" ಎಂದು ಹೇಳುತ್ತಿದ್ದ ಹಾಗೆಯೇ ಕರಣಿಕರ ಹೆಂಡತಿ ಒಂದು ದೊಡ್ಡ ತಟ್ಟೆಯ ತುಂಬ ಭಕ್ಷ್ಯಗಳನ್ನು ತಂದು ಬೋರೆಗೌಡನ ಮುಂದಿಟ್ಟರು. ಮೇಲೆ ಮುಚ್ಚಿದ್ದ ಬಾಳೆ ಎಲೆಯನ್ನು ಎತ್ತಿನೋಡಿ, 'ಇದೇನು ದೇವ್ರ ಇವತ್ತು ಅಬ್ಬ' ಎಂದು ಬೋರೆಗೌಡ ಕೇಳಿದ.

ಕರಣಿಕರು—ನಮ್ಮ ಕಿಟ್ಟು ಪರೀಕ್ಷೆಗೆ ಕಟ್ಟಿದ್ದ, ಪಾಸಾಯ್ತು. ಅದಕ್ಕಾಗಿ ಈ ದಿನ ಹಬ್ಬ ಮಾಡಿಸಿದ್ದೆ.

ಬೋರೆ—ಅಂಗಾದ್ರೆ ಕಿಟ್ಟಪ್ಪನೋರ ಓದೆಲ್ಲಾ ಪೂರೈಸಿತರಾ?

ಕರಣಿಕರು—ಇನ್ನೂ ಪೂರೈಸಲಿಲ್ಲ. ಮುಂದಕ್ಕೆ ಬಿ. ಎ. ಓದಬೇಕು.

ಬೋರೆ—ಆಗ್ಲಿ, ನಮ್ಮಪ್ಪ. ಇನ್ನಾ ಓದ್ಲಿ. ದೊಡ್ಡ ಕೆಲಸಕ್ಕೆ ಬರ್ಲಿ. ನಮ್ಮೂರಿಗೆಲ್ಲಾ ಕಳಸ ಇದ್ದಂಗೆ ಇರ್ಲಿ. ಓದ್ಸಿ ನಮ್ಮಪ್ಪ. ದೇವರು ನಿಮ ಗೇನು ಕಮ್ಮಿ ಮಾಡವನೆ?

ಕರಣಿಕರು—ಅದಿರಲಿ. ಪಟೇಲರನ್ನು ನೋಡಬೇಕು ಅಂದೆಯಲ್ಲ. ಏನು ಸಮಾಚಾರ?

ಬೋರೆ—ಏನೂ ಇಲ್ಲ ದೇವ್ರು. ಅದೇನೋ ನಮ್ಮುಡಗನೂ ಪರೀ ಕ್ಸೆಗೆ ಕಟ್ಟಿದ್ದನಂತೆ. ಈ ನಾಲ್ಕು ವರ್ಸದಿಂದ ಪ್ಯಾಟೆ ಸ್ಕೂಲಿಗೆ ವೋಗ್ತಿದ್ದ. ಅದೇನೋ. ಪ್ಯಾಸಾಯ್ತಂತೆ. ಮುಂದಕ್ಕೆ ವೋದ್ಸು ಅಂತ ಗುರುಗಳು ಯೇಳಿದರು. ನನ್ನ ಕೈಯಲ್ಲಿ ದುಡ್ಡಿಲ್ಲ ಅಂದೆ. ಸದ್ದೀಕೆ ಇಪ್ಪತ್ತೈದು ರೂಪಾಯಿ ಕೊಟ್ಟು ಕಳ್ಸು. ಆಮೇಲೆ ಎಲ್ಲಾ ಅನುಕೂಲವಾಗ್ತದೆ, ಅಂದ್ರು. ಅದೂ ನನ್ನತ್ರ ಇಲ್ಲ ಅಂದೆ. ಪಟೇಲರಿಂದ ಸಾಲಾ ತಕೊಂಡು ಕೊಡು. ನಿದಾನವಾಗಿ ಸಾಲಾ ತೀರ್ಸ್ಬೋವಂತೆ ಅಂದ್ರು. ಅದಕ್ಕೆ ಪಟೇಲ ರನ್ನ ಕಾಣನಾ ಅಂತಿದ್ದೆ.

ಕರಣಿಕರು—ಓಹೋ, ನಿನ್ನ ಮಗನಿಗೂ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಪಾಸಾಯ್ತೋ, ಬಹಳ ಸಂತೋಷ. ಗುರುಗಳ ಮಾತಿನಂತೆ ಮುಂದಕ್ಕೆ ಕಳುಹಿಸು. ನಿಮ್ಮ ಹುಡುಗರಿಗೆ ಸರ್ಕಾರದೋರೂ ಸಹಾಯ ಮಾಡ್ತಾರೆ.

"ಪಟೇಲರ ದಯ ಬಂದ್ರೆ ಕಳಿಸಿಬಿಡ್ತೀನಿ."—

ಎಂದು ಪಟೇಲರ ಕಡೆ ನೋಡಿದ. ಪಟೇಲರು 'ಮನೆಹತ್ತಿರ ಬಾ, ನೋಡೋಣ' ಎಂದು ತಮ್ಮ ಮನೆಕಡೆ ಹೊರಟರು. ಬೋರೆಗೌಡ ತಿಂಡಿ ತಟ್ಟೆಯನ್ನು ಹೊತ್ತುಕೊಂಡು ಹಿಂದೆಯೇ ಹೊರಟ.

ಪಟೇಲರು ಮನೆಯೊಳಗೆ ಹೊರಟುಹೋದರು. ಬೋರೆಗೌಡ ಹೊರ ಗಡೆಯೇ ಕಾದು ನಿಂತಿದ್ದ. ಬಹಳ ಹೊತ್ತಾದ ಮೇಲೆ ತಿಮ್ಮೆಗೌಡರು ಹೊರಗೆ ಬಂದು "ಎಷ್ಟು ಬೇಕಾಗಿತ್ತು ಹಣ?" ಎಂದರು.

ಬೋರೆ—ಎಷ್ಟೂ ಇಲ್ಲ, ಗೌಡ್ನೋರೆ, ಇಪ್ಪತ್ತೈದೇ ರೂಪಾಯಿ.

ತಿಮ್ಮೆಗೌಡ—ಬಡ್ಡಿದರ ಗೊತ್ತೊ ?

ಬೋರೆ—ನಂಗೊತ್ತಿಲ್ಲ ಗೌಡ್ನೋರೆ. ಇಲ್ಲೀತನಕ ನಾನೆಲ್ಲೂ ಸಾಲಾ ಮಾಡಿದೋನೇ ಅಲ್ಲ. ನಿಮಗೆ ಗೊತ್ತಿಲ್ಲವರಾ ? ಅಂಗೇನಾದ್ರೂ ಚಿಲ್ರೆ ಬೇಕಾಗಿದ್ರೆ ಕರಣಿಕರ ಅತ್ರ ಇಸ್ಕೊಂಡಿದ್ದೆ.

ತಿಮ್ಮ—ಆ ಮಾತು ಬೇರೆ, ಅದಿರಲಿ. ಈಗ ನನ್ನ ಹತ್ತಿರ ಇಪ್ಪತ್ತೈದು ರೂಪಾಯಿ ತೊಕೊಂಡ್ರೆ ಬರೋ ಸುಗ್ಗೀಗೆ ನಫೆ ಒಂದು ಪಲ್ಲ ರಾಗಿ ಮತ್ತು ಅಸಲು ತಂದುಕೊಡಬೇಕು. ಹಾಗಿದ್ದರೆ ಪೇಟೆಗೆ ಹೋಗಿ ಛಾಪಾ ಕಾಗದ ತೊಕೊಂಡುಬಂದು ಹೊಲ ಆಧಾರಮಾಡಿ ಪತ್ರ ಬರಕೊಡು. ಇನ್ನೂ ಇಪ್ಪತ್ತೈದು ರೂಪಾಯಿ ಬೇಕಾಗಿದ್ರೂ ಕೊಡುತ್ತೇನೆ.

ಬೋರೆ—ಅಷ್ಟುದೂರ ವೋಗಬ್ಯಾಡ್ರಿ ಗೌಡ್ನೋರೆ. ಸುಗ್ಗಿತನಕ ಹಣ ನಿಲ್ಸೋದಿಲ್ಲ. ನಾಳೆ ಸುಗ್ಗನಹಳ್ಳಿ ಪರ್ಸೇಲಿ ಮನೇಲಿರೊ ವೋರಿಗರ ಮಾರಿ ನಿಮ್ಮ ರೂಪಾಯಿ ಕೊಡ್ತೀನಿ. ಇದಕ್ಕೆಲ್ಲಾ ಪತ್ರ ಯಾಕೆ ಗೌಡ್ನೋರೆ? ತಳಮನೆ ವೊಳಗಿದ್ದುಕೊಂಡು ಅಷ್ಟು ಕಾತ್ರಿ ಇಲ್ಲವರಾ? ನಾನೆಂದಾದರೂ ನಾಲ್ಗೆ ತಪ್ಪಿದ್ದು ಕಂಡಿದ್ದೀರಾ? ಮೊನ್ನೆ ಕರಣೀಕರು ಕೊಟ್ಟಿದ್ದ ನನ್ನ ಕಂದಾಯದ ದುಡ್ಡು ಒಂದು ವೋತಮರಿ ಮಾರಿ ಅವತ್ತೇ ಕೊಟ್ಟುಬಿಟ್ಟೆ. ಕೇಳ್ರಿ ಅವರ್ನೆ.

ತಿಮ್ಮ—(ಸ್ವಲ್ಪ ಯೋಚಿಸಿ) ಈಗ ಹಣ ಯಾವುದೂ ನನ್ನ ಕೈಲಿಲ್ಲ. ಯಾವುದಾದರೂ ಬಾಕಿ ಬಂದರೆ ನೋಡೋಣ. ಅಂತು ನನ್ನೇ ನಂಬಿ ಕೊಂಡಿರಬೇಡ.

ಎಂದು ಹೇಳಿ ಮನೆಯೊಳಕ್ಕೆ ಹೊರಟೇಹೋದರು. ಬೋರೆಗೌಡ ನಿರುತ್ಸಾಹಿಯಾಗಿ ಮನೆಗೆ ಬಂದ.

ಕೃಷ್ಣಮೂರ್ತಿಯು ಮುಂದಿನ ವ್ಯಾಸಂಗಕ್ಕಾಗಿ ಕರಣಿಕರು ಏರ್ಪಾಟು ಗಳನ್ನು ಮಾಡಬೇಕಾಗಿತ್ತು. ಆವರೆಗೆ ಅವನ ಊಟೋಪಚಾರಗಳಿಗೆ ಅನುಕೂಲರಾಗಿದ್ದ ನಂಟರು ಬೆಂಗಳೂರಿಂದ ವರ್ಗಪಟ್ಟು ಹೊರಟುಹೋಗಿ

ದ್ದರು. ಬೇರೆ ಮಾರ್ಗವಿಲ್ಲದೆ ಕೃಷ್ಣಮೂರ್ತಿ ಕಾಲೇಜ್ ಹಾಸ್ಟೆಲ್‌ನಲ್ಲಿಯೇ ಇರಬೇಕಾಗಿ ಬಂತು, ಫೀಸ್, ಪುಸ್ತಕ, ಬಟ್ಟೆ ಇವುಗಳೆಲ್ಲಕ್ಕೂ ಸೇರಿ ಸರಾಸರಿ ತಿಂಗಳಿಗೆ ಐವತ್ತು ರೂಪಾಯಿವರೆಗೂ ಖರ್ಚು. ಕರಣಿಕರ ಮನೆಯಲ್ಲಿ ಸಂಪಾದಿಸುವವರು ಒಬ್ಬರಾದರೂ ತಿನ್ನುವವರು ಮನೆತುಂಬ ಇದ್ದರು. ದೂರದ ಸಂಬಂಧಿಗಳು ಕೆಲವರು ಅವರಿಗೆ ಹೊರೆಯಾಗಿದ್ದರು. ಇದರ ಮೇಲೆ ಮನೆಗೆ ಬಂದು ಹೋಗತಕ್ಕ ಅತಿಥಿ ಅಭ್ಯಾಗತರು ಬಹಳ. ಆದ್ದರಿಂದ ಮನೆಗೆ ಬಂದ ದವಸ ಧಾನ್ಯಗಳಲ್ಲಿ ಒಂದು ಕಾಳನ್ನೂ ಮಾರುತ್ತಿರಲಿಲ್ಲ. ಪೋಟಿಗೆ ಹಣವು ಮನೆ ಚಿಲ್ಲರೇ ಖರ್ಚಿಗೇ ಸಾಲದಾಗಿತ್ತು. ಹೀಗಾಗಿ ಕೃಷ್ಣಮೂರ್ತಿಯ ಕಾಲೇಜ್ ವಿದ್ಯಾಭ್ಯಾಸಕ್ಕೆ ಸಾಲವನ್ನೇ ಮಾಡಬೇಕಾಯಿತು.

ಆ ದಿನ ಸಾಯಂಕಾಲ ಕರಣಿಕರು ಗುರುಗಳೊಡನೆ ಮೊಮ್ಮಗನ ಮುಂದಿನ ವಿದ್ಯಾಭ್ಯಾಸದ ವಿಚಾರವನ್ನು ಆಲೋಚಿಸಲು ಹೋದರು. ಆ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬಂದಮೇಲೆ, ಎಂದಿನಂತೆ ಯಾವ ಯಾವುದೋ ಪಾರಮಾರ್ಥಿಕ ವಿಚಾರಗಳನ್ನು ಮಾತನಾಡುತ್ತಿರುವಾಗ ಮಧ್ಯೆ ಗುರುಗಳು, "ಈ ಊರಲ್ಲಿ ನೀವು ಅಷ್ಟು ವಿಜೃಂಭಣೆಯಿಂದ ನಡೆಸುತ್ತಿದ್ದ ರಾಮೋತ್ಸವವು ನಿಂತು ಎಷ್ಟು ವರ್ಷಗಳಾದುವು?" ಎಂದರು. ಕರಣಿಕರಿಗೆ ಆಶ್ಚರ್ಯವಾಯಿತು. ಅನೇಕ ವರ್ಷಗಳಿಂದಲೂ ಅವರ ಮನೆಯಲ್ಲಿ ರಾಮೋತ್ಸವವನ್ನು ನಡೆಸುತ್ತಿದ್ದುದೂ, ಆ ಸಂದರ್ಭದಲ್ಲಿ ಹರಿಕಥೆ, ಪುರಾಣಶ್ರವಣ, ಭಾರತ ಪಠನ, ಸಂಗೀತ ಮುಂತಾದುವು ಹತ್ತು ದಿನಗಳ ವರೆಗೂ ನಡೆಯುತ್ತಿದ್ದುದೂ ಸುತ್ತಮುತ್ತಲಿನ ಅನೇಕ ಗ್ರಾಮದವರು ಬಂದು ಭಾಗವಹಿಸುತ್ತಿದ್ದುದೂ ಕಡೆ ದಿನದ ಸಮಾರಾಧನೆಗೆ ಪಕ್ಕದ ಪೇಟೆಯಿಂದ ವರ್ತಕರೂ ಸರ್ಕಾರಿ ನೌಕರರೂ ಬೆಂಗಳೂರಿಂದಲೂ ಕೂಡ ಕೆಲವರು ಬರುತ್ತಿದ್ದುದೂ, ಮಗನ ಮರಣಾನಂತರ ಅಂಥಾ ಸಮಾರಂಭವನ್ನು ದಕ್ಷತೆಯಿಂದ ನಿರ್ವಹಿಸಲು ಸಾಧ್ಯವಿಲ್ಲವೆ ಇತ್ತೀಚೆಗೆ ಉತ್ಸವವನ್ನು ನಿಲ್ಲಿಸಿದುದೂ ಎಲ್ಲವೂ ಒಂದೊಂದಾಗಿ ಜ್ಞಾಪಕಕ್ಕೆ ಬಂದು ಎವೆ

ಯಿಕ್ಕದೆ ಗುರುಗಳನ್ನು ಕ್ಷಣಕಾಲ ನೋಡಿ, "ಸ್ವಾಮಿ, ಉತ್ಸವ ವಿಚಾರ ತಮಗೆ ಹೇಗೆ ಗೊತ್ತು? ತಾವು ಯಾವಾಗಲಾದರೂ ನೋಡಿದ್ದಿರಾ?" ಎಂದರು. ಅದಕ್ಕೆ ಉತ್ತರವಾಗಿ ಗುರುಗಳು ತಾವು ಅಲ್ಲಿಗೆ ಯಾವಾಗ ಬಂದಿದ್ದರೆಂಬುದನ್ನೂ ಮತ್ತು ಕರಣಿಕರ ಅಭಿಲಾಷೆಯಂತೆ ಯಾವ ಸಂದರ್ಭದಲ್ಲಿ ಅಲ್ಲಿಗೆ ಬಂದಿದ್ದರೋ ಅದನ್ನೂ ಸಂಕ್ಷೇಪವಾಗಿ ಹೇಳಿದರು. ನೆಟ್ಟ ಮನಸ್ಸುಳ್ಳವರಾಗಿ ಎಲ್ಲವನ್ನೂ ಕೇಳುತ್ತಿದ್ದ ಕರಣಿಕರು ಒಮ್ಮೆ ನಿಟ್ಟುಸಿರನ್ನು ಬಿಟ್ಟು "ಏನಿದು ಭಗವಂತನ ಲೀಲೆ?" ಎಂದರು. ಗುರುಗಳು, "ಎಲ್ಲರೂ ಅವರವರ ಪಾತ್ರಗಳನ್ನು ಅಭಿನಯಿಸಿ ಹೊರಟು ಹೋಗಬೇಕು. ಮಾಯೆಗೊಳಪಟ್ಟು ನಾಟಕವನ್ನು ನಿಜವೆಂದು ಭಾವಿಸಿದಾಗ ಮಾತ್ರ ವ್ಯಾಮೋಹದಿಂದ ಪರಿತಪಿಸಬೇಕಾಗುವುದು. ಜೀವನದಲ್ಲುಂಟಾಗಬಹುದಾದ ದುರಂತ ವ್ಯಾಪಾರಗಳಿಗೆ ಅವರವರ ಪ್ರಾರಬ್ಧವು ಕಾರಣವೇ ಹೊರತು ಅದಕ್ಕಾಗಿ ದೇವರನ್ನು ಹೊಣೆ ಮಾಡಬಾರದು. ವಿವೇಚನಾಶಕ್ತಿಯಿಂದ ಸುಖದುಃಖಗಳೆರಡನ್ನೂ ಸಮಭಾವದಿಂದ ಅನುಭವಿಸುವ ಧೈರ್ಯವುಂಟಾದಾಗಲೇ ಮನಸ್ಸಿಗೆ ಶಾಂತತೆಯು ದೊರೆಯುವುದು." ಎಂದರು. ಅಂದಿನಿಂದ ಕರಣಿಕರಿಗೆ ಗುರುಗಳು ಎಂಥಹ ಜ್ಞಾನಿಯೆಂಬುದು ತಿಳಿದು ಅವರಲ್ಲಿ ಭಕ್ತಿಯು ಇಮ್ಮಡಿಸಿತು. ಒಬ್ಬರಿಗೊಬ್ಬರು ಜೀವದ ಗೆಳೆಯರಾಗಿ ಇಬ್ಬರ ಹೃದಯಗಳೂ ಒಂದಾದುವು.

ಹಿಂದಿರುಗಿ ಬರುವಾಗ ಕರಣಿಕರು ಬೋರೆಗೌಡನ ಮನೆ ಹತ್ತಿರ ಬಂದು ಅವನನ್ನು ಕೂಗಿದರು. ಬೋರೆಗೌಡನೂ ಅವನ ಮಗ ಮರಿಗೌಡನೂ ಹೊರಗೆ ಬಂದರು. "ಪಟೇಲರು ರೂಪಾಯಿ ಕೊಟ್ಟರೇ?" ಎಂದು ಕರಣಿಕರು ಕೇಳಿದರು. ಬೋರೆಗೌಡ ನಡೆದ ಸಮಾಚಾರವನ್ನು ತಿಳಿಸಿದ. ಕರಣಿಕರು ಅವನ ಪಕ್ಕದಲ್ಲಿ ನಿಂತಿದ್ದ ಹುಡುಗನ ಕಡೆ ನೋಡಿದರು. ಸ್ವಲ್ಪ ಹಾಗೆಯೇ ಯೋಚಿಸಿ, "ಬೋರೆಗೌಡ, ನೀನು ಚಿಂತಿಸಬೇಡ. ಇಪ್ಪತ್ತೈದು ರೂಪಾಯಿ ನಾನು ಕೊಡುತ್ತೇನೆ. ಹುಡುಗನನ್ನು ಬೆಂಗಳೂರಿಗೆ ಕಳುಹಿಸುವ ಸಿದ್ಧತೆ ಮಾಡು. ಈ ಹುಡುಗನು ಮುಂದಕ್ಕೆ

ಓದುವ ವಿಚಾರದಲ್ಲಿ ಗುರುಗಳಿಗೆ ತುಂಬಾ ಆಸಕ್ತಿ ಇದೆ. ಅವನ ಅದೃಷ್ಟವು ಹೇಗಿದೆಯೋ ನೋಡೋಣ.'' ಎಂದರು. ಹುಡುಗನ ಮುಖವು ಆನಂದದಿಂದ ಅರಳಿತು. ಬೋರೆಗೌಡ, “ಬುದ್ಧಿ, ಮೊದಲಿಂದಲೂ ಕಾಪಾಡಿದ್ದೀರಿ, ಈಗಲೂ ಕಾಪಾಡ್ತೀರಿ. ನೀವೇ ನಮಗೆ ಅಪ್ಪರ. ನಿಮ್ಮ ಉಪಕಾರ ಏಳು ಜನ್ಮಕ್ಕೂ ತೀರಿಸಲಾರೆ. ಇನ್ನಾ ಸಾವಿರ ವರ್ಷ ಬದುಕು ನಮ್ಮಪ್ಪ” ಎಂದ. ಕರಣಿಕರು ಮನೆಗೆ ಬಂದರು.

ತನ್ನ ಗೃಹಕೃತ್ಯವನ್ನು ಅರಿತ ಕೃಷ್ಣಮೂರ್ತಿಯು ತನ್ನ ವ್ಯಾಸಂಗಕ್ಕಾಗಿ ತನ್ನ ತಾತ ಎಷ್ಟು ಕಷ್ಟಪಡುತ್ತಿರುವರೆಂಬುದನ್ನು ಯೋಚಿಸಿ ಯಾವ ದುಂದು ಖರ್ಚಿಗೂ ಅವಕಾಶ ಕೊಡುತ್ತಿರಲಿಲ್ಲ. ಆದಷ್ಟು ಜಾಗ್ರತೆ ತನ್ನ ವ್ಯಾಸಂಗವನ್ನು ಪೂರ್ಣಮಾಡಿ, ಕೈತುಂಬ ಸಂಪಾದಿಸಿ, ಋಣವನ್ನು ತೀರಿಸಿ ತಾತನ ಮನಸ್ಸಿಗೆ ನೆಮ್ಮದಿಯನ್ನುಂಟುಮಾಡಬೇಕೆಂಬ ಕುತೂಹಲದಿಂದ ನೆಟ್ಟಮನಸ್ಸುಳ್ಳವನಾಗಿ ವ್ಯಾಸಂಗ ಮಾಡುತ್ತಿದ್ದ. ಅವನ ಶ್ರಮಕ್ಕೆ ತಕ್ಕಂತೆ ಮೂರು ವರ್ಷಗಳಿಗೆ ಸರಿಯಾಗಿ ಬಿ.ಎ. ಪಾಸ್ ಮಾಡಿದ. ಆದರೂ ಅವನ ದಾಹವು ಇಂಗಲಿಲ್ಲ. ಎಲ್.ಎಲ್.ಬಿ. ಓದಿ ಲಾಯರಾಗಬೇಕೆಂದು ಆಶೆಪಟ್ಟ. ತಾತನಿಗೆ ಹೆಚ್ಚು ಶ್ರಮ ಕೊಡುವ ಇಷ್ಟವಿಲ್ಲದಿದ್ದರೂ ಓದಬೇಕೆಂಬ ಆಶೆಯು ಬಲವಾಗಿತ್ತು. ಸಮಯವರಿತು ತಾತನಲ್ಲಿಯೂ ಗುರುಗಳಲ್ಲಿಯೂ ಆಲೋಚಿಸಿದ. ಮೊಮ್ಮಗನ ಆಶೆಯು ಸಾಧುವೆಂದು ಭಾವಿಸಿ ಕರಣಿಕರು ಕೃಷ್ಣಮೂರ್ತಿಯನ್ನು ಬೊಂಬಾಯಿಗೆ ಕಳುಹಿಸಲು ತೀರ್ಮಾನಿಸಿದರು.

ಕೃಷ್ಣಮೂರ್ತಿಯು ವ್ಯಾಸಂಗಕ್ಕಾಗಿ ಅದುವರೆಗಾಗಲೇ ಒಂದೂವರೆ ಸಾವಿರ ರೂಪಾಯಿ ಮೇಲೆ ಸಾಲವಾಗಿತ್ತು. ಅದರ ಬಡ್ಡಿಯು ಬೆಳೆಯುತ್ತಿತ್ತು. ಪುನಃ ಪೇಟೆ ವರ್ತಕರಲ್ಲಿ ಸಾಲಮಾಡಲು ಇಷ್ಟವಿಲ್ಲದೆ ಕರಣಿಕರು ಪಟೇಲ್ ತಿಮ್ಮೆಗೌಡರೊಡನೆ ಆಲೋಚಿಸಿದರು. ಕರಣಿಕರ ಗೃಹಕೃತ್ಯವನ್ನು ಚನ್ನಾಗಿ ತಿಳಿದಿದ್ದ ತಿಮ್ಮೆಗೌಡರು ತಮ್ಮ ಹಣಕ್ಕೆ ಅಪಾಯವಿಲ್ಲವೆಂಬುದನ್ನು ಮೊದಲೇ ಯೋಚಿಸಿ ತಕ್ಷಣಕ್ಕೆ ಐನೂರು ರೂಪಾಯಿ

ಕೊಡಲೊಪ್ಪಿದರು. ಕೃಷ್ಣಮೂರ್ತಿಯು ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಂಡು ಬೊಂಬಾಯಿಗೆ ಹೊರಟನು.

ಬೊಂಬಾಯಿ ನಮ್ಮ ದೇಶದ ನಗರಗಳಲ್ಲೆಲ್ಲಾ ದೊಡ್ಡದು. ಕೈಗಾರಿಕೆ ಸ್ಥಳ, ವ್ಯಾಪಾರಕೇಂದ್ರ. ಜನರ ಸರಾಸರಿ ಸಂಪಾದನೆಯೂ ಹೆಚ್ಚು ಅದಕ್ಕೆ ಸಮನಾದ ಖರ್ಚೂ ಇದೆ. ಒಬ್ಬ ಕೂತು ಮಲಗುವಷ್ಟು ಸ್ಥಳವಿರುವ ಕೋಣೆಯೊಂದಕ್ಕೆ ತಿಂಗಳಿಗೆ ಇಪ್ಪತ್ತು ರೂಪಾಯಿ ಬಾಡಿಗೆ ಕೊಡಬೇಕು. ಊಟ ತಿಂಡಿಗಳ ಖರ್ಚೂ ಹೆಚ್ಚು. ಲಾ ಕಾಲೇಜಿಗೆ ಕೊಡಬೇಕಾದ ಫೀಸ್, ಸಹವಾಸಕ್ಕೆ ತಕ್ಕ ಉಡುಪು, ಮುಂತಾದುವುಗಳ ಖರ್ಚೂ ಸೇರಿ ಕೃಷ್ಣಮೂರ್ತಿ ತೆಗೆದುಕೊಂಡುಹೋಗಿದ್ದ ಹಣವು ದೀಪಾವಳಿ ರಜ ಬರುವುದಕ್ಕೆ ಮುಂಚೆಯೇ ಮುಗಿದುಹೋಯಿತು. ಪ್ರಯಾಣದ ಖರ್ಚಿಗೆ ಸ್ನೇಹಿತರಲ್ಲಿ ಸಾಲ ಮಾಡಿಕೊಂಡು ಊರಿಗೆ ಬಂದ. ದೀಪಾವಳಿ ರಜಾ ಪೂರೈಸಿಕೊಂಡು ಪುನಃ ಹೊರಡುವಾಗ್ಗೆ ತಿಮ್ಮೇಗೌಡರಲ್ಲಿ ಮತ್ತೆ ಐನೂರು ರೂಪಾಯಿ ಸಾಲ ತೆಗೆದುಕೊಂಡು ಹೊರಟನು.

ಉತ್ಸಾಹಶಾಲಿಗಳಾದ ಮೈಸೂರಿನ ಕೆಲವು ಮಂದಿ ವಿದ್ಯಾವಂತರು ಬೊಂಬಾಯಿ ನಗರದಲ್ಲಿ ಒಳ್ಳೆಯ ಉದ್ಯೋಗಗಳನ್ನು ಸಂಪಾದಿಸಿಕೊಂಡು ನೆಲಸಿರುತ್ತಾರೆ. ಆವರೆಲ್ಲರೂ ಆಗಾಗ ಒಬ್ಬರನ್ನೊಬ್ಬರು ಸಂಧಿಸಲು ತಮ್ಮದೇ ಒಂದು ಸಂಘವನ್ನು ಮಾಡಿಕೊಂಡಿದ್ದಾರೆ. ಇಲ್ಲಿಂದ ವ್ಯಾಸಂಗಕ್ಕಾಗಿ ಬೊಂಬಾಯಿಗೆ ಹೋದ ತರುಣರೆಲ್ಲರೂ ಈ ಸಂಘದ ಸದಸ್ಯರಾಗುವ ವಾಡಿಕೆ. ಅದರಂತೆ ಕೃಷ್ಣಮೂರ್ತಿಯೂ ಸಂಘದ ಸದಸ್ಯನಾದ. ಸದಸ್ಯರಲ್ಲೊಬ್ಬರಾದ ಶ್ರೀನಿವಾಸರಾಯರಿಗೆ ಕೃಷ್ಣಮೂರ್ತಿಯು ಸ್ವಜನವೆಂದು ತಿಳಿದಮೇಲೆ ಅವರು ಅವನೊಡನೆ ಹೆಚ್ಚಿನ ವಿಶ್ವಾಸವನ್ನು ಬೆಳಸಿದರು. ಮಧ್ಯೆ ಕೆಲವು ದಿವಸ ಅವರು ಕೃಷ್ಣಮೂರ್ತಿಯನ್ನು ಕಾಣಲಿಲ್ಲ. ವಿಚಾರಿಸಲಾಗಿ ಅವನು ಜ್ವರಪೀಡಿತನಾಗಿ ಆಸ್ಪತ್ರೆಯಲ್ಲಿದ್ದಾನೆಂದು ತಿಳಿಯಿತು. ಕೂಡಲೇ ಗಂಡಹೆಂಡಿರಿಬ್ಬರೂ ಆಸ್ಪತ್ರೆಗೆ ಹೋಗಿ ವಿಚಾರಿಸಿದರು. ಜ್ವರ ಸಂಪೂರ್ಣವಾಗಿ ನಿಂತಿರುವುದಾಗಿಯೂ ಒಂದೆರಡು ದಿನಗಳೊಳಗಾಗಿ ಡಿಸ್‌

ಛಾರ್ಜ್ ಮಾಡುವುದಾಗಿಯೂ ಡಾಕ್ಟರು ಹೇಳಿದರು. ಪುನಃ ಹೊಟೇಲಿನಲ್ಲಿ ಊಟ ಮಾಡಲುಪಕ್ರಮಿಸಿದರೆ ಜ್ವರ ಮರುಕಳಿಸಬಹುದೆಂದೂ ಕೆಲವು ದಿವಸ ತಮ್ಮ ಮನೆಯಲ್ಲಿದ್ದು ಉಪಚಾರ ಹೊಂದಬೇಕೆಂದೂ ಶ್ರೀನಿವಾಸ ರಾಯರು ಆಹ್ವಾನಿಸಿದರು. ಡಾಕ್ಟರೂ ಅದು ಸೂಕ್ತವೆಂದು ಹೇಳಿದಮೇಲೆ ಕೃಷ್ಣಮೂರ್ತಿಯು ಒಪ್ಪಿ ಅವರ ಮನೆಗೆ ಹೋದನು.

ಶ್ರೀನಿವಾಸರಾಯರು ಮೈಸೂರಿನ ಸ್ಥಳದವರು. ಅವರ ಅಣ್ಣ ರಾಮ ರಾಯರು ಪಿತ್ರಾರ್ಜಿತವಾದ ಭೂಮಿಕಾಣಿಗಳನ್ನು ನೋಡಿಕೊಂಡು ಮೈಸೂರಲ್ಲೇ ಇದ್ದಾರೆ. ಶ್ರೀನಿವಾಸರಾಯರು ಬೆಂಗಳೂರಲ್ಲಿ ಬಿ.ಇ. ಪಾಸ್ ಮಾಡಿ ಬೊಂಬಾಯಿಯಲ್ಲಿ ಇಂಜಿನಿಯರ್ ಆಗಿ ಕೆಲಸಕ್ಕೆ ಸೇರಿದರು. ಈಗ ತಿಂಗಳಿಗೆ ಆರುನೂರು ರೂಪಾಯಿ ಸಂಬಳ ಬರುತ್ತಿದೆ. ಮನೆಗೆ ನೂರು ರೂಪಾಯಿ ಬಾಡಿಗೆ ಕೊಡುತ್ತಾರೆ. ಸ್ವಂತ ಮೋಟಾರು ಕಾರು ಇಟ್ಟಿದ್ದಾರೆ. ಅವರದು ಪುಟ್ಟಸಂಸಾರ. ಮನೆಯಲ್ಲಿ ತನ್ನ ಹೆಂಡತಿ, ಒಂದು ಮಗು ಮತ್ತು ಹದಿನಾಲ್ಕು ವರುಷ ವಯಸ್ಸಿನ ತಂಗಿ. ಆ ಹುಡುಗಿ ಮೆಟ್ರಿಕ್ಯುಲೇರ್ಷ ವರೆಗೂ ಓದಿದ್ದಳು. ತಂಗಿಗೆ ಕೃಷ್ಣಮೂರ್ತಿಯು ತಕ್ಕ ವರನೆಂದೂ ಜಾತಕ ಗಳು ಸರಿಹೋಗಿ ಕೃಷ್ಣಮೂರ್ತಿಯೂ ಅವನ ತಾಯಿತಂದೆಗಳೂ ಒಪ್ಪಿದರೆ ತಂಗಿಯನ್ನು ಅವನಿಗೆ ಕೊಟ್ಟು ಲಗ್ನ ಮಾಡಬೇಕೆಂದೂ ಬಯಸಿ ಅವನ ವಿಚಾರದಲ್ಲಿ ಅಷ್ಟೊಂದು ಮಮತೆಯನ್ನು ತೋರಿಸಿದರು. ಅವರ ಮನೆಗೆ ಬಂಧ ಎಂಟು-ಹತ್ತು ದಿನಗಳೊಳಗಾಗಿ ಔಷಧಿಗಿಂತಲೂ ಅವರ ಮನೆಯ ಉಪಚಾರದಿಂದ ಕೃಷ್ಣಮೂರ್ತಿಯು ಮೊದಲಿನಂತೆ ಆರೋಗ್ಯ ಹೊಂದಿ ತನ್ನ ಬಿಡಾರಕ್ಕೆ ಹೋಗುವುದಾಗಿ ತಿಳಿಸಿದ. ವರ್ಷದ ಪರೀಕ್ಷೆಯು ಕೇವಲ ಇನ್ನು ಹದಿನೈದು ದಿನಗಳು ಮಾತ್ರ ಇದ್ದುದರಿಂದ ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಂಡಿರಲು ಪರೀಕ್ಷೆ ಮುಗಿಯುವವರೆಗೂ ಮನೆಯಲ್ಲೇ ಊಟಮಾಡಿಕೊಂಡಿರುವಂತೆ ಗಂಡಹೆಂಡಿರು ಹೇಳಿದರು. ಅವರ ಉಪ ಚಾರಕ್ಕೆ ಮನಸೋತು, ಅವರ ಮಾತು ಮೀರಲಾರದೆ ಹಾಗೆಯೇ ಇದ್ದು

ರಜಾ ಬಂದೊಡನೆಯೇ ಊರಿಗೆ ಬಂದು ತಾತನೊಡನೆ ವಿಚಾರವನ್ನೆಲ್ಲಾ ವಿವರವಾಗಿ ತಿಳಿಸಿದನು.

ಕೃಷ್ಣಮೂರ್ತಿಯು ರಜದಲ್ಲಿ ಊರಲ್ಲಿದ್ದಾಗ ಒಂದುದಿನ ಬೊಂಬಾಯಿನಿಂದ ಒಂದು ಕಾಗದ ಬಂತು. ಶ್ರೀನಿವಾಸರಾಯರು ಮೈಸೂರಿಗೆ ಬರುವುದಾಗಿಯೂ ಮಧ್ಯೆ ಬೆಂಗಳೂರಲ್ಲಿ ಒಂದೆರಡು ದಿನ ನಿಂತಾಗ ಶಿವಪುರಕ್ಕೆ ಬರುವುದಾಗಿಯೂ ಬರೆದಿದ್ದರು. ಕೃಷ್ಣಮೂರ್ತಿಯು ತಾತನ ಮಾತಿನಂತೆ ಅವರ ಉಪಕಾರವನ್ನು ಮರೆಯದೆ ಆ ದಿನ ಸರಿಯಾಗಿ ಬೆಂಗಳೂರಿಗೆ ಹೋಗಿ ಮರುದಿನ ಬೆಳಗ್ಗೆ ಶ್ರೀನಿವಾಸರಾಯರನ್ನು ಊರಿಗೆ ಕರೆದುಕೊಂಡು ಬಂದನು. ಅವರ ಆಗಮನದ ಗೌರವಾರ್ಥವಾಗಿ ಕರಣಿಕರು ಮನೆಯಲ್ಲಿ ದಿವ್ಯವಾದ ಔತಣವನ್ನು ಏರ್ಪಡಿಸಿದ್ದರು. ಶ್ರೀನಿವಾಸರಾಯರು ಕರಣಿಕರ ಮನೆಯಾಡಳಿತವನ್ನು ತಿಳಿಯುವುದರಲ್ಲಿ ಆಸಕ್ತರಾಗಿದ್ದರು. ಕರಣಿಕರ ಮನೆಯವರೆಂದರೆ ಅವರ ಹೆಂಡತಿ, ಸೊಸೆ, ಹಿರಿಯ ಮೊಮ್ಮಗ, ಅವನ ಹೆಂಡತಿ, ಕಿರಿಯ ಮೊಮ್ಮಗ ಇವರಲ್ಲದೆ ದೂರದ ನಂಟರ ಪೈಕಿ ಇನ್ನೂ ನಾಲ್ಕು ಮಂದಿ ಇದ್ದರು. ಇಷ್ಟು ಜನವಿದ್ದರೂ ಮನೆಯಲ್ಲಿ ಒಬ್ಬರಲ್ಲೊಬ್ಬರಿಗಿದ್ದ ಸೌಹಾರ್ದ, ಹಿರಿಯರಲ್ಲಿ ಕಿರಿಯರಿಗಿದ್ದ ಭಕ್ತಿ ವಿಧೇಯತೆ, ಪ್ರತಿಯೊಬ್ಬರಿಗೂ ಅವರವರ ಕೆಲಸದಲ್ಲಿದ್ದ ಉತ್ಸಾಹ ಮುಂತಾದುವನ್ನು ನೋಡಿದರೆ ವಂಶಗೌರವವನ್ನು ಸೂಚಿಸುವ ಶಿಸ್ತು ಮೂರ್ತಿಮತ್ತಾದಂತೆ ತೋರಿತು. ಶ್ರೀನಿವಾಸರಾಯರು ತೃಪ್ತರಾಗಿ ತಮ್ಮ ಇಂಗಿತವನ್ನು ಕರಣಿಕರಿಗೆ ತಿಳಿಸಿದರು. ಕರಣಿಕರೂ ಋಣಾನುಸಂಬಂಧವಿದ್ದರೆ ಆಗಬಹುದೆಂದು ತಿಳಿಸಿ ಆ ದಿನ ಅಲ್ಲಿಯೇ ಇದ್ದು ಮಾರನೆ ದಿನ ಬೆಂಗಳೂರಿಗೆ ಹೊರಡಬಹುದೆಂದು ಶ್ರೀನಿವಾಸರಾಯರಿಗೆ ಹೇಳಿದರು. ಅವರೂ ಒಪ್ಪಿದರು.

ಆದಿನ ಸಾಯಂಕಾಲ ತಮಗೆ ಆಪ್ತರಾಗಿದ್ದ ಗುರುಗಳನ್ನು ಪರಿಚಯ ಮಾಡಿಕೊಡಲು ಕರಣಿಕರು ಶ್ರೀನಿವಾಸರಾಯರನ್ನು ಆಶ್ರಮಕ್ಕೆ ಕರೆದುಕೊಂಡು ಹೋದರು. ಗುರುಗಳೆದುರಿನಲ್ಲಿ ಶ್ರೀನಿವಾಸರಾಯರ ಉದ್ದೇಶ

ವನ್ನು ಕರಣಿಕರು ವಿವರಿಸಿದರು. ಕೆಲವು ಪ್ರಶ್ನೋತ್ತರಗಳಾದನಂತರ ಕರಣಿಕರ ಗೃಹಕೃತ್ಯವನ್ನೂ ಕೃಷ್ಣಮೂರ್ತಿಯ ಅಭಿಪ್ರಾಯವನ್ನೂ ಮೊದಲೇ ತಿಳಿದಿದ್ದ ಗುರುಗಳು ವರಸಾಮ್ಯವೂ ಜಾತಕಗಳೂ ಹೊಂದುವು ದಾದರೆ ಸಂಬಂಧ ಬೆಳಸಬಹುದೆಂದು ಹೇಳಿದರು. ಮರುದಿನ ಬೆಳಗ್ಗೆ ಶ್ರೀನಿವಾಸರಾಯರ ಆಹ್ವಾನದಂತೆ ಕರಣಿಕರೂ ಅವರ ಹೆಂಡತಿಯೂ ಮತ್ತು ಅವರ ಸೊಸೆಯೂ ಬೆಂಗಳೂರಿಗೆ ಹೋಗಿ ವಧುವನ್ನು ನೋಡಿದರು. ಜಾತಕಗಳನ್ನು ಪರೀಕ್ಷಿಸಲಾಗಿ ಅನುಕೂಲ ದಾಂಪತ್ಯವಾಗಿ ಕಂಡುಬಂದಿತು. ಲಗ್ನವೂ ನಿಷ್ಕರ್ಷೆಯಾಗಿ ಅಲ್ಲಿಂದ ಹದಿನೈದು ದಿವಸಕ್ಕೆ ಮೈಸೂರಿನಲ್ಲಿ ಕೃಷ್ಣಮೂರ್ತಿಯ ವಿವಾಹವು ವಿಜೃಂಭಣೆಯಿಂದ ನೆರವೇರಿತು. ಮೊದಲೇ ಗುಣಿಸಿದ್ದಂತೆ ಅಲ್ಲಿಂದಾಚೆಗೆ ಕೃಷ್ಣಮೂರ್ತಿಯ ವ್ಯಾಸಂಗದ ಹೊರೆಯು ಕರಣಿಕರಿಗೆ ಬಹುಮಟ್ಟಿಗೆ ಕಡಮೆಯಾಯಿತು.

---

೪. ಬಡವನ ಓದು.

ಚೈತ್ರಮಾಸ. ಮಧ್ಯಾಹ್ನ ಮೂರು ಘಂಟೆ. ಬಿಸಿಲಿನ ತಾಪ ಹೇಳ ತೀರದು. ಶಿವಪುರದ ಕಡೆ ಬರುತ್ತಿದ್ದ .ಇಬ್ಬರು ಪ್ರಯಾಣಿಕರು ನದಿಯ ಆಚೆ ದಡದಲ್ಲಿದ್ದ ಮಾವಿನ ಮರದ ಕೆಳಗೆ ಸ್ವಲ್ಪ ವಿಶ್ರಮಿಸಿಕೊಳ್ಳಲು ಕುಳಿತಿದ್ದರು. ಮುಂಭಾಗದ ನದಿಯ ಒಂದು ಪಾರ್ಶ್ವದಲ್ಲಿ ಮಾತ್ರ ಸಣ್ಣಗೆ ತಿಳಿನೀರು ಹರಿಯುತ್ತಿತ್ತು. ನೀರಡಿಕೆಯನ್ನು ನೀಗಲು ಅಲ್ಲಿಗೆ ಹೋಗಿ ನೀರು ಕುಡಿಯಬೇಕೆನ್ನಿಸಿತು. ಅಷ್ಟರಲ್ಲಿಯೇ ಪಕ್ಕದ ಹೊಲದ ನದಿಕಡೆಯ ಅಂಚಿನಲ್ಲಿ ಎಳನೀರಿನ ಗೊಂಚಲನಿಂದ ಜಗಿಯುತ್ತಿದ್ದ ನಾಲ್ಕು ತೆಂಗಿನ ಮರಗಳು ಕಾಣಿಸಿದುವು. ಹೊಲದ ಎದುರಿನಲ್ಲಿ ಹಸುವನ್ನು ಮೇಯಿಸುತ್ತಾ ನಿಂತಿದ್ದ ಹುಡುಗನನ್ನು ಕೂಗಿ “ ಲೋ ಹುಡುಗ, ನಿಮ್ಮವೇನೋ ಈ ತೆಂಗಿನಮರಗಳು ?” ಎಂದರು. ಹುಡುಗನು ಇವರ ಕಡೆ ನೋಡಿದ. ಬೆಲೆಯುಳ್ಳ ಕೋಟು ಷರಾಯಿಗಳನ್ನು ಧರಿಸಿದ್ದರು. ಒಬ್ಬರು ಕಲಾಬತ್ತಿನ ರುಮಾಲನ್ನು ಹಾಕಿದ್ದರು. ಮತ್ತೊಬ್ಬರು ಹ್ಯಾಟ್ ಹಿಡಿದಿದ್ದರು. ರುಮಾಲಿನವರ ಕೈಲಿ ಒಂದು ಛತ್ರಿ, ಹ್ಯಾಟ್‌ನವರ ಕೈಲಿ ಒಂದು ಬೆತ್ತ. ಯಾರೋ ಪರಸ್ಥಳದವರು, ಏನುಬೇಕೋ, ಎಂದು ಹುಡುಗನು “ ಹೌದು.” ಎಂದ.

ರುಮಾಲಿನವರು—ನಮಗೆ ಎರಡು ಎಳನೀರನ್ನು ಕಿತ್ತುಕೊಡುವೆಯಾ, ಅದರ ಖರೀದಿಯನ್ನು ಕೊಡುತ್ತೇವೆ.

ಹುಡುಗ—ಎಷ್ಟು ಕೊಡುತ್ತೀರ ?

ಟೋಪಿಯವರು—ಒಂದು ಎಳನೀರಿಗೆ ಅರ್ಧ ಆಣೆ ಕೊಡುತ್ತೇವೆ.

ಹುಡುಗ—ಹಾಗಿದ್ದರೆ ಎಳನೀರನ್ನು ಕೊಡುವುದಿಲ್ಲ.

ರುಮಾಲಿನವರು—ಇನ್ನೆಷ್ಟು ಕೊಡಬೇಕೊ ?

ಹುಡುಗ—ಒಂದು ಎಳನೀರಿಗೆ ಎರಡಾಣೆ ಕೊಡಬೇಕು.

ಟೋಪಿ—ಎಲಾ ಹುಡುಗ, ಅದು ಯಾವ ಲೆಖ್ಖವೋ ? ಬೆಂಗಳೂರಿನಲ್ಲಿರುವುದಕ್ಕಿಂತಲೂ ಹೆಚ್ಚಿನ ಬೆಲೆ ಕೇಳ್ತೀಯೆ.

ಹುಡುಗ—ಅದನ್ನು ಈಗ ಕೀಳದೆ ಹಣ್ಣಾಗುವವರೆಗೂ ಹಾಗೆಯೇ ಬಿಟ್ಟು ಅಟ್ಟಕ್ಕೆ ಹಾಕಿದರೆ ಕೆಲವು ದಿನಗಳ ಮೇಲೆ ಒಣಗಿ ಗಿಟಕಾಗುವುದು. ಆಗ ಒಂದು ಗಿಟಕಿಗೆ ಎರಡಾಣೆ ಸಿಕ್ಕುವುದು.

ಟೋಪಿ—(ರುಮಾಲಿನವರ ಕಡೆಗೆ ತಿರುಗಿ) See How clever is the boy !(ನೋಡಿ, ಹುಡುಗ ಎಷ್ಟು ಬುದ್ಧಿವಂತನಾಗಿದ್ದಾನೆ !)

ಹುಡುಗ—How clever are you to offer half-an-anna for a tender coconut ! (ಒಂದು ಎಳನೀರಿಗೆ ಅರ್ಧಾಣೆ ಕೊಡಲು ನೀವು ಎಷ್ಟು ಬುದ್ಧಿವಂತರು !)

ಹಸು ಮೇಯಿಸುತ್ತಿದ್ದ ಹುಡುಗ ಇಂಗ್ಲಿಷ್‌ನಲ್ಲಿ ಮಾತಾಡಿದ್ದನ್ನು ಕೇಳಿ ಇಬ್ಬರಿಗೂ ಪರಮಾಶ್ಚರ್ಯವಾಯಿತು. ಒಬ್ಬರ ಮುಖವನ್ನೊಬ್ಬರು ನೋಡಿ ಹುಡುಗನ ಕಡೆ ತಿರುಗಿದರು. ಹುಡುಗ ಹಸುವನ್ನು ಗಿಡಕ್ಕೆ ಕಟ್ಟಿಹಾಕಿ ಸರಸರನೆ ತೆಂಗಿನ ಮರವನ್ನು ಹತ್ತಿ ಹದವಾದ ನಾಲ್ಕು ಎಳನೀರನ್ನು ಕಿತ್ತು ಬೇಲಿಯ ಮೇಲೆ ಹಾಕಿ ಇಳಿದುಹೋಗಿ ಹುಲ್ಲು ಹಿತ್ತಲಿನ ಗುಡಿಸಲಿನಲ್ಲಿದ್ದ ಮಚ್ಚನ್ನು ತಂದು ನಾಲ್ಕು ಎಳನೀರನ್ನೂ ಕಳಚಿ ಅವರ ಮುಂದಿಟ್ಟನು. ಎಳನೀರನ್ನು ಕುಡಿಯುವುದಕ್ಕಿಂತಲೂ ಹುಡುಗನ ಪೂರ್ವಾಪರಗಳನ್ನು ಕೇಳಬೇಕೆಂದು ಅವರಿಗೆ ಕುತೂಹಲವಾಯಿತು. ಹುಡುಗನನ್ನು ಕರೆದು ಹತ್ತಿರ ಕುಳಿತುಕೊಳ್ಳುವಂತೆ ಹೇಳಿದರು.

ಹುಡುಗ—“ ನಿಮಗೆ ಬಹಳ ಆಯಾಸವಾಗಿರಬಹುದು. ಮೊದಲು ಎಳನೀರನ್ನು ಕುಡಿಯಿರಿ,” ಎಂದು ಹೇಳುತ್ತಾ ಎಳನೀರನ್ನು ಎತ್ತಿ ಅವರ ಕೈಲಿ ಕೊಟ್ಟನು. ಅವರು ಎಳನೀರನ್ನು ಕುಡಿದು, “ ನಿಮ್ಮ ತಂದೆ ಯಾರು ?” ಎಂದರು.

ಹುಡುಗ—ಬೋರೆಗೌಡ.

ರುಮಾಲು—ನೀನು ಎಲ್ಲಿನವರೆಗೂ ಓದಿದ್ದೀಯೆ ?

ಹುಡುಗ—ಈ ವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತಿದ್ದೇನೆ.

ರುಮಾಲು—ನಿಮ್ಮ ತಂದೆ ಎಷ್ಟು ಕಂದಾಯ ಕಟ್ಟುತ್ತಾರೆ?

ಹುಡುಗ—ಐದು ರೂಪಾಯಿ.

ರುಮಾಲು—ಹಾಗಿದ್ದರೆ ಎಷ್ಟು ಜಮೀನಿದೆ?

ಹುಡುಗ—(ಕೈತೋರಿಸುತ್ತಾ) ಈ ಬೇಲಿಯೊಳಗಿರುವ ಹೊಲ ಮಾತ್ರ.

ಟೋಪಿ—ಇಷ್ಟರಲ್ಲಿ ಮನೆ ಖರ್ಚಿಗೂ ಆಗಿ ಹೈಸ್ಕೂಲಿನಲ್ಲಿ ವ್ಯಾಸಂಗ ಮಾಡಲು ಸಾಧ್ಯವಾಯಿತೆ?

ಹುಡುಗ—ಅದು ಹಾಗಲ್ಲ. ಆ ಗುಡಿಸಿಲಿನಲ್ಲಿರುವ ನಮ್ಮ ಗುರುಗಳು ಓದಲು ಪ್ರೋತ್ಸಾಹಿಸಿದರು. ನಮ್ಮೂರ ಕರಣಿಕರು ಪ್ರಾರಂಭದಲ್ಲಿ ಸಹಾಯ ಮಾಡಿದರು. ಮನೆಯಲ್ಲಿದ್ದ ಒಂದು ಹೋರಿಗರುವನ್ನು ಮಾರಿ ನಮ್ಮ ತಂದೆ ನನಗೆ ದುಡ್ಡು ಕೊಟ್ಟರು. ಆ ಮೇಲೆ ವಿದ್ಯಾರ್ಥಿವೇತನ ದೊರೆಯಿತು. ಇವುಗಳ ಸಹಾಯದಿಂದ ನಾನು ಇಲ್ಲಿನವರೆಗೆ ಓದಿದೆ.

ರುಮಾಲು—ಬಹಳ ಕಷ್ಟಪಟ್ಟು ಓದಿದ್ದೀಯೆ. ಆದಾಗ್ಯೂ ಅಹಂಕಾರವಿಲ್ಲದೆ ಮನೆಯ ಕೆಲಸ ಕಾರ್ಯಗಳಲ್ಲಿ ನೆರವಾಗುತ್ತಿರುವುದನ್ನು ನೋಡಿದರೆ ಸಂತೋಷವಾಗುತ್ತೆ. ನಾವು ತಿಳಿಯದೆ ಯಾವುದೋ ದನ ಕಾಯುತ್ತಿರುವ ಅವಿದ್ಯಾವಂತನೆಂದು ಭಾವಿಸಿದೆವು. ಅದಕ್ಕಾಗಿ ಪಶ್ಚಾತ್ತಾಪ ಪಡುತ್ತೇವೆ. ಎಳನೀರನ್ನು ಕುಡಿದು ಆನಂದವಾಯಿತು. ಇದೊ, ತೆಗೆದುಕೊ, ನೀನು ಕೇಳಿದ್ದರ ಎರಡರಷ್ಟು ಬೆಲೆಯನ್ನು. (ಎಂದು ಒಂದು ರೂಪಾಯಿ ಕೊಡಹೋದರು).

ಹುಡುಗ—ನಮ್ಮ ತಂದೆ ಈ ತೆಂಗಿನ ಮರಗಳನ್ನು ಹಾಕಿದ್ದು. ಇದರ ಫಲವನ್ನು ಈವರೆಗೆ ಯಾರಿಗೂ ಮಾರಿದಂತೆ ನನಗೆ ತಿಳಿದಿಲ್ಲ. ಇದರಿಂದ ನಿಮ್ಮ ದಾಹ ಶಮನವಾಗಿದ್ದರೆ ಅದರ ಪುಣ್ಯ ನಮ್ಮ ತಂದೆಗೆ ಸೇರಿದ್ದು. ಆದ್ದರಿಂದ ಅದರ ಬೆಲೆಯನ್ನು ತೆಗೆದುಕೊಳ್ಳುವುದಿಲ್ಲ.

ರುಮಾಲು—ನಿನ್ನ ಹೆಸರೇನಪ್ಪ ?

ಹುಡುಗ—ಮರಿಗೌಡ.

ರುಮಾಲು—ಒಳ್ಳೆಯದು ದೇವರ ದಯದಿಂದ ಈ ಪರೀಕ್ಷೆಯಲ್ಲಿ ನಿನಗೆ ಪಾಸಾಗಿ ಮುಂದೆ ಓದಲು ಬೆಂಗಳೂರಿಗೆ ಬಂದರೆ ದಯವಿಟ್ಟು ಖಂಡಿತ ನನ್ನನ್ನು ನೋಡು. (ಎಂದು ತಮ್ಮ ಹೆಸರು ಅಚ್ಚಾದ ಕಾರ್ಡನ್ನು ಕೊಟ್ಟರು). ಇನ್ನೂ ನೀನು ಊರೊಳಕ್ಕೆ ಬರುವುದಿಲ್ಲವೆ ?

ಹುಡುಗ—ಏಕೆ ?

ರುಮಾಲು—ನಿಮ್ಮೂರ ಶಾನುಬೋಗರಾದ ನಾರಣಪ್ಪನವರನ್ನೂ ಪಟೇಲ್ ತಿಮ್ಮೆಗೌಡರನ್ನೂ ನೋಡಲು ಬಂದಿದ್ದೇವೆ. ನೀನು ಅವರ ಮನೆಯನ್ನು ತೋರಿಸಿದರೆ ಸಾಕು.

ಹುಡುಗ—ಬರಲು ನನ್ನ ಅಭ್ಯಂತರವೇನೂ ಇಲ್ಲ. ನಮ್ಮ ಹಳ್ಳಿಯಲ್ಲಿ ಅವರ ಮನೆಯನ್ನು ಹುಡುಕುವುದು ಕಷ್ಟವೇನೂ ಅಲ್ಲ. (ಕೈತೋರಿಸುತ್ತಾ) ಅದೋ ನೋಡಿ, ಊರ ಮುಂಭಾಗದಲ್ಲಿ ಎತ್ತರವಾಗಿ ಕಾಣುತ್ತಿರುವ ಗೋಪಿಬಣ್ಣದ ಮಂಗಳೂರು ಹೆಂಚಿನ ಮಹಡಿ ಮನೆಯೇ ಪಟೇಲರದು. ಊರೊಳಗೆ ಹೋಗಿ ಕರಣಿಕರ ಮನೆ ಯಾವುದೆಂದರೆ ಶಾನುಬೋಗರ ಮನೆಯನ್ನು ಯಾರಾದರೂ ತೋರಿಸುತ್ತಾರೆ. ನೀವು ಇಷ್ಟಪಟ್ಟರೆ ಪಟೇಲರೇ ಅವರನ್ನು ಕರೆಸುತ್ತಾರೆ.

ರುಮಾಲು—ಹಾಗಿದ್ದರೆ ಸರಿ, ನಾವು ಹೊರಡುತ್ತೇವೆ.

ಹುಡುಗ ನಮಸ್ಕಾರ ಮಾಡಿದ. ಅವರೂ ನಮಸ್ಕಾರ ಮಾಡಿ ಹೊರಟರು.

ರುಮಾಲು ಹಾಕಿಕೊಂಡಿದ್ದವರೇ ಬೆಂಗಳೂರಿನ ಪ್ರಸಿದ್ಧ ಲಾಯರ್ ರಾಮಸ್ವಾಮಿಯವರು. ಆ ಸಾರಿ ನ್ಯಾಯವಿಧಾಯಕ ಸಭೆಗೆ ಜಿಲ್ಲಾ ಪ್ರತಿನಿಧಿಯಾಗಲು ಉಮೇದುವಾರರಾಗಿ ವೋಟು ಕೇಳಲು ಕರಣಿಕರನ್ನೂ ಪಟೇಲರನ್ನೂ ಕಾಣಲು ಬಂದಿದ್ದರು. ಶಿವಪುರಕ್ಕೆ ರಸ್ತೆ ಸರಿಯಾಗಿಲ್ಲದ್ದ

ರಿಂದ ತಮ್ಮ ಮೋಟಾರ್ ಕಾರನ್ನು ಪೇಟೆಯಲ್ಲೇ ಬಿಟ್ಟು ತಮ್ಮ ಸ್ನೇಹಿತ ರೊಂದಿಗೆ ನಡೆದುಕೊಂಡು ಬಂದಿದ್ದರು. ಮಧ್ಯೆ ಹಸು ಮೇಯಿಸುತ್ತಿದ್ದ ಹುಡುಗನ ಪರಿಚಯವಾಯಿತು. ಬಂದ ಕೆಲಸವನ್ನು ಪೂರೈಸಿಕೊಂಡು ಆ ದಿನ ಸಾಯಂಕಾಲವೇ ಬೆಂಗಳೂರಿಗೆ ಹಿಂದಿರುಗಿದರು.

ಕೆಲವು ದಿನಗಳಲ್ಲಿಯೇ ಮರಿಗೌಡನ ಪರೀಕ್ಷೆಯ ಫಲಿತಾಂಶವು ಬಂತು. ಮೊದಲನೆಯ ತರಗತಿಯಲ್ಲಿ ಉತ್ತೀರ್ಣನಾಗಿದ್ದನು. ಅವನ ತಂದೆಯ ಸಂತೋಷಕ್ಕೆ ಪಾರವೇ ಇಲ್ಲ. ಕೂಡಲೇ ಮಗನೊಡನೆ ಕರಣಿಕರ ಮನೆಗೂ ಆಶ್ರಮಕ್ಕೂ ಹೋಗಿ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿದನು. ಕೃಷ್ಣ ಮೂರ್ತಿಯನ್ನು ಬಿಟ್ಟರೆ ಮರಿಗೌಡನೇ ಆ ಊರಿಗೆಲ್ಲಾ ಹೆಚ್ಚು ವಿದ್ಯಾವಂತ. ಯಾರ ಮನೆಯಲ್ಲಿ ನೋಡಿದರೂ ಅವನ ಮಾತೇ. ತಂದೆಮಕ್ಕಳು ಗುರುಗಳೊಡನೆ ಮಾತನಾಡುತ್ತಿದ್ದಾಗ, ಪಾಠಕ್ಕಾಗಿ ಬಂದು ಕುಳಿತು ಇದೆಲ್ಲವನ್ನೂ ಉತ್ಸುಕತೆಯಿಂದ ಕೇಳುತ್ತಿದ್ದ ಪಟೇಲರ ಮಗಳು ಶಾರದೆಯ ಮುಖಾಂತರ ಪಟೇಲರ ಮನೆಗೂ ವರ್ತಮಾನ ಹಬ್ಬಿ ಅವರ ಮನೆಯ ಲ್ಲಿಯೂ ಅವನ ವಿಚಾರವಾಗಿ ಒಂದೆರಡು ಶ್ಲಾಘನೀಯವಾದ ಮಾತುಗಳು ಹೊರಟಿದ್ದರೂ ಹೊರಟಿರಬಹುದು.

ಮರಿಗೌಡನು ಗುರುಗಳ ಪ್ರೋತ್ಸಾಹದಿಂದಲೂ ತಂದೆಯ ಶಕ್ತಿಗೆ ಮೀರಿದ ಸಹಾಯದಿಂದಲೂ ಎಂಟ್ರೆನ್ಸ್ ತರಗತಿಯನ್ನು ಸೇರಿ ಊಟೋಪಚಾರಗಳಿಗಾಗಿ ಬಹಳ ಕಷ್ಟಪಟ್ಟು ಓದನ್ನು ಮುಂದುವರಿಸಿದನು. ಲಾಯರ್ ರಾಮಸ್ವಾಮಿಯವರು ಹೇಳಿದ್ದ ಮಾತನ್ನು ಜ್ಞಾಪಿಸಿಕೊಂಡು ಅವರನ್ನು ಕಂಡನು. ಅವರ ಸಹಾಯದಿಂದ ಆ ವರ್ಷ ವಿದ್ಯಾರ್ಥಿವೇತನವು ದೊರಕಿ ಅವನ ವ್ಯಾಸಂಗಕ್ಕೆ ಅನುಕೂಲವಾಯಿತು. ಅವನ ಶ್ರಮಕ್ಕೆ ತಕ್ಕಂತೆ ಆ ವರ್ಷ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಮುಂದೆ ಓದಲು ಮೈಸೂರಿಗೆ ಹೋಗಬೇಕಾಗಿತ್ತು. ದೂರದ ಪರಸ್ಥಳ. ಹೆಚ್ಚು ಖರ್ಚು. ಅಲ್ಲಿಗೆ ಹೋಗಿ ಬಿ.ಎ. ಓದುವುದು ಅಸಂಭವವೆಂದು ತಿಳಿದು ಸುಮ್ಮನಾದನು.

ಯೂನಿವರ್ಸಿಟಿ ಎಂಟ್ರೆನ್ಸ್ ಪರೀಕ್ಷೆಯಲ್ಲಿ ತೇರ್ಗಡೆಯಾದಮೇಲೆ

ತನ್ನ ಕೃತಜ್ಞತೆಯನ್ನು ತೋರಿಸಲು ಮರಿಗೌಡನು ಬೆಂಗಳೂರಿಗೆ ಹೋಗಿ ರಾಮಸ್ವಾಮಿಯವರನ್ನು ಕಂಡನು. "ಮುಂದೇನು ಮಾಡಬೇಕೆಂದಿರುವೆ?" ಎಂದು ಅವರು ಕೇಳಿದರು. ಮುಂದಿನ ಯೋಚನೆಯೇ ಇಲ್ಲವೆಂದು ಹೇಳಿದ. ಪ್ರಾರಂಭದ ಮೂರು ತಿಂಗಳು ಹೇಗಾದರೂ ಕಳೆಯುವುದಾದರೆ ಅಲ್ಲಿಂದ ಮುಂದೆ ವಿದ್ಯಾರ್ಥಿ ವೇತನ ದೊರೆಯುವಂತೆ ಪ್ರಯತ್ನಿಸುವೆನೆಂದು ಭರವಸೆ ಕೊಟ್ಟರು. ಯೋಚಿಸುತ್ತಾ ಹಿಂದಿರುಗಿ ಹಳ್ಳಿಗೆ ಬಂದು ತಂದೆಗೆ ಸಮಾಚಾರವನ್ನು ತಿಳಿಸಿದ. ಮಗನ ಉತ್ಸಾಹವು ತಂದೆಯ ಹೃದಯವನ್ನು ಮುಟ್ಟಿತು. ಮನೆಯಲ್ಲಿದ್ದ ದೊಡ್ಡ ಜೊತೆ ಎತ್ತುಗಳನ್ನು ಮಾರಿ, ಉಳುವುದಕ್ಕೆ ಸಾಮಾನ್ಯವಾದ ಒಂದು ಜೊತೆ ಗಿಡ್ಡಗಳನ್ನು ಕೊಂಡು ಉಳಿದ ಹಣವನ್ನು ಮಗನ ಖರ್ಚಿಗೆ ಕೊಡುವುದಾಗಿ ತಂದೆ ಹೇಳಿದನು. ಗುರುಗಳೂ ಕರಣಿಕರೂ ತಂದೆಯ ಧೈರ್ಯಕ್ಕೆ ಮೆಚ್ಚಿದರು. ಆದರಂತೆ ತಂದೆಯು ಕೊಟ್ಟ ನೂರು ರೂಪಾಯಿಗಳನ್ನು ತೆಗೆದುಕೊಂಡು ಮರಿಗೌಡನು ಮೈಸೂರಿಗೆ ಹೋಗಿ ಕಾಲೇಜಿಗೆ ಸೇರಿದನು.

ಅಲ್ಲಿ ಮರಿಗೌಡನು ತನ್ನ ಊಟ ವಸತಿಗಳಿಗಾಗಿ ಒಕ್ಕಲಿಗರ ವಿದ್ಯಾರ್ಥಿ ನಿಲಯದಲ್ಲಿ ಅನುಕೂಲಪಡಿಸಿಕೊಂಡು ವ್ಯಾಸಂಗಮಾಡುತ್ತಿದ್ದನು. ಬೆಂಗಳೂರಿನ ರಾಮಸ್ವಾಮಿಯವರ ಸಮಯೋಚಿತ ಶಿಫಾರಸಿನಿಂದ ವಿದ್ಯಾರ್ಥಿವೇತನವು ದೊರೆತು ಮೂರು ವರ್ಷ ಕಾಲವೂ ವ್ಯಾಸಂಗವು ಸಾಂಗವಾಗಿ ಜರುಗಿತು. ವಿಶ್ವವಿದ್ಯಾನಿಲಯದ ವಾತಾವರಣವು ಅವನ ಮೇಧಾಶಕ್ತಿಯನ್ನು ವಿಕಾಸಪಡಿಸಿತು. ವ್ಯಾಸಂಗದ ವಿಚಾರದಲ್ಲಿ ತಕ್ಕಷ್ಟು ಶ್ರದ್ಧೆಯುಳ್ಳವನಾಗಿದ್ದುದು ಮಾತ್ರವಲ್ಲದೆ ಕಾಲೇಜಿನ ಇತರ ಆಟಪಾಟಗಳಲ್ಲಿಯೂ ಆಸಕ್ತಿ ವಹಿಸಿ ಅನೇಕ ಬಹುಮಾನಗಳನ್ನು ಪಡೆದು ಗಣ್ಯ ವಿದ್ಯಾರ್ಥಿಗಳಲ್ಲಿ ಒಬ್ಬನಾಗಿದ್ದು ತನ್ನ ಸರಳತೆಯಿಂದಲೂ ಸೌಜನ್ಯದಿಂದಲೂ ಸಹಪಾಠಿಗಳ ಮತ್ತು ಅಧ್ಯಾಪಕ ವರ್ಗದವರ ಪೂರ್ಣ ವಿಶ್ವಾಸಕ್ಕೆ ಪಾತ್ರನಾಗಿದ್ದನು.

ಮೂರನೆ ವರ್ಷದ ಬಿ. ಎ. ತರಗತಿಯಲ್ಲಿದ್ದಾಗ ಮರಿಗೌಡನು

ದಸರಾ ವಸ್ತುಪ್ರದರ್ಶನದಲ್ಲಿ ಒಂದು ಸ್ಟಾಲ್‌ದಾರನ ಮುಂದಾಳಾಗಿ ಕೆಲಸ ಮಾಡುತ್ತಿದ್ದನು. ಅಲ್ಲಿ ಒಂದು ದಿನ ಸಾಯಂಕಾಲ ಮಕ್ಕಳ ನಾಟಕ ಪ್ರದರ್ಶನವು ನಡೆಯುತ್ತಿದ್ದಾಗ ಇವನು ಮುಂದುಗಡೆ ಬಾಗಿಲಲ್ಲಿ ನಿಂತಿದ್ದನು. ಸ್ವಲ್ಪ ದೂರದಲ್ಲಿ ಶಿವಪುರದ ಪಟೇಲ್ ತಿಮ್ಮೇಗೌಡರು ತಮ್ಮ ಹೆಂಡತಿ ಮತ್ತು ಮಗಳೊಡನೆ ಬರುತ್ತಿದ್ದಂತೆ ಕಂಡಿತು. ನಾಟಕಶಾಲೆಯಲ್ಲಿ ಏನೋ ವಿನೋದ ನಡೆಯುತ್ತಿರಬಹುದೆಂದು ನೋಡಲು ಅವರೂ ಅಲ್ಲಿಗೇ ಬಂದರು. ಮಾರಿಗೌಡನು ತನ್ನೂರವರೆಂಬ ಅಭಿಮಾನದಿಂದ 'ನಮಸ್ಕಾರ, ಗೌಡರೆ', ಎಂದನು. ಗೌಡರು ತಿರುಗಿ ನೋಡಿದರು. ಯಾರೋ ಗುರುತು ಕಂಡ ಪೋಲೀಸಿನವರಿರಬಹುದೆಂದು, ಹೆಂಡತಿಯೂ ಮಗಳೂ ಸ್ವಲ್ಪ ಹಿಂದಕ್ಕೆ ಸರಿದು ನಿಂತರು. ಗೌಡರಿಗೂ ಘಟಕ್ಕನೆ ಗುರುತು ಸಿಕ್ಕಲಿಲ್ಲ. ಎತ್ತರವಾದ ಆಳು. ಉತ್ಸಾಹದಿಂದ ತುಂಬಿತುಳುಕುತ್ತಿರುವ ನಗುಮುಖ. ತಲೆಯಿಂದ ಕಾಲಿನವರೆಗೂ ಕಾಕಿ ಬಣ್ಣದ ಉಡುಪು. ಮಿಲಿಟರಿ ಆಫೀಸರಂತೆ ಕಾಣುತ್ತಿದ್ದನು. ಕ್ಷಣಕಾಲ ಗೌಡರು ನೆಟ್ಟದೃಷ್ಟಿಯಿಂದ ನೋಡಿದರು. ಗುರುತು ಸಿಕ್ಕಿತು. "ಓಹೋ ಮಾರಿಗೌಡನೇ, ಗುರುತೇ ಸಿಕ್ಕಲಿಲ್ಲಪ್ಪ, ಚನ್ನಾಗಿದ್ದೀಯಾ ?" ಎಂದರು.

ಮಾರಿಗೌಡ—ತಮ್ಮ ಆಶೀರ್ವಾದದಿಂದ ಸೌಖ್ಯವಾಗಿದ್ದೇನೆ, ತಾವು ಯಾವಾಗ ದಯಮಾಡಿಸಿದ್ದು ?

ಗೌಡರು—ನಾವು ಬಂದು ಆಗಲೇ ಏಳೆಂಟು ದಿನಗಳಾಯ್ತು. ಅಸೆಂಬ್ಲಿ ಮೀಟಿಂಗಿಗೆ ಬಂದೆ. ಗೌಡಸಾನಿಯೂ ನಮ್ಮ ಹುಡುಗಿಯೂ ದಸರಾ ನೋಡಲು ಬಹಳ ಆಸೆಪಟ್ಟರು. ಜೊತೆಯಲ್ಲಿ ಅವರನ್ನೂ ಕರೆದುಕೊಂಡು ಬಂದೆ.

ಮಾರಿಗೌಡ—ಎಲ್ಲಿ ಇಳಿದಿದ್ದೀರಿ ?

ಗೌಡರು—ನಂಜರಾಜ ಬಹದ್ದೂರ್ ಛತ್ರದಲ್ಲಿ.

ಮಾರಿಗೌಡ—ಊಟೋಪಚಾರಗಳಿಗೆಲ್ಲಾ ಅನುಕೂಲವಾಗಿದೆಯೊ ?

ಗೌಡರು—ಇದೆ. ಎಲ್ಲಕ್ಕೂ ಅನುಕೂಲವಾಗಿದೆ.

ಮಾರಿಗೌಡ—ಊರಕಡೆ ಮಳೆ ಆಯ್ತೆ ?

ಅಷ್ಟು ಹೊತ್ತಿಗೆ ಗೌಡರ ಹಿಂದೆ ನಿಂತಿದ್ದ ತಾಯಿ ಮತ್ತು ಮಗಳ ದೃಷ್ಟಿಯು ಈ ಕಡೆ ತಿರುಗಿತು. ಮಾತನಾಡುತ್ತಿದ್ದವನು ಹೊಸಬನೇನೂ ಅಲ್ಲ. ಶಿವಪುರದ ಹುಡುಗ. ಸ್ವಭಾವಜನ್ಯವಾದ ನಾಚಿಕೆಯಿಂದ ಶಾರದೆಯು ಸ್ವಲ್ಪ ತಲೆಬಾಗಿ ತಾಯಿಯ ಹಿಂದೆ ಸರಿದು ನಿಂತಳು. ಆದರೂ ತಂದೆಯು ಮಾತನಾಡುತ್ತಿರುವಾಗಲೇ ತಾಯಿಯ ಭುಜದ ಮೇಲಿಂದ ತಮ್ಮೂರ ಹುಡುಗನ ಕಡೆ ಕುತೂಹಲದಿಂದ ನೋಡಿದಳು. ಸಂತೋಷದಿಂದ ಕೂಡಿದ ಅನಿರ್ವಚನೀಯವಾದೊಂದು ಕುತೂಹಲವು ಮಿಂಚಿನ ವೇಗದಿಂದ ಶರೀರಾದ್ಯಂತವೂ ಧಾವಿಸಿದಂತೆ ಭಾಸವಾಯಿತು. ಪುನಃ ನಾಚಿಕೆಯಿಂದ ತಲೆ ಬಾಗಿ ನಿಂತಳು.

ಗೌಡರು—ಮಳೆಯಾಗಿ ಬೆಳೆಗಳೆಲ್ಲವೂ ಚೆನ್ನಾಗಿವೆ. ಈಗ ನೀನು ಏನು ಓದುತ್ತಿದ್ದೀಯೆ?

ಮರಿಗೌಡ—ಈ ವರ್ಷ ಬಿ.ಎ. ಪರೀಕ್ಷೆಗೆ ಕುಳಿತುಕೊಳ್ಳುತ್ತೇನೆ.

ಗೌಡರು—ಸಂತೋಷ, ಕಷ್ಟಪಟ್ಟು ಓದು.

ಮರಿಗೌಡ—ತಾವು ಇನ್ನೂ ಎಷ್ಟು ದಿವಸ ಇಲ್ಲಿ ಇರುವುದಾಗುತ್ತೆ?

ಗೌಡರು—ನಾಡಿದ್ದು ದಸರಾ ಉತ್ಸವ ನೋಡಿಕೊಂಡು ಸಾಧ್ಯವಾದರೆ ಮರುದಿನವೇ ಹೊರಡುತ್ತೇವೆ.

ಗೌಡಸಾನಿ—ನಿಮ್ಮ ತಂದೆಗೆ ಏನಾದರೂ ತಿಳಿಸಬೇಕೇನಪ್ಪ?

ಮರಿಗೌಡ—ತಾಯಿ, ಸೌಖ್ಯವಾಗಿದ್ದೇನೆಂದು ತಿಳಿಸಿದರೆ ಸಾಕು.

ಗೌಡರು—ಇಲ್ಲಿ ಒಳಗೆ ನಡೆಯುತ್ತಿರುವ ವಿನೋದವೇನು?

ಮರಿಗೌಡ—ಮಕ್ಕಳು ನಾಟಕವಾಡುತ್ತಿದ್ದಾರೆ.

ಗೌಡರು—ಅಷ್ಟೇತಾನೇ. ಬಾಗಿಲವರೆಗೂ ಜನರು ಕಿಕ್ಕಿರಿದು ನಿಂತಿದ್ದಾರೆ. ಒಳಗೆ ಹೋಗಲು ಬಹಳ ಇಕ್ಕಟ್ಟು ಎಂದು ಕಾಣುತ್ತೆ. ಒಳ್ಳೆಯದು, ನಾವು ಹೊರಡುತ್ತೇವೆ.

ಮರಿಗೌಡನು ನಮಸ್ಕಾರ ಮಾಡಿದನು. ಗೌಡರೂ ನಮಸ್ಕಾರ ಮಾಡಿ ಹೊರಟರು.

೫. ಉದ್ಯೋಗ ವೈಭವ

ಮರಿಗೌಡನು ಬಿ.ಎ. ಪರೀಕ್ಷೆಯನ್ನು ಪೂರೈಸಿಕೊಂಡು ಬಂದು ಊರಲ್ಲಿದ್ದನು. ನಿರೀಕ್ಷಿಸಿದ್ದ ಕಾಲಕ್ಕೆ ಸರಿಯಾಗಿ ಅವನು ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣನಾಗಿರುವುದಾಗಿ ಶುಭಸಮಾಚಾರವು ಬಂತು. ಅದರ ಘನತೆಯನ್ನು ತಿಳಿದು ಆನಂದಪಡುವವರು ಅವನ ಮನೆಯಲ್ಲಿ ಯಾರಿದ್ದಾರೆ? ಮನೆಯವರಿಗೆ ಲೋವರ್ ಸೆಕೆಂಡರಿ ಪರೀಕ್ಷೆಯೂ ಒಂದೇ. ಬಿ.ಎ. ಪರೀಕ್ಷೆಯೂ ಒಂದೇ. ಈಗ ಸ್ವಲ್ಪ ದೊಡ್ಡ ಚಾಕರಿ ಸಿಕ್ಕಬಹುದೆಂದು ಅವನ ತಂದೆಯು ಆಸೆ. ಕರಣಿಕರೂ ಅವನು ಸರ್ಕ್ಕಾರಿ ನೌಕರಿಗೆ ಸೇರಿ ಸಂಪಾದಿಸಿ ತಂದೆಯನ್ನು ತೃಪ್ತಿಪಡಿಸಲೆಂದು ಅಭಿಪ್ರಾಯಪಟ್ಟರು. ಗುರುಗಳು ಆಲೋಚನಾಪರನಾದ ಮರಿಗೌಡನ ನಿರ್ಧಾರಕ್ಕೇ ಬಿಟ್ಟರು. ಮರಿಗೌಡನಿಗೇನೋ ಊರು ಬಿಟ್ಟು ಹೋಗಲು ಇಷ್ಟವಿಲ್ಲ. ಆ ನದಿ, ಆ ಬೆಟ್ಟ, ಆ ಹೊಲ, ಹತ್ತಿರದಲ್ಲೇ ಕಾಣುವ ಸೇತುವೆ, ಅದರ ಮೇಲೆ ಹೊಗೆಯುಗುಳುತ್ತಾ ರಭಸದಿಂದ ಹೋಗುವ ರೈಲುಗಾಡಿ, ಸುತ್ತಲೂ ಹಸುರಾದ ಪೈರುಪಚ್ಚೆಗಳಿಂದ ಕೂಡಿದ ಹೊಲಗದ್ದೆಗಳು, ಚಿಲಿಪಿಲಿಗುಟ್ಟುವ ಪಕ್ಷಿ ಸಂಕುಲ, ದನಕರುಗಳ ಕೂಗು, ಪ್ರತಿದಿನವೂ ಬೆಳಿಗ್ಗೆ ಸಾಯಂಕಾಲ ಬೆಟ್ಟದಿಂದ ಕೇಳಿಬರುವ ಘಂಟಾನಾದ, ಇವುಗಳ ಮಧ್ಯೆ ತಾನು, ತನ್ನ ಮನೆ, ತನ್ನ ತಾಯ್ತಂದೆ, ತನ್ನ ಗ್ರಾಮ, ಗುರುಸನ್ನಿಧಿ,—ಇವುಗಳನ್ನು ಬಿಟ್ಟುಹೋಗಲು ಮನಸೊಪ್ಪದು. ಆದರೂ ತಂದೆಯ ಆಶಯ— ಮಗನು ನೌಕರಿ ಮಾಡಬೇಕೆಂದು. ಮೊದಲೇ ದೊಡ್ಡ ಅಧಿಕಾರ ಸಿಕ್ಕಲು ಬಡ ರೈತನ ಮಗನಿಗೆ ಹೇಗೆ ಸಾಧ್ಯ? ಆಗರ್ಭ ಶ್ರೀಮಂತನಲ್ಲ, ವಂಶ ಗೌರವವಿಲ್ಲ, ದೊಡ್ಡವರ ಸಂಬಂಧವೂ ಇಲ್ಲ, ಬೆಂಬಲವೂ ಇಲ್ಲ. ಹಳ್ಳಿಯ ಅನಾಮಧೇಯ ಒಕ್ಕಲು. ಕೇವಲ ತಂದೆಯ ಬಹುದಿನಗಳ ಬಯಕೆಯನ್ನು ಈಡೇರಿಸಲು ಮಾತ್ರ ತಾರತಮ್ಯವಿಲ್ಲದೆ ಯಾವುದಾದರೊಂದು ಸರ್ಕ್ಕಾರಿ ನೌಕರಿಗೆ ಸೇರಬೇಕಾಗಿತ್ತು.

ಹತ್ತಿರದ ಪೇಟೆಗೆ ಆಗಾಗ ಹೋಗಿ ಕಛೇರಿಯಲ್ಲಿ ಗೆಜೆಟ್ ನೋಡುತ್ತಿದ್ದ. ಹನ್ನೆರಡು ಮಂದಿ ರೆವೆನ್ಯೂ ಇನ್ಸ್‌ಪೆಕ್ಟರುಗಳನ್ನು ಚುನಾಯಿಸಿಕೊಳ್ಳುವುದಾಗಿ ಪ್ರಕಟನೆಯಿತ್ತು. ಅರ್ಜಿ ಹಾಕಿದ. ಭೇಟಿಗಾಗಿ ಪತ್ರ ಬಂತು. ಕೆಲಸವೂ ಸಿಕ್ಕಿತು. ಆರು ತಿಂಗಳ ಕಾಲ ಬೆಂಗಳೂರಲ್ಲಿಯೇ ಶಿಕ್ಷಣ ಹೊಂದಬೇಕಾಯಿತು. ಹೊಸದಾಗಿ ಚುನಾಯಿಸಲ್ಪಟ್ಟ ಆರು ಮಂದಿ ಅಮುಲ್ದಾರರುಗಳ ಜೊತೆಯಲ್ಲಿಯೇ ಈ ಹನ್ನೆರಡು ಮಂದಿಗೂ ಶಿಕ್ಷಣ. ಆರು ತಿಂಗಳ ಕಾಲವೂ ಸಹವಾಸ ಸುಖವಾಗಿತ್ತು. ಆಧುನಿಕ ಕಾಲದ ತರುಣ ವಯಸ್ಸಿನ ಅಮುಲ್ದಾರರುಗಳು ರೆವೆನ್ಯೂ ಇನ್ಸ್‌ಪೆಕ್ಟರುಗಳನ್ನು ಸಮಭಾವದಿಂದ ಕಾಣುತ್ತಿದ್ದರು. ಶಿಕ್ಷಣ ಪೂರೈಸಿದ ಮೇಲೆ ಮರಿಗೌಡನನ್ನು ದೂರವಾದೊಂದು ಊರಿಗೆ ರೆವೆನ್ಯೂ ಇನ್ಸ್‌ಪೆಕ್ಟರಾಗಿ ಹಾಕಿದರು. ತಂದೆಯ ದೃಷ್ಟಿಯಲ್ಲಿ ಮಗನಿಗೆ ದೊಡ್ಡ ಅಧಿಕಾರವಾಯಿತೆಂದು ಸಂತೋಷ. ಮಗನಿಗೆ ಅಷ್ಟು ಉತ್ಸಾಹವಿಲ್ಲ. ಆದರೂ ಕೆಲಸದ ಮೇಲೆ ಹೋದ.

ಆ ಊರಲ್ಲಿ ಊಟಕ್ಕೆ ಹೋಟೇಲಿಲ್ಲ. ಸ್ಥಳದ ಪಟೇಲ್ ಶಾನುಬೋಗರ ಮನೆಯಲ್ಲಿಯೇ ಊಟಮಾಡಲು ಆಹ್ವಾನವಿದ್ದರೂ ಉದ್ಯೋಗ ಗೌರವದಿಂದ ಮರಿಗೌಡನು ಅದಕ್ಕೆ ಸಮ್ಮತಿಸಲಿಲ್ಲ. ಜವಾನನೊಬ್ಬನಿಂದ ಅಡಿಗೆ ಮಾಡಿಸಲುಪಕ್ರಮಿಸಿದ. ಹೀಗೆ ಒಂದೆರಡು ತಿಂಗಳು ಕಳೆದ ಮೇಲೆ ಮಗನನ್ನು ನೋಡಿಕೊಂಡು ಬರಲು ತಂದೆಯು ಬಂದ. ಮಗನ ಉದ್ಯೋಗ ವೈಭವವನ್ನು ಕಂಡು ಹಿಗ್ಗಿದ. ಮಗನಲ್ಲಿಗೆ ಬಂದು ಹೋಗುತ್ತಿರುವ ಪಟೇಲ ಶಾನುಬೋಗರೇನು, ತೋಟಿ ತಳವಾರರೇನು, ರೈತರೇನು, ಅವರು ಕೇಳುತ್ತಿರುವ ಅಹವಾಲುಗಳೇನು, ಅದಕ್ಕೆ ಮಗನು ಹೇಳುತ್ತಿರುವ ಸಮಾಧಾನವೇನು—ಇವೆಲ್ಲವೂ ತನ್ನ ಮಗನ ಅಧಿಕಾರಕ್ಕೊಳಪಟ್ಟಿರುವುದನ್ನು ನೋಡಿ ವಿಸ್ಮಯಪಟ್ಟು ಇಂಥಾ ಮಗನನ್ನು ಪಡೆದ ತನ್ನ ಜನ್ಮವೇ ಸಾರ್ಥಕವೆಂದು ಭಾವಿಸಿದ. ರೈತನೊಬ್ಬನು ಬಂದು ಒಂದು ಅರ್ಜಿಯನ್ನೂ ಐದು ರೂಪಾಯಿನ ನೋಟನ್ನೂ ಇನ್ಸ್‌ಪೆಕ್ಟರ ಮೇಜಿನ ಮೇಲಿರಿಸಿದನು. ರೂಪಾಯಿ

ಏತಕ್ಕೆಂದು ಇನ್ಸ್ಪೆಕ್ಟರು ಕೇಳಿದರು. ಪಕ್ಕದಲ್ಲಿಯೇ ಇದ್ದ ಶಾನುಬೋಗರು, "ಏನೋ ಬಡವ ಸ್ವಾಮಿ, ದರಖಾಸ್ತು ಕೊಟ್ಟಿದ್ದಾನೆ, ಮುಂಜೂರಾದ ಮೇಲೆ ಪುನಃ ಬಂದು ಕಾಣುತ್ತಾನೆ." ಎಂದರು. "ರೂಪಾಯಿ ಏತಕ್ಕೆ?" ಎಂದು ಪುನಃ ಇನ್ಸ್ಪೆಕ್ಟರು ಕೇಳಿದರು. ಶಾನುಬೋಗರು, "ಬಡಭಕ್ತಿ ಸ್ವಾಮಿ" ಎಂದರು. ಇನ್ಸ್ಪೆಕ್ಟರು ಅರ್ಜಿಯನ್ನು ತೆಗೆದುಕೊಂಡು ರೂಪಾಯನ್ನು ರೈತನಿಗೆ ಹಿಂದಕ್ಕೆ ಕೊಡಲು ಕೈನೀಡಿದರು. ಶಾನುಬೋಗರು, "ಸ್ವಾಮಿ, ತಾವು ನಿರಾಕರಿಸಬಾರದು. ತಾವು ಮಾಡಿಕೊಡುವ ಉಪಕಾರ ಶಾಶ್ವತವಾದುದು. ಬಡರೈತ ಬದುಕಿಕೊಳ್ಳುತ್ತಾನೆ. ತಾವು ಇಂಥಾ ವಿಚಾರಗಳಲ್ಲಿ ಉದಾಸೀನರಾದರೆ ಗ್ರಾಮಾಂತರಗಳಲ್ಲಿ ನಮ್ಮ ಮಾತಿಗೆ ಬೆಲೆ ಬರುವುದಿಲ್ಲ. ನಾವಿರುವುದು ರೈತರಿಗಾಗಿ, ಅವರಿರುವುದು ನಮಗಾಗಿ" ಎಂದರು. "ಆಗಲಿ ಮಾಡಿಕೊಡುತ್ತೇನೆ" ಎಂದು ಹೇಳಿ ಇನ್ಸ್ಪೆಕ್ಟರು ನೋಟನ್ನು ರೈತನ ಕೈಲಿ ಕೊಟ್ಟರು. ಶಾನುಬೋಗರೂ ರೈತನೂ ಹೊರಟುಹೋದಮೇಲೆ "ಯಾಕಪ್ಪ, ತಕೊಳ್ಳಿಲ್ಲ" ಎಂದು ತಂದೆ ಮಗನನ್ನು ಕೇಳಿದನು. "ಅಪ್ಪ, ಸರ್ಕಾರದವರು ಈಗ ನನ್ನ ಜೀವನಕ್ಕಾಗು ವಷ್ಟು ಸಂಬಳ ಕೊಡುತ್ತಿದ್ದಾರೆ. ಅದರಲ್ಲಿ ಉಳಿಸಿ ನಿನಗೂ ಅಲ್ಪಸ್ವಲ್ಪ ಕಳಿಸಬಲ್ಲೆ. ಆ ರೈತನಿಗೆ ರೂಲ್ಸು ಪ್ರಕಾರ ಯಾವ ರೀತಿ ಮಾಡಬೇಕೋ ಹಾಗೆ ಮಾಡುವುದು ನನ್ನ ಕರ್ತವ್ಯ. ಅದಕ್ಕೇಕೆ ಬೇರೆ ಸುಂಕ ತೆಗೆದುಕೊಳ್ಳಬೇಕು?" ಎಂದು ಮಗ ಉತ್ತರಕೊಟ್ಟನು. "ಏನೋಪ್ಪ! ಇದೆಲ್ಲ ನನಗೆ ತಿಳಿಯೊಲ್ಲ" ಎಂದು ಹೇಳಿ ತಂದೆಯು ಸುಮ್ಮನಾದ. ಮೂರುದಿನ ಮಗನೊಂದಿಗಿದ್ದು ಮಗನು ಕೊಟ್ಟ ದುಡ್ಡನ್ನು ತೆಗೆದುಕೊಂಡು ಬೋರೆ ಗೌಡನು ಊರಿಗೆ ಬಂದ.

ಅಲ್ಲಿಂದ ಒಂದು ವಾರಕ್ಕೆ ಸರಿಯಾಗಿ ಆ ಊರಲ್ಲಿ ಹುಜೂರು ಜಮಾಬಂದಿ. ಸಾಹೇಬರು ಅಲ್ಲಿ ಒಂದು ದಿನ ಮೊಕ್ಕಾಂ ಮಾಡುವುದಾಗಿ ವರ್ತಮಾನ ಬಂತು. ಒಂದು ದಿನ ಮುಂಚಿತವಾಗಿಯೇ ಅಡಿಗೆಗೆ ಬೇಕಾದ

ಸಾಮಾನುಗಳನ್ನು ತೆಗೆದುಕೊಂಡು ತಾಲ್ಲೋಕು ಕಛೇರಿ ಮುಚ್ಚಿಯೊಬ್ಬನು ಬಂದ. ಮರುದಿನ ಬೆಳಿಗ್ಗೆ ಸಾಹೇಬರ ಪರಿಚಾರಕನೂ ಗುಮಾಸ್ತರೂ ಬಂದರು. ಅಡಿಗೆಗೆ ಪ್ರಾರಂಭವಾಯಿತು. ಬೆಳಿಗ್ಗೆ ಹನ್ನೊಂದು ಘಂಟೆಯಾದರೂ ರೆವೆನ್ಯೂ ಇನ್ಸ್‌ಪೆಕ್ಟರಾರೂ ಅಡಿಗೆ ಕೋಣೆಯ ಕಡೆಗೆ ಹೋಗಲಿಲ್ಲ. ಜವಾನನೊಬ್ಬನು ಬಂದು ಅಡಿಗೆ ಭಟ್ಟರು ಕರೆಯುತ್ತಾರೆಂದು ಇನ್ಸ್‌ಪೆಕ್ಟರಿಗೆ ಹೇಳಿದನು. ಇನ್ಸ್‌ಪೆಕ್ಟರು ಹೋಗಿ ಏನುಬೇಕೆಂದು ಕೇಳಿದರು.

ಭಟ್ಟ—ಯಾರ್ರಿ, ಇಲ್ಲಿ ರೆವೆನ್ಯೂ ಇನ್ಸ್‌ಪೆಕ್ಟರು?

ರೆ.ಇನ್ಸ್‌ಪೆಕ್ಟರು—ನಾನೆ, ಏನಾಗಬೇಕಾಗಿತ್ತು?

ಭಟ್ಟ—ಈ ಊರಲ್ಲಿ ಸಿಸರ್ಸ್ ಸಿಗರೇಟು ಸಿಕ್ಕುವುದಿಲ್ಲವೋ?

ರೆ.ಇನ್ಸ್‌ಪೆಕ್ಟರು—ಸಿಕ್ಕುತ್ತೋ ಇಲ್ಲವೋ ನನಗೆ ತಿಳಿಯದು.

ಭಟ್ಟ—ಕೆಲಸಕ್ಕೆ ನೀವು ಹೊಸಬು ಎಂದು ಕಾಣುತ್ತೆ. ಇದೆಲ್ಲಾ ಇನ್ನೂ ಯಾವಾಗ ತಿಳಿಯುವುದು?

ರೆವೆನ್ಯೂ ಇನ್ಸ್‌ಪೆಕ್ಟರು ಭಟ್ಟನ ಕಡೆ ಹಾಗೆಯೇ ನೋಡಿದರು. ತಿರಸ್ಕಾರಭಾವದಿಂದಲೂ ಅಹಂಕಾರದಿಂದಲೂ ಹೇಳುವಂತಿತ್ತು. ಇದು ಅವರಿಗೆ ಸರಿಬೀಳಲಿಲ್ಲ. ಬೆಳಕು ಹರಿಯುವುದಕ್ಕೆ ಮುಂಚೆಯೇ ಎದ್ದು, ತಂಗಳು ಗಂಜಿಯನ್ನು ಕುಡಿದು ಕೆಸರು ಗದ್ದೆಯಲ್ಲಿ ಕೆಲಸ ಮಾಡಲು ಕೈಲಾಗದೆ, ರುಚಿರುಚಿಯಾದ ಭಕ್ಷ್ಯಗಳ ಹೆಸರನ್ನೇ ಅರಿಯದಿದ್ದರೂ ಹೊಟ್ಟೆಪಾಡಿಗಾಗಿ ನೂರಾರು ಮೈಲಿಗಳ ದೂರದ ಪರಸ್ಥಳದಿಂದ ಇಲ್ಲಿಗೆ ಬಂದು ಪರಿಚಾರಕನಾಗಿರುವ ಇವನಿಗೇಕೆ ಇಷ್ಟು ಪ್ರತಿಷ್ಠೆ ಎನ್ನಿಸಿತು. ಆದರೆ ಇದಕ್ಕೆ ಇವನಿಗಿರುವ ಸ್ಥಾನಬಲವೇ ಕಾರಣವೆಂದು ತಿಳಿದು ಕೋಪವನ್ನು ತಡೆದು, “ಆ ಸಮಾಚಾರವೆಲ್ಲಾ ನಿನಗೇಕೆ, ನಿನ್ನ ಕೆಲಸವನ್ನು ನೀನು ನೋಡು.” ಎಂದು ಹೇಳಿದರು.

ಭಟ್ಟ—ಹಾಗೋ, ಇರಲಿ ಹೋಗಿ, ನೋಡಿಕೊಳ್ಳುತ್ತೇನೆ, (ಎಂದು ಹೇಳುತ್ತಾ ಒಳಗೆ ಹೊರಟು ಹೋದ.)

ಅಷ್ಟುಹೊತ್ತಿಗೆ ಸರಿಯಾಗಿ ಮೋಟಾರ್ ಗಾಡಿಯು ಶಬ್ದ ಕೇಳಿಸಿತು. ಸಾಹೇಬರನ್ನು ಇದಿರುಗೊಳ್ಳಲು ಇನ್ಸ್ಪೆಕ್ಟರು ಹೋದರು. ಗಾಡಿಯೂ ಬಂತು. ಸಾಹೇಬರೂ ಅಮುಲ್ದಾರರೂ ಗಾಡಿಯಿಂದಿಳಿದೊಡನೆಯೇ ರೆವೆನ್ಯೂ ಇನ್ಸ್ಪೆಕ್ಟರು ನಮಸ್ಕಾರ ಮಾಡಿದರು. "ಇವರೇನೋ ಇಲ್ಲಿಯ ರೆವೆನ್ಯೂ ಇನ್ಸ್ಪೆಕ್ಟರು?" ಎಂದು ಅಮುಲ್ದಾರರೊಡನೆ ಮಾತನಾಡುತ್ತಾ ಸಾಹೇಬರು ಬಿಡಾರದೊಳಕ್ಕೆ ಹೊರಟುಹೋದರು.

ಸಾಹೇಬರೂ ಅಮುಲ್ದಾರರೂ ಊಟಕ್ಕೆ ಕುಳಿತರು. ಕಡೆಯಲ್ಲಿ ಮೊಸರು ತರುವಂತೆ ಭಟ್ಟನಿಗೆ ಹೇಳಿದರು. "ಮೊಸರು ಸಿಗಲಿಲ್ಲ" ಎಂದು ಉತ್ತರ ಬಂತು.

"ಹಾಗಾದರೆ ಏನಿದೆ ?"

"ಮಜ್ಜಿಗೆ ಇದೆ."

"ಹಾಲಿಲ್ಲವೆ ?"

"ಒಡೆದುಹೋಗಿದೆ."

"ಮಜ್ಜಿಗೆಯನ್ನೇ ಬಡಿಸು."

ಭಟ್ಟನು ಮಜ್ಜಿಗೆ ಬಡಿಸಿದ. ಹೇಗೋ ಸಾಹೇಬರ ಊಟವಾಯ್ತು. ಹೊರಗೆ ಬಂದಾಗ ಅಮುಲ್ದಾರರು ಇನ್ಸ್ಪೆಕ್ಟರೊಡನೆ ಹಾಲು ಮೊಸರಿನ ಪ್ರಸ್ತಾಪ ಮಾಡಿದರು. ಬೇಕಾದಷ್ಟು ತರಿಸಿಕೊಟ್ಟಿದ್ದರೆಂದು ಖಚಿತವಾಗಿ ತಿಳಿಯಿತು. ಯಾವ ಮಾತನ್ನೂ ಆಡದೆ ಸುಮ್ಮನಾದರು.

ಮಧ್ಯಾಹ್ನ ಜಮಾಬಂದಿ. ಲೆಖ್ಖಗಳನ್ನು ನೋಡಿದರು. ಕಂದಾಯ ವಸೂಲಿ ತೃಪ್ತಿಕರವಾಗಿತ್ತು. ಅರ್ಜಿಗಳನ್ನು ಕೂಗಿಸಿದರು. ಆಮೇಲೆ ರೆವೆನ್ಯೂ ಇನ್ಸ್ಪೆಕ್ಟರಲ್ಲಿ ತೀರ್ಮಾನವಾಗದೆ ಉಳಿದಿರುವ ಕಾಗದಪತ್ರಗಳನ್ನು ತರಿಸಿದರು. ಯಾವುದೋ ಒಂದೆರಡು ಕಾಗದಗಳು ಬಹಳ ದಿನಗಳಿಂದ ಉಳಿದಿದ್ದುವು. ಸಾಹೇಬರು ರೆವೆನ್ಯೂ ಇನ್ಸ್ಪೆಕ್ಟರ ಕಡೆ ತಿರುಗಿದರು. ಮುಖವು ಉಗ್ರವಾಗಿತ್ತು.

ಸಾಹೇಬರು—ಏತಕ್ಕೆ ಇವು ಇನ್ನೂ ಫೈಸಲಾಗಿಲ್ಲ?

ರೆ.ಇನ್ಸ್ಪೆಕ್ಟರು—ನಾನು ಇಲ್ಲಿಗೆ ಬಂದು ಇನ್ನೂ ಎರಡು ತಿಂಗಳು. ಕಂದಾಯ ವಸೂಲಿ ಕಾಲವಾದ್ದರಿಂದ ಅದರಲ್ಲಿ ಹೆಚ್ಚು ಆಸಕ್ತನಾಗಿದ್ದೆ. ನನಗೆ ಚಾರ್ಜು ಕೊಟ್ಟವರನ್ನು ಪ್ರತಿಯೊಂದು ಕಾಗದದ ಪೂರ್ವಾಪರಗಳನ್ನು ಕೇಳಿದೆ. ಅದನ್ನು ವಿಶದವಾಗಿ ಹೇಳಲು ಅವಕಾಶವಿಲ್ಲದೆ ಅವರು ತುರ್ತಾಗಿ ಹೊರಟುಹೋದರು.

ಸಾಹೇಬರು—ಈ ಸಬೂಬುಗಳೆಲ್ಲಾ ಅನಾವಶ್ಯಕ. ಇವನ್ನು ತೀರ್ಮಾನಿಸದೆ ಇಟ್ಟಿರುವುದರಲ್ಲಿ ಏನೋ ಸಂಶಯವಿದೆ. ಇನ್ನೊಂದು ವಾರದೊಳಗಾಗಿ ಎಲ್ಲವನ್ನೂ ತೀರ್ಮಾನಿಸದಿದ್ದರೆ ಪರಿಣಾಮ ಕೆಟ್ಟೀತು. ಎಚ್ಚರಿಕೆ.

ಸಾಹೇಬರು ಹೇಳಿದ ಮಾತುಗಳಿಗಿಂತಲೂ ಅವರ ಕಂಠವು ಕಠೋರವಾಗಿತ್ತು. ಮರಿಗೌಡನಿಗೆ ಸೇವಾವೃತ್ತಿಯ ಅನುಭವವು ತಟ್ಟಿತು. ಜಮಾಬಂದಿಯಾದ ಮೇಲೆ ಮನೆಗೆ ಬಂದು, ಅಂದಿನ ಅನುಭವಗಳನ್ನೆಲ್ಲಾ ಗುಣಿಸುತ್ತಾ ಸ್ವಲ್ಪಹೊತ್ತು ಕುಳಿತನು. ಕಾಲೇಜಿನ ಅಧ್ಯಾಪಕರೊಂದಿಗೂ ಸಹಪಾಠಿಗಳೊಂದಿಗೂ ಮರ್ಯಾದೆ ಮತ್ತು ಪ್ರೀತಿ ವಿಶ್ವಾಸಗಳಿಂದ ವ್ಯವಹರಿಸುತ್ತಿದ್ದ ಸವಿದಿವಸಗಳನ್ನು ಜ್ಞಾಪಿಸಿಕೊಂಡ. ಮನಸ್ಸಿಗೆ ಜುಗುಪ್ಸೆಯುಂಟಾಯಿತು. ಒಂದು ನಿರ್ಧಾರಕ್ಕೆ ಬಂದ. ಕೆಲಸಕ್ಕೆ ರಾಜೀನಾಮೆಯನ್ನು ಬರೆದು ಲಕೋಟೆಯಲ್ಲಿ ಹಾಕಿ ಅಂಟಿಸಿ ಸಾಹೇಬರಿಗೆ ಕಳುಹಿಸಿಕೊಟ್ಟ. ಸಾಹೇಬರು ಟೀ ಕುಡಿಯುತ್ತಾ ಅಮಲ್ದಾರರೊಡನೆ ಮಾತನಾಡುತ್ತಾ ಕುಳಿತಿದ್ದರು. ಜವಾನನು ಕಾಗದವನ್ನು ತಂದು ಮುಂದಿಟ್ಟುಹೋದ. ಸಾಹೇಬರು ಲಕೋಟೆಯನ್ನು ಒಡೆದು ನೋಡಿದರು. ಯಾವ ಮಾತನ್ನೂ ಆಡದೆ ಅಮಲ್ದಾರರ ಕೈಲಿ ಕೊಟ್ಟರು. ಅಮಲ್ದಾರರು ವಿಚಾರಿಸುವುದಾಗಿ ಹೇಳಿ ಹೊರಗೆ ಬಂದು ಮರಿಗೌಡನಿಗೆ ಹೇಳಿಕಳುಹಿಸಿದರು. ಅವನೂ ಬಂದನು. ಕಾರಣವನ್ನು ಕೇಳಿದರು. ಅವರೇ ಯೋಚಿಸುವಂತೆ ಹೇಳಿದನು. ಅದಕ್ಕವರು, "ಇದೆಲ್ಲಾ ನಮ್ಮಲ್ಲಿ ಸರ್ವಸಾಮಾನ್ಯ. ವಿಚಾರವನ್ನು

ತಿಳಿದುಕೊಂಡು ಅದಕ್ಕನುಗುಣವಾಗಿ ನಡೆಯುತ್ತಾ ಹೋದರೆ ನೀವೇ ಪಕ್ಕಾ ಕೆಲಸಗಾರರಾಗುತ್ತೀರ. ಈ ಅಲ್ಪವಿಚಾರಗಳನ್ನೆಲ್ಲಾ ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳದೆ ಸ್ವಲ್ಪ ಸಮಾಧಾನವನ್ನು ಹೊಂದಬೇಕು. ಹಾಗಿಲ್ಲದಿದ್ದರೆ ಇನ್ನೂ ಎಂಥ ಮಹತ್ತರ ಸನ್ನಿವೇಶಗಳೋ ಬಂದಾಗ ಗತಿ ಏನು?" ಎಂದರು.

ಮರಿಗೌಡ—ಸ್ವಾಮಿ, ಇಷ್ಟೇ ಸಾಕು. ನಾನು ನಿರ್ಧರಿಸಿದ್ದೇನೆ. ದಯವಿಟ್ಟು ನನ್ನನ್ನು ಕಳುಹಿಸಿ.

ಅಮಲ್ದಾರರು—ಹಾಗಲ್ಲ ಮರಿಗೌಡ. ನಿಮಗಿನ್ನೂ ಚಿಕ್ಕವಯಸ್ಸು. ಇನ್ನು ಹತ್ತು ವರ್ಷಗಳೊಳಗಾಗಿ ಅಮಲ್ದಾರಿಯಾಗುವ ಸಂಭವವಿದೆ. ನಾನೂ ಮೊದಲು ಶೇಕದಾರಿಗೇ ಸೇರಿದ್ದು. ಈಗ ದುಡುಕಿದರೆ ಮುಂದೆ ಮಕ್ಕಳು ಮರಿಗಳೊಂದಿಗೆ ದೊಡ್ಡ ಸಂಸಾರವನ್ನು ನೀಗಲಾರದೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ಯೋಚಿಸಿ ಹೇಳಿ. ನಿಮ್ಮ ರಾಜೀನಾಮೆಯನ್ನು ಹಿಂದಕ್ಕೆ ತಂದುಕೊಡುತ್ತೇನೆ. ಸಾಹೇಬರ ಮಾತು ಗಡುಸೇ ಹೊರತು ಹೃದಯ ಒಳ್ಳೆಯದು.

ಮರಿಗೌಡ—ಸ್ವಾಮಿ, ಈಗಿನ ಶೇಕದಾರಿಯೂ ಬೇಡಿ. ಮುಂದಿನ ಅಮಲ್ದಾರಿಯೂ ಬೇಡಿ. ಇದಾವುದೂ ಇಲ್ಲದೆಯೇ ನಮ್ಮ ತಂದೆ ನಮ್ಮನ್ನು ಸಾಕಲಿಲ್ಲವೆ? ನಮ್ಮೂರಿನ ನೂರಾರು ಸಂಸಾರಗಳು ಕಾಲಯಾಪನೆ ಮಾಡುತ್ತಿಲ್ಲವೆ? ಸಾಕು. ನನ್ನನ್ನು ಬಿಡುಗಡೆ ಮಾಡಿ.

ಮರದ ಕೆಳಗೆ ಹೀಗೆ ಮಾತನಾಡುತ್ತಿರುವಾಗ ಸಾಹೇಬರು ಹೊರಗೆ ಬಂದು ಇಬ್ಬರನ್ನೂ ಕೂಗಿದರು.

ಸಾಹೇಬರು—Young man, what is it you have done? Don't be hasty. (ಏನು ನೀವು ಮಾಡಿರುವ ಕೆಲ್ಸ? ದುಡುಕಬೇಡಿ.)

ಮರಿಗೌಡ—I think it is clear enough in my letter. (ಏನೆಂಬುದು ಕಾಗದದಲ್ಲಿ ವಿವರವಾಗಿದೆ.)

ಸಾಹೇಬರು—Shall I accept it ? (ಅದನ್ನು ಅಂಗೀಕರಿಸಲೊ ?)

ಮರಿಗೌಡ—Please, for Heaven's sake. (ದಯಮಾಡಿ.)

ಸಾಹೇಬರು-(ಅಮಲ್ದಾರರ ಕಡೆ ತಿರುಗಿ) You can arrange to relieve him. (ಅವರನ್ನು ಬಿಡುಗಡೆ ಮಾಡಿ.)

ಅಲ್ಲಿಗೇ ಮರಿಗೌಡನ ನೌಕರಿಯು ಕೊನೆಗಂಡಿತು. ಅಲ್ಲಿಂದ ಒಂದು ವಾರದೊಳಗಾಗಿ ಹೊಸ ರೆವೆನ್ಯೂ ಇನ್ಸ್ಪೆಕ್ಟರು ಬಂದು ಮರಿಗೌಡನಿಂದ ಛಾರ್ಜು ವಹಿಸಿಕೊಂಡರು.

ಊರಿಗೆ ಬಂದೊಡನೆಯೇ ಮರಿಗೌಡನು ಗುರುಗಳ ದರ್ಶನಕ್ಕಾಗಿ ಹೋದನು. ಗುರುಗಳು ಸಮಾಚಾರವನ್ನೆಲ್ಲಾ ಕೇಳಿ, "ಇದು ಯಾವ ದೊಡ್ಡ ವಿಚಾರ. ಕೋಟ್ಯಾನುಕೋಟಿ ಜೀವರಾಶಿಗಳನ್ನು ಸಲಹುತ್ತಿರುವ ಭಗವಂತನು ಯಾವುದಾದರೊಂದು ರೀತಿಯಲ್ಲಿ ನಿನಗೂ ಅನ್ನವನ್ನೊದಗಿಸುತ್ತಾನೆ. ಆತ್ಮಗೌರವವನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ. ಮುಂದೇನು ಮಾಡಬೇಕೆಂಬುದನ್ನು ಯೋಚಿಸೋಣ.'' ಎಂದು ಹೇಳಿದರು. ತಂದೆಗೂ ವಿಚಾರ ತಿಳಿಯಿತು. ಯಾವ ಅಭಿಪ್ರಾಯವನ್ನೂ ಹೇಳಲು ಶಕ್ತಿಯಿಲ್ಲದೆ ಸುಮ್ಮನಿದ್ದನು. ಕರಣಿಕರಿಗೆ ಮರಿಗೌಡನು ತಕ್ಷಣಕ್ಕೆ ಸ್ವಲ್ಪ ದುಡುಕಿದನೆಂದು ತೋರಿದರೂ ಅವನ ಧೈರ್ಯ, ಉತ್ಸಾಹ, ಕಾರ್ಯತತ್ಪರತೆ ಮತ್ತು ದಕ್ಷತೆಗಳಲ್ಲಿ ಸಂಪೂರ್ಣ ನಂಬಿಕೆ ಇದ್ದಿತು.

ತಂದೆ ಮತ್ತು ಅಣ್ಣನೊಂದಿಗೆ ಆಲೋಚಿಸಿ ಮರಿಗೌಡನು ಹೊಸ ರೀತಿಯ ವ್ಯವಸಾಯವನ್ನು ಉಪಕ್ರಮಿಸಿದನು. ಹೊಲದ ಅರ್ಧಭಾಗವನ್ನು ತಂದೆಯ ಆರಂಬಕ್ಕಾಗಿ ಬಿಟ್ಟು ಉಳಿದ ಅರ್ಧದಲ್ಲಿ ನದಿಗೆ ಹತ್ತಿರವಾಗಿ ಒಂದು ಭಾವಿಯನ್ನು ತೋಡಿ ಅದಕ್ಕೊಂದು ಏತವನ್ನು ಹಾಕಿದ. ಒಂದೆಕರೆಯಷ್ಟಕ್ಕೆ ಆಲೂಗಡ್ಡೆಯನ್ನೂ ಈರುಳ್ಳಿಯನ್ನೂ ನೆಟ್ಟ. ಉಳಿದ ಒಂದೆಕರೆಯನ್ನು ಸಣ್ಣ ಸಣ್ಣ ಪಾತಿಗಳಾಗಿ ಮಾಡಿ ಹುರಳಿಕಾಯಿ,

ಮುಲ್ಲಂಗಿ, ಕೋಸು ಮುಂತಾದ ತರಕಾರಿಗಳನ್ನು ಬೆಳೆಸಿದ. ನದಿಕಡೆ ಬೇಲಿಯ ಉದ್ದಕ್ಕೂ ಪರಂಗಿ ಗಿಡಗಳನ್ನು ಹಾಕಿದ. ಹೊಲ ಬಿತ್ತನೆಯಾಗುವ ಕಾಲಕ್ಕೆ ಒಂದು ಬೆಳೆ ಬಂತು. ಬಂದ ಬೆಳೆಯನ್ನು ಬೆಂಗಳೂರಿಗೆ ತೆಗೆದುಕೊಂಡು ಹೋಗಿ ಮಾರಿದ. ಲೆಕ್ಕ ಹಾಕಿದ. ತಂದೆ ಮಕ್ಕಳ ದೇಹ ಶ್ರಮ, ಕೂಲಿಯಿಲ್ಲ. ಸ್ವಂತ ಗಾಡಿ, ಬಾಡಿಗೆಯಿಲ್ಲ. ಬಂದ ಪ್ರತಿಫಲವೆಲ್ಲವೂ ಲಾಭವಾಗಿಯೇ ಕಂಡಿತು. ಸಾಧಾರಣ ಕುಷ್ಕಿ ಬೆಳೆಗಿಂತಲೂ ಇದು ನಾಲ್ಕರಷ್ಟು ಲಾಭಕರವಾಗಿ ತೋರಿತು. ತಮ್ಮ ಹೊಲಕ್ಕೆ ಸೇರಿದಂತೆ ಪಕ್ಕದಲ್ಲಿ ಲಂಟಾನ ಬೆಳೆದು ಹಳ್ಳಕೊಳ್ಳಗಳಿಂದ ಕೂಡಿದ್ದ ಸುಮಾರು ಆರು ಎಕರೆಯಷ್ಟು ಬಂಜರು ಭೂಮಿಯಿತ್ತು. ಅದನ್ನು ದರಖಾಸ್ತಿನಲ್ಲಿ ಪಡೆದು ವ್ಯವಸಾಯವನ್ನು ಹೆಚ್ಚಿಸಬೇಕೆಂದು ಕುತೂಹಲಪಟ್ಟು ಕರಣಿಕರೊಡನೆ ಆಲೋಚಿಸಿದ. ಅವರೂ ಸಹಾಯ ಮಾಡುವುದಾಗಿ ಭರವಸೆ ಕೊಟ್ಟರು.

ದರಖಾಸ್ತನ್ನು ಮಂಜೂರು ಮಾಡುವವರು ಅಮಲ್ದಾರರಾದರೂ, ಅವಕ್ಕೆ ಸ್ಥಳ ಪರೀಕ್ಷೆ, ಮಹಜರು, ಅಂದಾಜಾ ಬೆಲೆ ಮುಂತಾದ ಪೂರ್ವಸಿದ್ಧತೆಗಳನ್ನೆಲ್ಲಾ ಶೇಕದಾರರೇ ಮಾಡಬೇಕಾಗಿತ್ತು. ಕರಣಿಕರಿಗೆ ಚೆನ್ನಾಗಿ ಪರಿಚಯವಿದ್ದ ಶೇಕದಾರರಿಗೆ ಪೇಟೆಯಿಂದ ವರ್ಗವಾಗಿ ಹೊಸಬರು ಬಂದು ಇನ್ನೂ ಸ್ವಲ್ಪ ದಿನಗಳಾಗಿದ್ದುವು. ಹೊಸದಾಗಿ ಬಂದ ಶೇಕದಾರರು ಬಹಳ ವರ್ಷ ಕೆಲಸಮಾಡಿದ ಅನುಭವಶಾಲಿಗಳು ಮತ್ತು ದಕ್ಷರು. ದೊಡ್ಡ ಕುಟುಂಬಿಗಳು. ಅವರ ಹೊರಗಿನ ಕೆಲಸದ ಸೌಕರ್ಯಕ್ಕಾಗಿ ಅಡಿಗೆ ಸಾಮಾನು ಮತ್ತು ಹಾಸಿಗೆ ಮುಂತಾದ ಪರಿಕರಣ ಸಾಗಿಸಲು ಎರಡೆತ್ತಿನ ಬಂಡಿಯೊಂದನ್ನೂ ತಮ್ಮ ಪ್ರಯಾಣಕ್ಕೆ ಕುದುರೆ ಗಾಡಿಯೊಂದನ್ನೂ ಇಟ್ಟಿದ್ದರು. ಸರ್ಕಾರದಿಂದ ಕೊಟ್ಟ ಇಬ್ಬರು ಜವಾನರುಗಳಲ್ಲದೆ ಸ್ವಂತ ಖರ್ಚಿನಿಂದ ಪರಿಚಾರಕನೊಬ್ಬನನ್ನು ಕೆಲಸಕ್ಕೆ ಇಟ್ಟುಕೊಂಡಿದ್ದರು. ಕರಣಿಕರು ಇದೆಲ್ಲವನ್ನೂ ತಿಳಿದುಕೊಂಡಿದ್ದರು.

ಪರೀಕ್ಷೆಯ ಫಲಿತಾಂಶವೂ ಬಂತು. ಕೃಷ್ಣಮೂರ್ತಿಯು ತೇರ್ಗಡೆ ಹೊಂದಿದ್ದನು. ಅಲ್ಲಿಗೆ ಅವನ ವಿದ್ಯಾವ್ಯಾಸಂಗವು ಪೂರ್ಣವಾದಂತಾಯಿತು. ಇನ್ನು ಕೃಷ್ಣಮೂರ್ತಿಯು ಮುಂದಿನ ವೃತ್ತಿಯನ್ನು ಮೊದಲೇ ಯೋಚಿಸಿದಂತೆ ಬೆಂಗಳೂರಲ್ಲಿ ಪ್ರಾರಂಭಿಸಬೇಕು. ಮೊದಲು ಕೆಲವು ಕಾಲ ಅನುಭವಶಾಲಿಗಳಾದ ಲಾಯರೊಬ್ಬರಲ್ಲಿ ಜೂನಿಯರ್ ಆಗಿ ಕೆಲ್ಸ ಮಾಡಬೇಕಾಗಿತ್ತು. ರಾಮಸ್ವಾಮಿಯವರ ಆಫೀಸೇ ತಕ್ಕುದೆಂದು ಕರಣಿಕರು ಮಗನನ್ನು ಕರೆದುಕೊಂಡು ಹೋಗಿ ಅವರನ್ನು ಕಂಡರು. ರಾಮಸ್ವಾಮಿಯವರೂ ಒಪ್ಪಿ ತಮ್ಮಲ್ಲಿದ್ದ ಇತರ ಜೂನಿಯರ್‌ಗಳಿಗೆ ಕೊಟ್ಟಂತೆ ತಿಂಗಳಿಗೆ ಐವತ್ತು ರೂಪಾಯಿ ಸಂಭಾವನೆಯನ್ನು ಕೊಡುವುದಾಗಿ ವಾಗ್ದಾನ ಮಾಡಿದರು. ಅಲ್ಲಿ ಸೇರಿದ ಒಂದು ತಿಂಗಳೊಳಗಾಗಿ ಕೃಷ್ಣಮೂರ್ತಿಯು ತನ್ನ ಪುಟ್ಟ ಸಂಸಾರಕ್ಕೆ ತಕ್ಕ ಮನೆಯೊಂದನ್ನು ಬಾಡಿಗೆಗೆ ಗೊತ್ತುಮಾಡಿ ಸಂಸಾರಸಮೇತ ವಾಸಿಸತೊಡಗಿದನು. ಆರು ತಿಂಗಳು ಕಳೆಯುವುದರೊಳಗಾಗಿ ಸ್ವತಂತ್ರವಾಗಿ ಆಫೀಸ್ ನಡೆಸಬೇಕೆಂಬ ಕುತೂಹಲ ಹುಟ್ಟಿತು. ತಂದೆಯ ಅನುಮತಿಯಂತೆ ಬಳೆಪೇಟೆಯಲ್ಲಿನ ಒಂದು ಮನೆಯ ಮಹಡಿಯ ಮೇಲೆ ಆಫೀಸ್ ಪ್ರಾರಂಭಿಸಿದನು.

ಆವರೆಗೆ ಬೆಂಗಳೂರಲ್ಲಿ ಲಾಯರ ಸಂಖ್ಯೆ ಮಿತಿಮೀರಿ ಹೋಗಿತ್ತು. ಕೆಲವರಿಗೆ ಬೇಕಾದಷ್ಟು ಸಂಪಾದನೆಯಾಗುತ್ತಿದ್ದರೂ ಹೊಸಬರಿಗೆ ಜೀವನ ನಡೆಯುವುದೇ ಕಷ್ಟವಾಗಿತ್ತು. ಅಂಥವರಲ್ಲಿ ಬೆಂಗಳೂರಿನ ಸ್ಥಳವಂದಿಗರೂ ಪಿತ್ರಾರ್ಜಿತ ಆಸ್ತಿಪಾಸ್ತಿಗಳುಳ್ಳವರೂ ಹೇಗೋ ಕಾಲ ತಳ್ಳುತ್ತಿದ್ದರು. ಆದರೆ ಈ ವೃತ್ತಿಯಿಂದಲೇ ಜೀವಿಸಬೇಕೆಂದು ಬಯಸಿದ ಕೃಷ್ಣಮೂರ್ತಿಯಂಥವರಿಗೆ ಅದು ಸ್ವಲ್ಪ ದುಸ್ಸಾಧ್ಯವಾಗಿತ್ತು. ಅವನು ಸ್ವಂತ ಆಫೀಸ್ ಪ್ರಾರಂಭಿಸುವುದಕ್ಕೆ ಬೇಕಾದ ಲಾ ಪುಸ್ತಕಗಳು, ಮರದ ಸಾಮಾನುಗಳು ಮುಂತಾದ ಸಿದ್ಧತೆಗಾಗಿ ಶ್ರೀನಿವಾಸರಾಯರು ಸ್ವಲ್ಪ ನೆರವಾದರು. ದವಸಧಾನ್ಯಗಳು ಹಳ್ಳಿಯಿಂದ ಬರುತ್ತಿದ್ದವು. ಇನ್ನುಳಿದ ಮನೆಬಾಡಿಗೆ, ಆಫೀಸ್ ಬಾಡಿಗೆ, ಹಾಲು,

ಮೊಸರು, ಕ್ಲಬ್, ಆಫೀಸ್, ಸಿನಿಮಾ ಮುಂತಾದ ವಿನೋದವಿಹಾರಗಳಿಗಾಗಿ ತಿಂಗಳಿಗೆ ಕನಿಷ್ಠಪಕ್ಷ ಒಂದುನೂರು ರೂಪಾಯಿಗಳಾದರೂ ಬೇಕಾಗಿತ್ತು. ಸಹಪಾಠಿಗಳ ದರ್ಜೆಗೆ ಸರಿಯಾಗಿ ತನ್ನ ಮರ್ಯಾದೆಯನ್ನುಳಿಸಿಕೊಳ್ಳಲು ಮನೆಯಿಂದ ಹಣ ತರಿಸಿಕೊಳ್ಳಬೇಕಾದ ಸ್ಥಿತಿಯಲ್ಲಿದ್ದನು.

ಅಷ್ಟಿಷ್ಟು ವಿದ್ಯಾವತಿಯೂ, ವ್ಯವಹಾರ ತಿಳಿದವಳೂ ಆದ ಕೃಷ್ಣಮೂರ್ತಿಯ ಹೆಂಡತಿಯು ಗೃಹಕೃತ್ಯ ವಿಚಾರವನ್ನು ಕುರಿತು ಬೊಂಬಾಯಿಯಲ್ಲಿದ್ದ ಅಣ್ಣನಿಗೆ ಕಾಗದ ಬರೆದಳು. ಶ್ರೀನಿವಾಸರಾಯರು ಕೂಡಲೆ ಬೆಂಗಳೂರಿಗೆ ಬಂದು ಸ್ಥಿತಿಗತಿಗಳನ್ನು ಕಂಡರು. ಮನಸ್ಸಿಗೆ ಸಮರ್ಪಕವಾಗಲಿಲ್ಲ. ಕೃಷ್ಣಮೂರ್ತಿಯೊಡನೆ ಆಲೋಚಿಸಲಾಗಿ ಸ್ಥಿತಿ ಉತ್ತಮಗೊಳ್ಳುವವರೆಗೆ ಹೆಂಡತಿಯನ್ನೂ ಮಗುವನ್ನೂ ಕೊಂಚಕಾಲ ಶಿವಪುರಕ್ಕೆ ಕಳುಹಿಸಿ ತಾನೊಬ್ಬನು ಹೋಟೇಲಿನಲ್ಲಿ ಊಟಮಾಡಿಕೊಂಡಿದ್ದು ಖರ್ಚನ್ನು ಕಡಿಮೆ ಮಾಡುವುದಾಗಿ ಹೇಳಿದನು. ಹಳ್ಳಿಯಲ್ಲಿ ವಾಸಮಾಡಲು ತನ್ನ ಅಸಮಾಧಾನವನ್ನು ಅವನ ಹೆಂಡತಿ ಅಣ್ಣನಿಗೆ ಮೊದಲೇ ಹೇಳಿದ್ದಳು. ಆದ್ದರಿಂದ ಅದು ಶ್ರೀನಿವಾಸರಾಯರ ಮನಸ್ಸಿಗೂ ಒಪ್ಪಲಿಲ್ಲ. ತಂಗಿಯನ್ನೂ, ಮಗುವನ್ನೂ ಕೆಲವು ಕಾಲ ಬೊಂಬಾಯಿಗೆ ತನ್ನೊಡನೆ ಕರೆದುಕೊಂಡು ಹೋಗುವುದಾಗಿ ತಿಳಿಸಿದರು. ಅವನು ಅಸಮಾಧಾನಸೂಚಕವಾದ ಒಂದೆರಡು ಮಾತುಗಳನ್ನಾಡಿದರೂ ಅದನ್ನು ಗಮನಿಸದೆ ಶ್ರೀನಿವಾಸರಾಯರು ತಂಗಿಯನ್ನೂ ಮಗುವನ್ನೂ ಕರೆದುಕೊಂಡು ಆ ದಿನ ರಾತ್ರಿಯೇ ಬೊಂಬಾಯಿಗೆ ಪ್ರಯಾಣ ಬೆಳಸಿದರು. ಅವರ ವರ್ತನೆಯಿಂದ ಕೃಷ್ಣಮೂರ್ತಿಗೆ ಸ್ವಲ್ಪ ಕೋಪ ಬಂದಿತಾದರೂ ವಿಧಿಯಿಲ್ಲದೆ ಅದನ್ನು ನುಂಗಿಕೊಂಡು ಸುಮ್ಮನಾದನು.

ಕೃಷ್ಣಮೂರ್ತಿಯು ಆಫೀಸಿಗೆ ಹತ್ತಿರದ ಹೋಟೇಲಿನಲ್ಲಿ ಊಟಮಾಡುತ್ತಾ ಆಫೀಸಿನಲ್ಲಿಯೇ ಮಲಗುತ್ತಿದ್ದನು. ಬರಬರುತ್ತಾ ಒಬ್ಬನ ಖರ್ಚಿಗೂ ತನ್ನ ಸಂಪಾದನೆ ಸಾಲದುದಾಯಿತು. ಆಫೀಸಿನಲ್ಲಿ ಸಾಕಾದಷ್ಟು

ಕೆಲಸವಿಲ್ಲದೆ, ಮನೆಯಲ್ಲಿ ಸಂಸಾರವಿಲ್ಲದೆ ಕೃಷ್ಣಮೂರ್ತಿಗೆ ಜುಗುಪ್ಸೆಯುಂಟಾಗುತ್ತಾ ಬಂತು. ತಾನು ಬಯಸಿದ್ದ ಆಶೋತ್ತರಗಳೆಲ್ಲವೂ ಮಾಯವಾದುವು. ಕೋರ್ಟಿಗೆ ರಜವಿದ್ದಾಗಲೂ ಹಳ್ಳಿಗೆ ಹೋಗಿ ಬರಲು ಮನಸ್ಸಾಗಲಿಲ್ಲ. ಕಷ್ಟದಿಂದ ಕಾಲವನ್ನು ತಳ್ಳುತ್ತಿದ್ದನು.

ಪ್ರಾತಃಕಾಲ ಒಂಬತ್ತು ಘಂಟೆ. ಸೂರ್ಯೋದಯಕ್ಕೆ ಮುಂಚೆಯೇ ಬಂದು ತೋಟದಲ್ಲಿ ನೀರು ಎತ್ತುತ್ತಿದ್ದ ಮರಿಗೌಡನು ಕೆಲಸವನ್ನು ನಿಲ್ಲಿಸಿ ಕೈಕಾಲು ಮುಖವನ್ನು ತೊಳೆದು ಮನೆಯಿಂದ ಬರಬೇಕಾಗಿದ್ದ ತಿಂಡಿಗಾಗಿ ಎದುರು ನೋಡುತ್ತಾ ಹಿಂದಿನ ದಿನದ ವರ್ತಮಾನ ಪತ್ರಿಕೆಯೊಂದನ್ನು ಓದುತ್ತಾ ಭಾವಿ ಪಕ್ಕದಲ್ಲಿ ಕುಳಿತಿದ್ದನು. ಕರಣಿಕರ ಹಿರಿಯಮಗ ಅಲ್ಲಿಗೇ ಬಂದು, “ ಯಜಮಾನರು ಬರಹೇಳಿದರು, ” ಎಂದ. “ ಅವರ ದೇಹಸ್ಥಿತಿ ಹೇಗಿದೆ ? ” ಎಂದು ಮರಿಗೌಡ ಕೇಳಿದ. “ ಯಥಾಸ್ಥಿತಿ. ಗಂಜಿಯೂ ಕೂಡ ಸೇರುವುದಿಲ್ಲ. ಬಹಳ ನಿಶ್ಶಕ್ತರಾಗಿದ್ದಾರೆ. ಏಕೋ ನಿನ್ನನ್ನು ಕೂಡಲೇ ಕರೆದುಕೊಂಡು ಬರಬೇಕೆಂದು ಹೇಳಿದರು.” ಎಂದು ನರಸಿಂಹಮೂರ್ತಿ ಹೇಳಿದ. ಅಲ್ಲಿಂದ ಹಾಗೆಯೇ ಮರಿಗೌಡನು ನರಸಿಂಹಮೂರ್ತಿ ಜೊತೆಯಲ್ಲಿ ಅವರ ಮನೆಗೆ ಹೋದ.

ಒಳಗಿನ ಕೋಣೆಯಲ್ಲಿ ಹಾಸಿಗೆ ಹಿಡಿದು ಮಲಗಿದ್ದ ನಾರಣಪ್ಪನವರು ಇವರು ಬಂದ ಸುಳಿವನ್ನು ತಿಳಿದು ಕಣ್ತೆರದು ಪಕ್ಕದಲ್ಲಿ ಕುಳಿತುಕೊಳ್ಳುವಂತೆ ಹೇಳಿದರು. ನರಸಿಂಹಮೂರ್ತಿಯ ಕಡೆ ತಿರುಗಿ, “ಸ್ವಲ್ಪ ಕೂರಿಸು.” ಎಂದರು. ನರಸಿಂಹಮೂರ್ತಿಯು ಕಂಕುಳಿಗೆ ಕೈಹಾಕಿ ಎತ್ತಿ ಗೋಡೆ ದಿಂಬಿಗೆ ಒರಗಿಸಿ ಕುಳ್ಳಿರಿಸಿದನು. ಮರಿಗೌಡನನ್ನು ಕುರಿತು, “ ಮರಿಯಪ್ಪಾ, ದೇವರ ದಯದಿಂದಲೂ, ನಿನ್ನ ಒಳ್ಳೆ ನಡತೆಯಿಂದಲೂ ನೀನು ವಿದ್ಯಾವಂತನಾದೆ. ಮುಂದೆ ಒಳ್ಳೆ ಅಧಿಕಾರ ದೊರೆಯುವಂಥ ಅವಕಾಶವಿದ್ದರೂ ಅದನ್ನು ಲೆಕ್ಕಿಸದೆ ಸ್ವಾತಂತ್ರ್ಯದಿಂದ ಜೀವಿಸಬೇಕೆಂದು ವ್ಯವಸಾಯ ವೃತ್ತಿಯನ್ನವಲಂಬಿಸಿದೆ. ಯೋಗ್ಯಸಂಬಂಧವೂ ದೊರೆಯಬಹುದು.

ಭಗವಂತನು ನಿನಗೆ ಸಹಾಯಮಾಡುವನು. ಅದಿರಲಿ. ನಮಗೂ ನಿಮ್ಮ ತಂದೆಗೂ ಬಹಳ ದಿನಗಳ ವಿಶ್ವಾಸ. ಅದೇ ವಿಶ್ವಾಸವನ್ನೂ ನಂಬಿಕೆಯನ್ನೂ ನಿನ್ನಲ್ಲಿಯೂ ಇರಿಸಿ ನಮ್ಮ ಗೃಹಕೃತ್ಯಕ್ಕೆ ಸಂಬಂಧಪಟ್ಟ ಒಂದು ಮುಖ್ಯ ವಿಚಾರವನ್ನು ನಿನ್ನಲ್ಲಿ ಆಲೋಚಿಸಬೇಕೆಂದು ಈಗ ಕರೆಸಿದೆ. ನೀನು ಸಹಾನುಭೂತಿ ತೋರುವುದಾಗಿ ಭರವಸೆ ಕೊಟ್ಟರೆ ಮುಂದೆ ಹೇಳುತ್ತೇನೆ." ಎಂದರು.

ಮರಿಗೌಡ—ಸ್ವಾಮಿ, ನಮ್ಮ ಮನೆಗೆ ತಾವೇ ಪ್ರತ್ಯಕ್ಷ ದೇವರು. ತಮ್ಮ ಕಾಲೋಚಿತವಾದ ಉಪಕಾರಗಳನ್ನು ಎಂದಿಗೂ ಮರೆಯಲಾಗುವುದಿಲ್ಲ. ನನ್ನ ವಿದ್ಯಾಭಿವೃದ್ಧಿಗಾಗಿ ತಾವು ಎಷ್ಟು ಸಹಾಯಮಾಡಿದ್ದೀರೆಂಬುದು ನನಗೆ ಗೊತ್ತು. ತಮ್ಮ ವಿಶ್ವಾಸಕ್ಕೆ ನಾವು, ತಂದೆ ಮಕ್ಕಳೆಲ್ಲರೂ ಋಣಿಯಾಗಿರಬೇಕಾಗಿದೆ. ಹೀಗಿರುವಾಗ ತಾವು ಏನು ಹೇಳಿದರೂ ಅದನ್ನು ಮಹಾ ಆಜ್ಞೆ ಎಂದು ಭಾವಿಸಿ ಶಿರಸಾವಹಿಸಿ ಮಾಡಲು ಸಿದ್ಧನಾಗಿದ್ದೇನೆ.

ಕರಣಿಕರು—ಕೇಳು, ನನಗೆ ವಯಸ್ಸಾಯಿತು. ದೇಹದಲ್ಲಿ ಬಲವು ಕಡಿಮೆಯಾದ್ದರಿಂದ ನಾನು ಈ ಖಾಯಿಲೆಯಿಂದ ಗುಣಹೊಂದುವುದು ಅಸಂಭವ. ಮರಣಕ್ಕೆ ಅಂಜುತ್ತಿಲ್ಲ. ಆದರೆ ಶಾಂತಿಸಮಾಧಾನಗಳಿಂದ ಪ್ರಾಣ ಬಿಡುವುದಕ್ಕೆ ಅವಕಾಶವಿಲ್ಲದೆ ನರಳುತ್ತಿದ್ದೇನೆ. ಹೇಗೆಂದರೆ—ನಮ್ಮ ಕಿಟ್ಟುವಿನ ಮೇಲೆ ಸಂಪೂರ್ಣ ಭರವಸೆಯನ್ನಿಟ್ಟು ಅವನ ವಿದ್ಯಾಭ್ಯಾಸಕ್ಕಾಗಿ ಬಹಳ ಹಣವನ್ನು ಖರ್ಚುಮಾಡಿದೆ. ಇದರಿಂದ ಸುಮಾರು ಐದುಸಾವಿರ ರೂಪಾಯಿವರೆಗೂ ಸಾಲವಾಗಿದೆ. ಕಾಲಸ್ಥಿತಿಯನ್ನು ನೋಡಿದರೆ ಕಿಟ್ಟುವಿಗೆ ಆಗುವ ಸಂಪಾದನೆಯಲ್ಲಿ ನಾನು ಋಣಮುಕ್ತನಾಗುವ ಆಶೆಯಿಲ್ಲ. ತನ್ನ ಸಂಸಾರವನ್ನು ತೂಗಿಸುವುದೇ ಅವನಿಗೆ ಕಷ್ಟವಾಗಿದೆ. ಅವನಿಂದ ಬಯಸಿದ್ದ ನೆರವು ಒದಗಲಿಲ್ಲ. ಸಾಲವನ್ನೂ ತೀರಿಸಿ ಆಸ್ತಿಯನ್ನೂ ಉಳಿಸಿಕೊಳ್ಳುವ ದಕ್ಷತೆಯು ನರಸಿಂಹಮೂರ್ತಿಗೆ ಸಾಲದು. ಹೀಗಾಗಿ ತಲೆತಲಾಂತರದಿಂದ ಬಂದ ಆಸ್ತಿಯು ನನ್ನಿಂದ ಅನ್ಯರ

ಪಾಲಾಗುವ ಗತಿ ಬಂದಿದೆ. ಇದರಿಂದ ದೇಹಸಂಬಂಧವಾದ ಖಾಯಿಲೆ ಗಿಂತಲೂ ಮನೋವ್ಯಥೆಯು ಹೆಚ್ಚಿ ನರಳುತ್ತಿದ್ದೇನೆ. ಇಂಥ ಸಮಯ ದಲ್ಲಿ ನನಗೆ ನೀನಲ್ಲದೆ ಬೇರೆ ಸಹಾಯಕರಿಲ್ಲ. ನಮ್ಮ ಗೃಹಕೃತ್ಯದಲ್ಲಿ ನೀನು ಭಾಗಿಯಾಗಿ ನಮ್ಮ ವಂಶದ ಗೌರವವನ್ನು ಉಳಿಸಲು ಪ್ರಯತ್ನಿಸು ವೆನೆಂದು ಮಾತುಕೊಟ್ಟರೆ ನಿಶ್ಚಿಂತನಾಗಿ ಪ್ರಾಣಬಿಡುತ್ತೇನೆ." ಎಂದರು.

ಮರಿಗೌಡನು ಕ್ಷಣಕಾಲ ಯೋಚಿಸಿದ. ಜವಾಬ್ದಾರಿಯು ಮಹತ್ತರ ವಾದದ್ದು. ಅದನ್ನು ನಿರ್ವಹಿಸುವ ಶಕ್ತಿಯು ತನಗುಂಟಾಗುವುದೆಂದು ಹೇಗೆ ತಿಳಿಯುವುದು ? ಆದರೆ ಹಿರಿಯರೂ ವ್ಯವಹಾರಜ್ಞರೂ ಆದ ಕರಣಿ ಕರು ತನ್ನಲ್ಲಿ ಇಷ್ಟೊಂದು ನಂಬಿಕೆಯನ್ನಿಟ್ಟು ಇದನ್ನು ಹೇಳುವಾಗ ತಾನ ದನ್ನು ನಡೆಸಲೆತ್ನಿಸಬೇಕು. ಅಲ್ಲದೆ ಕರಣಿಕರ ಕಡೆಯಿಂದ ತನ್ನ ಮೇಲೆ ಹೊತ್ತಿರುವ ಉಪಕೃತಿಯ ಭಾರದಲ್ಲಿ ಕಿಂಚಿತ್ತನ್ನಾದರೂ ಇಳಿಸಲು ತನಗೆ ಇದೊಂದು ಸುಸಂಧಿ ಎಂದು ಭಾವಿಸಿ ಅವರಕಡೆ ನೋಡಿ, "ಸ್ವಾಮಿ, ಬಡ ವನೂ, ಕಿರಿಯನೂ, ಹೆಚ್ಚು ವ್ಯವಹಾರವನ್ನರಿಯದವನೂ ಆದ ನನ್ನಲ್ಲಿ ತಾವು ಇಷ್ಟೊಂದು ನಂಬಿಕೆಯನ್ನಿಟ್ಟಿರುವುದೇ ನನಗೊಂದು ಧೈರ್ಯ. ತಾವು ಬಯಸುವಷ್ಟು ಕಾರ್ಯಸಾಧನೆ ಮಾಡುವ ಚೈತನ್ಯವು ನನಗುಂ ಟಾಗುವುದೋ ಇಲ್ಲವೋ ನಾನದನ್ನು ಹೇಳಲಾರೆ. ತಮ್ಮಂಥ ಹಿರಿಯರ ಆಶೀರ್ವಾದದಿಂದ ನನಗೆ ಅಂಥ ಶಕ್ತಿ ಉಂಟಾದರೆ ಅದನ್ನೆಲ್ಲಾ ತಮ್ಮ ಆಸೆ ಯನ್ನು ಈಡೇರಿಸುವ ಸಲುವಾಗಿ ವಿನಿಯೋಗಿಸುತ್ತೇನೆ. ಇದು ಖಂಡಿತ. ಇದಕ್ಕೆ ನನ್ನ ಆತ್ಮವೇ ಸಾಕ್ಷಿ. ಇದರ ಮೇಲೆ ದೈವೇಚ್ಛೆ. ತಾವೂ ಕೂಡ ಭಗವಂತನಮೇಲೆ ಭಾರಹಾಕಿ ತಮ್ಮ ಮನೋವ್ಯಥೆಯನ್ನು ದೂರಮಾಡಿ ನಿಶ್ಚಿಂತರಾಗಿರಿ." ಎಂದನು. ಕರಣಿಕರು ತಮ್ಮ ಎರಡು ಕೈಗಳನ್ನು ಮರಿ ಗೌಡನ ಕಡೆ ಎತ್ತಿ, "ಸುಖವಾಗಿ ಬಾಳು, ದೇವರು ನಿನಗೆ ಆಯುರಾರೋಗ್ಯ ವನ್ನು ಕೊಟ್ಟು ಕಾಪಾಡಲಿ." ಎಂದು ಆಶೀರ್ವದಿಸಿದರು. ಮರಿಗೌಡನೂ ನಮಸ್ಕಾರಮಾಡಿ ತನ್ನ ವಾಗ್ದಾನದ ಹೊರೆಯನ್ನು ಹೊತ್ತು ಮನೆಗೆ ಬಂದನು.

ಇದಾದ ಕೆಲವು ದಿನಗಳಲ್ಲಿಯೇ ಶಿವಪುರಕ್ಕೆ ಮಾತ್ರವಲ್ಲದೆ ಸುತ್ತ ಮುತ್ತಲಿನ ಹತ್ತಾರು ಗ್ರಾಮಗಳಿಗೇ ಕಲಶಪ್ರಾಯರಾಗಿದ್ದ ಕರಣಿಕ ನಾರಣಪ್ಪನವರು ಪರಂಧಾಮವನ್ನೈದಿದರು. ಊರಿನ ರೈತರೆಲ್ಲರೂ ಪಿತೃವಿಯೋಗವಾದಂತಾಗಿ ಕಣ್ಣೀರಿಟ್ಟರು. ಅವರ ಮರಣವಾರ್ತೆಯನ್ನು ಕೇಳಿದ ಕೂಡಲೇ ಶಿವಪುರಕ್ಕೆ ಸಂಬಂಧಿಸಿದ ತಾಲ್ಲೂಕು ಮತ್ತು ಜಿಲ್ಲಾಧಿಕಾರಿಗಳು ಮಾತ್ರವಲ್ಲದೆ ಬೆಂಗಳೂರಿನ ಖಾಸಗಿ ದೊಡ್ಡಮನುಷ್ಯರನೇಕರೂ ಪಶ್ಚಾತ್ತಾಪಪಟ್ಟರು. ಗುರುಗಳಿಗೆ ಆತ್ಮಬಂಧುವಿನ ವಿಯೋಗವುಂಟಾದಂತಾಯಿತು. ಮೊಮ್ಮಕ್ಕಳಿಬ್ಬರೂ ಉತ್ತರಕ್ರಿಯಾದಿಗಳನ್ನು ಸಾಂಗವಾಗಿ ನೆರವೇರಿಸಿದರು. ವೈಕುಂಠಸಮಾರಾಧನೆಯ ದಿನ ಅಂಚೆ ಶಿವರಾಮಯ್ಯನವರು ರಿಜಿಸ್ಟರಾದ ಲಕ್ಕೋಟೆಯೊಂದನ್ನು ತಂದು ಕೃಷ್ಣಮೂರ್ತಿಗೆ ಕೊಟ್ಟರು. ಕೃಷ್ಣಮೂರ್ತಿ ಒಡೆದು ನೋಡಿದನು. ಅದರಲ್ಲಿ ಹೀಗೆ ಬರೆದಿತ್ತು :—

ಕೆ. ಶ್ರೀನಿವಾಸ್, ಬಿ.ಎ., ಬಿ.ಎಲ್., ಬೆಂಗಳೂರು ಸಿಟಿ,
ಅಡ್ವೋಕೇಟ್. ತಾ||.........................

ನೋಟೀಸ್.

ಶಿವಪುರದ ಶಾನುಬೋಗ್ ಕರಣಿಕ ನಾರಣಪ್ಪನವರ ಮೊಮ್ಮಕ್ಕಳು ಒಂದನೇ ಮ|| ನರಸಿಂಹಮೂರ್ತಿ, ಎರಡನೇ ಮ|| ಕೃಷ್ಣಮೂರ್ತಿ ಇವರಿಗೆ—ನಿಮ್ಮ ತಾತಂದಿರಾದ ಪೌತಿ ನಾರಣಪ್ಪನವರು ನಮ್ಮ ಕಕ್ಷಿದಾರರಾದ ಸಾಹುಕಾರ್ ವೆಂಕಟಪ್ಪನವರಿಗೆ ಬರೆದುಕೊಟ್ಟ..............ನೇ ತಾರೀಖು ರಿಜಿಸ್ಟರ್ಡ್ ಆಧಾರ ಪತ್ರದ ಬಾಬತು ಅಸಲು ಎರಡುಸಾವಿರ ರೂಪಾಯಿ ಮತ್ತು ಈ ವರೆಗಿನ ಬಡ್ಡಿ ಸಹ ಸದರಿ ವೆಂಕಟಪ್ಪನವರಿಗೆ ಪಾವತಿಯಾಗಿರುವುದಿಲ್ಲ. ಈ ನೋಟೀಸ್ ತಲ್ಪಿದ ಒಂದು ವಾರದೊಳಗಾಗಿ ಮೇಲ್ಕಂಡ ಪತ್ರದ ಬಾಬತು ಅಸಲು ಮತ್ತು ಬಡ್ಡಿ ಸಹ

ಪೂರ್ತಿಯಾಗಿ ಸದರಿ ವೆಂಕಟಪ್ಪನವರಿಗೆ ನೀವು ಪಾವತಿಮಾಡಿ ಪತ್ರವನ್ನು ಅವರ ವಸೂಲಿ ಷರಾನಿಸಿ ವಾಪ್ಸು ಪಡೆಯತಕ್ಕದ್ದು. ಮೇಲ್ಕಂಡ ವಾಯಿದೆಯೊಳಗಾಗಿ ನೀವು ಹಣ ಪಾವತಿ ಮಾಡ ದಿದ್ದಲ್ಲಿ ಸದರಿ ಮೊಬಲಗನ್ನು ಬರಮಾಡಿಕೊಳ್ಳಲು ಕೋರ್ಟು ಮೂಲಕ ಮುಂದಿನ ಕ್ರಮ ಜರುಗಿಸಲಾಗುತ್ತೆ. ಆ ಬಗ್ಗೆ ಕಷ್ಟ ನಷ್ಟಗಳಿಗೆ ಗುರಿಯಾದೀರೆಂದು ಈ ಮೂಲಕ ಎಚ್ಚರಿಸಿದೆ.

ಕೆ. ಶ್ರೀನಿವಾಸ್.

ಕೃಷ್ಣಮೂರ್ತಿಯು ನೋಟೀಸನ್ನು ಓದಿ ಅಣ್ಣನಿಗೂ ತೋರಿಸಿದನು. ಏನುಮಾಡಬೇಕೆಂಬುದು ತಕ್ಷಣಕ್ಕೆ ಹೊಳೆಯಲಿಲ್ಲ. ತಾತನು ಅವಸಾನ ಕಾಲದಲ್ಲಿ ಮರಿಗೌಡನೊಡನೆ ಮಾತನಾಡಿದ್ದನ್ನು ಅಣ್ಣನು ವಿವರವಾಗಿ ಹೇಳಿದನು. ಕೃಷ್ಣಮೂರ್ತಿಯು ನೋಟೀಸನ್ನು ಪೆಟ್ಟಿಗೆಯಲ್ಲಿರಿಸಿ ಆ ದಿನದ ಕಾರ್ಯಗಳನ್ನು ಮುಗಿಸಿದನು. ಮರುದಿನ ಪ್ರಾತಃಕಾಲ ನರಸಿಂಹಮೂರ್ತಿ ಯೂ ಕೃಷ್ಣಮೂರ್ತಿಯೂ ಮರಿಗೌಡನ ತೋಟಕ್ಕೆ ಬಂದರು. ಮರಿಗೌಡನು ಆಗತಾನೆ ಬೆಳಗಿನ ತಿಂಡಿಯನ್ನು ತಿಂದು ಯಾವುವೋ ಪುಸ್ತಕ ಒಂದನ್ನು ಓದುತ್ತಾ ಮರದ ಕೆಳಗೆ ಕುಳಿತಿದ್ದನು. ಅಣ್ಣತಮ್ಮಂದಿರಿಬ್ಬರೂ ಬಂದು ಕುಳಿತರು. ಕುಶಲಪ್ರಶ್ನೆಗಳಾದ ಮೇಲೆ ಕೃಷ್ಣಮೂರ್ತಿಯು ಹಿಂದಿನ ದಿನ ಬಂದಿದ್ದ ನೋಟೀಸನ್ನು ತೆಗೆದು ಮರಿಗೌಡನ ಕೈಲಿ ಕೊಟ್ಟನು. ಅವನು ಅದನ್ನು ಓದಿನೋಡಿ ಕ್ಷಣಕಾಲ ಯೋಚಿಸಿ ಕೃಷ್ಣಮೂರ್ತಿಯನ್ನು ಕುರಿತು, " ಈಗ ನನ್ನಿಂದ ಏನಾಗಬೇಕು ? " ಎಂದ.

ಕೃಷ್ಣಮೂರ್ತಿ–ಮರಿಗೌಡ, ನಮ್ಮ ತಾತಂದಿರ ಅವಸಾನ ಕಾಲದಲ್ಲಿ ನೀನು ಕೊಟ್ಟ ವಾಗ್ದಾನವನ್ನು ನಮ್ಮ ಅಣ್ಣನಿಂದ ವಿವರವಾಗಿ ತಿಳಿದೆ. ನಿನಗಿಂತಲೂ ಹೆಚ್ಚಾದ ಆಪ್ತರು ನಮಗೆ ಬೇರೊಬ್ಬರಿಲ್ಲ. ಆಗ ನೀನು ಅವರಿಗೆ ಕೊಟ್ಟ ವಾಗ್ದಾನವೇ ಈಗ ನಮಗೆ ನೆರವಾಗಬೇಕು. ಆದ್ದರಿಂದ ಮುಂದೇನು ಮಾಡಬೇಕೆಂಬುದನ್ನು ನಿನ್ನಲ್ಲಿ ಆಲೋಚಿಸಲು ಬಂದೆವು.

ಮರಿಗೌಡ—ನಾನು ವಾಗ್ದಾನ ಮಾಡಿದುದೇನೋ ನಿಜ. ಹಾಗೆ ಮಾಡುವುದಕ್ಕೆ ಅವರು ನನ್ನಲ್ಲಿಟ್ಟಿದ್ದ ಪ್ರೀತಿ ಮತ್ತು ನಂಬಿಕೆಯೇ ಕಾರಣವಾಗಿದ್ದುವು. ಅವರ ಕಾಲವಾಯಿತು. ಈಗ ನಾನು ಆ ವಿಚಾರದಲ್ಲಿ ಕೈಹಾಕಬೇಕಾದರೆ ನಿಮ್ಮ ಸಲಹೆಗಳೂ ಆವಶ್ಯಕವಲ್ಲವೆ?

ಕೃಷ್ಣಮೂರ್ತಿ—ನಾನು ಮೊದಲೇ ಹೇಳಿದಂತೆ ನಮ್ಮ ಗೃಹಕೃತ್ಯಕ್ಕೆ ಸಂಬಂಧಪಟ್ಟ ಆಪ್ತರು ನಿನಗಿಂತಲೂ ಬೇರೆ ನಮಗಿಲ್ಲ. ಕೈಲಾಸವಾಸಿಗಳಾದ ಆ ನಮ್ಮ ತಾತಂದಿರು ನಿನ್ನಲ್ಲಿ ಇಟ್ಟ ಪ್ರೀತಿ ಮತ್ತು ನಂಬಿಕೆಯನ್ನೇ ನಾವು ಇಟ್ಟಿರುತ್ತೇವೆ. ಇದು ನಮ್ಮ ಆತ್ಮಸಾಕ್ಷಿಯಾದ ಮಾತು. ನಮ್ಮ ಯಾವ ಸಲಹೆಯೂ ಇಲ್ಲದೆ ನೀನು ಏನು ಮಾಡಿದರೂ ಅದು ನಮಗೆ ಸಮ್ಮತ. ನಿನ್ನ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ನಡೆದರೆ ಅವರ ಅಭಿಪ್ರಾಯಕ್ಕೇ ವ್ಯತಿರಿಕ್ತವಾಗಿ ನಡೆದಂತೆ ಭಾವಿಸು. ಈಗ ಮುಂಬೇನು ಮಾಡಬೇಕೆಂಬುದನ್ನು ಹೇಳು.

ಮರಿಗೌಡ—ಹಾಗಿದ್ದರೆ ಕೇಳಿ, ನಿಮಗೆ ನಿಮ್ಮ ವಂಶ ಗೌರವವನ್ನು ಕಾಪಾಡಿಕೊಳ್ಳುವ ಆಸೆ ಎಷ್ಟಿರುತ್ತದೆಯೋ ಸ್ವರ್ಗವಾಸಿಗಳಾದ ಆ ನಿಮ್ಮ ತಾತಂದಿರಿಗಾಗಿ ನನ್ನ ಕೃತಜ್ಞತಾಭಾವನೆಯು ಅದಕ್ಕಿಂತಲೂ ಅಧಿಕವಾಗಿದೆ. ಆದ್ದರಿಂದ ನಿಮ್ಮ ಸ್ಥಿರಾಸ್ತಿಗಳು ಕಂಡವರ ಪಾಲಾಗದೆ ನಿಮಗೇ ಉಳಿಯುವ ರೀತಿಯೊಂದನ್ನು ಆಗಲೇ ಯೋಚಿಸಿದ್ದೇನೆ. ಏನೆಂದರೆ—ಮೊದಲು ನಿಮಗೆ ಇರತಕ್ಕ ಒಟ್ಟು ಸಾಲವನ್ನು ಲೆಖ್ಖ ಹಾಕೋಣ. ಅದೆಲ್ಲವನ್ನೂ ಒಂದೇ ಗಂಟಿನಲ್ಲಿ ಕೊಡಲು ಈಗ ಸಾಧ್ಯವಿಲ್ಲ. ಕ್ರಮೇಣ ತೀರಿಸಬೇಕಾಗಿದೆ. ಇನ್ನು ಮೇಲೆ ನಿಮಗಿರತಕ್ಕ ತರಿ, ಖುಷ್ಕಿ, ಭಾಗಾಯಿತು ಜಮೀನುಗಳೆಲ್ಲವನ್ನೂ ಹತ್ತುವರ್ಷಕಾಲ ನನಗೆ ವಹಿಸಿಕೊಡಿ. ಅವುಗಳನ್ನು ನನ್ನ ಸ್ವಂತ ಮೇಲ್ವಿಚಾರಣೆಯಿಂದ ಸರಿಯಾಗಿ ಆಬಾದು ಮಾಡಿಸಿ ಅವುಗಳಿಂದ ಬರುವ ಒಟ್ಟು ಉತ್ಪತ್ತಿಯಲ್ಲಿ ನರಸಿಂಹಮೂರ್ತಿಯ ಸಂಸಾರಕ್ಕೆ ಬೇಕಾದಷ್ಟು ದವಸಧಾನ್ಯಗಳನ್ನು ಮಾತ್ರ ಅವರಿಗೆ ಕೊಟ್ಟು

ಉಳಿದುದನ್ನು ಮಾರಿ ಅದರಿಂದ ಬರುವ ಹಣವನ್ನು ಸಾಲಕ್ಕಾಗಿ ಕೊಡುತ್ತೇನೆ. ಅವರಿಗೆ ಬರುವ ಪ್ರೋಟಿಗೆ ಹಣವು ಅವರ ಗೃಹಕೃತ್ಯದ ಚಿಲ್ಲರೆ ಖರ್ಚಿಗೆ ಸಾಕು. ನೀವು ಸಂಬಳ ಬರುವ ಯಾವುದಾದರೊಂದು ಕೆಲಸಕ್ಕೆ ಸೇರಿಕೊಂಡು ನಿಮ್ಮ ಸಂಸಾರವನ್ನು ನಡೆಸಿಕೊಂಡಿರಿ. ಸಾಲವು ಸಂಪೂರ್ಣವಾಗಿ ತೀರಿದ ನಂತರ, ಒಂದು ವೇಳೆ ಹತ್ತು ವರ್ಷ ಅವಧಿಯೊಳಗಾಗಿಯೇ ಆದರೂ ನಿಮ್ಮ ಜಮೀನುಗಳನ್ನು ನಿಮಗೆ ಬಿಟ್ಟುಕೊಡುತ್ತೇನೆ. ಇದಕ್ಕಾಗಿ ಯಾವ ಕಾಗದ ಪತ್ರಗಳೂ ಬೇಡ. ಅಗೋಚರವಾಗಿರುವ ನಿಮ್ಮ ತಾತಂದಿರ ಆತ್ಮವೇ ಸಾಕ್ಷಿ. ಸದ್ಯದಲ್ಲಿ ಕೊಡಬೇಕಾಗಿರುವ ವೆಂಕಟಪ್ಪನವರ ಹಣವನ್ನು ನಮ್ಮ ಪಟೇಲರಿಂದ ಕೊಡಿಸಿ ಬಿಡುಗಡೆ ಮಾಡಿಕೊಳ್ಳೋಣ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

ಕೃಷ್ಣಮೂರ್ತಿ—ಮರಿಗೌಡ, ಈ ನಮ್ಮ ಸದ್ಯದ ಕಷ್ಟದಿಂದ ಪಾರಾಗಲು ಇದಕ್ಕಿಂತಲೂ ಉತ್ತಮವಾದ ಬೇರೆ ಆಲೋಚನೆಯೇ ತೋರುವುದಿಲ್ಲ. ನಮ್ಮ ವಿಶಿಷ್ಟ ಗೃಹಕೃತ್ಯಗಳೂ ಇಂದಿನಿಂದ ನಿನ್ನವೇ ಆಗಿರುತ್ತವೆ. ನಮ್ಮಿಬ್ಬರ ಜೊತೆಗೆ ನೀನೂ ಸಹೋದರನೆಂದು ಭಾವಿಸಿರುತ್ತೇವೆ.

ಮರಿಗೌಡ—ಹಾಗಿದ್ದರೆ ನೀವು ಇನ್ನು ಎರಡು ಮೂರು ದಿವಸ ಇಲ್ಲಿಯೇ ಇದ್ದು ಪಟೇಲರಿಂದ ಹಣವನ್ನು ತೆಗೆದುಕೊಂಡು ಹೋಗುವುದು ಉತ್ತಮ.

ಕೃಷ್ಣಮೂರ್ತಿಯು "ಹಾಗೆಯೇ ಆಲಿ" ಎಂದ. ಅಷ್ಟು ಹೊತ್ತಿಗೆ ಊಟದ ಸಮಯವಾಯ್ತು. ಎಲ್ಲರೂ ಊರ ಕಡೆ ಹೊರಟರು.

ಕೃಷ್ಣಮೂರ್ತಿಯು ತುರ್ತಾಗಿ ಕೊಡಬೇಕಾಗಿದ್ದ ಸಾಲವನ್ನು ಕೊಟ್ಟಾಯಿತು. ಮರಿಗೌಡನು ಹೇಳಿದಂತೆ ಹೈಕೋರ್ಟು ರಿಜಿಸ್ಟ್ರಾರ್ರವರ ಆಫೀಸಿನಲ್ಲಿ ಒಂದು ಗುಮಾಸ್ತೆ ಕೆಲಸವನ್ನು ಸಂಪಾದಿಸಿದನು. ತಿಂಗಳಿಗೆ ಆರವತ್ತು ರೂಪಾಯಿ ವೇತನವು ಸಿಕ್ಕಿತು. ಅಲ್ಲಿಂದ ಕೆಲವು ದಿನಗಳೊಳಗಾಗಿ ಹೆಂಡತಿಯನ್ನೂ ಮಗುವನ್ನೂ ಕರೆಸಿಕೊಂಡು ಸುಖವಾಗಿದ್ದನು.

೭. ಋಣಾನುಬಂಧ

ಗಣಪತಿಯ ಹಬ್ಬ. ಬೆಳಗಿನ ಹತ್ತು ಗಂಟೆ. ಪಟೇಲ್ ತಿಮ್ಮೆಗೌಡರು ಬೋರೆಗೌಡನ ಮನೆ ಹತ್ತಿರ ಬಂದು ಮರಿಗೌಡನನ್ನು ಕೂಗಿದರು. ಬೋರೆಗೌಡನು ಹೊರಗೆ ಬಂದು ನೋಡಿದ. ಪಟೇಲರು ಯಾವಾಗಲೂ ಮನೆಹತ್ತಿರ ಬರದಿದ್ದವರು ಈ ದಿನ ಬಂದಿದ್ದಾರೆ.

ಬೋರೆಗೌಡ—ಏನು ಗೌಡ್ರೆ, ಇಷ್ಟು ದೂರ ಬಂದಿರಿ?

ತಿಮ್ಮೆಗೌಡರು—ಮನೇಲಿ ಇದಾನೇನಪ್ಪ ನಿನ್ನ ಚಿಕ್ಕಮಗ?

ಬೋರೆ—ಇಲ್ರ. ಗಣೇಶನ ಪೂಜೆ ಮಾಡಿಸಿಕೊಂಡು ಬರಾಕೆ ಜೋಯಿಸರ ಮನೆಗೆ ವೋಗವ್ನೆ. ವೋಗಿ ಕರಕೊಂಡು ಬರಲ್ರ?

ತಿಮ್ಮೆ—ನೀನೇನೂ ಹೋಗಬೇಡ. ಹುಡುಗ ಮನೆಗೆ ಬಂದಮೇಲೆ, ಊಟಕ್ಕೆ ನಮ್ಮ ಮನೆಗೇ ಕಳುಹಿಸು.

ಬೋರೆಗೌಡನಿಗೆ ಆಶ್ಚರ್ಯವಾಯಿತು. ಎಂದೂ ಊಟಕ್ಕೆ ಕರೆಯದಿದ್ದವರು ಈ ದಿನ ಕರೆದಿದ್ದಾರೆ, ಏನು ಸಮಾಚಾರವೋ ತಿಳಿಯಲಿಲ್ಲ.

"ಆಗಲ್ರಿ, ಬಂದಕೂಡ್ಲೆ ಯೇಳ್ತೀನ್ರಿ." ಎಂದ.

"ಮರಿಬೇಡ, ಖಂಡಿತ ಕಳಿಸು" ಎಂದು ಹೇಳಿ ಹೊರಟುಹೋದರು.,

ವಿನಾಯಕನ ಪೂಜೆ ಮುಗಿಸಿಕೊಂಡು ಮನೆಗೆ ಬಂದ ಮರಿಗೌಡನಿಗೆ ತಂದೆಯು ಗೌಡರ ಆಹ್ವಾನವನ್ನು ತಿಳಿಸಿದನು. ಮಗನಿಗೂ ಆಶ್ಚರ್ಯವಾಯಿತು. ದೇವರು ಕೊಟ್ಟಿದ್ದನ್ನು ಮನೆಯವರೊಡನೆ ಕುಳಿತು ಸಂತೋಷವಾಗಿ ಊಟಮಾಡಬೇಕೆಂದಿದ್ದ ಮರಿಗೌಡನಿಗೆ ಮನೆ ಬಿಟ್ಟು ಹೋಗಲು ಇಷ್ಟವಿಲ್ಲ. ಆದರೂ ಪಟೇಲರ ಮರ್ಯಾದೆಗಾಗಿ ಅವರ ಮನೆಗೆ ಹೋಗಬೇಕಾಗಿ ಬಂತು. ಹೋದನು. ಅವನು ಹೋಗುವವರೆಗೂ ಪಟೇಲರು ಅವನಿಗಾಗಿ ಕಾದು ಕುಳಿತಿದ್ದರು. ಅವನು ಹೋದೊಡನೆಯೇ ಊಟಕ್ಕೆದ್ದರು. ಆ ದಿನ ಮರಿಗೌಡನಿಗೆ ಪಟೇಲರೊಡನೆ ಸಹಪಂಕ್ತಿ ಭೋಜನ.

ದಿವ್ಯವಾದ ಭಕ್ಷ್ಯಗಳು. ಗೌಡಸಾನಿಯೇ ಬಡಿಸಿದರು. ಅವರ ಮಗಳೇ ಅಡಿಗೆ ಕೋಣೆಯಲ್ಲಿ ಎಲ್ಲವನ್ನೂ ಅಣಿಮಾಡಿ ಕೊಡುತ್ತಿದ್ದಳು.

ಊಟವಾದ ಮೇಲೆ ಪಟೇಲರೂ ಮರಿಗೌಡನೂ ಮಹಡಿಯ ಮೇಲೆ ಹೋಗಿ ತಾಂಬೂಲ ಚರ್ವಣಕ್ಕಾಗಿ ಕುಳಿತರು. ಮರಿಗೌಡನು ತಾಂಬೂಲಹಾಕುವ ಅಭ್ಯಾಸವಿಲ್ಲವೆಂದು ಹೇಳಿ ಸುಮ್ಮನೆ ಕುಳಿತನು. ಪಟೇಲರು ತಾಂಬೂಲವನ್ನು ಹಾಕುತ್ತಾ, "ಇದುವರೆಗೆ ನಿಮ್ಮ ತಂದೆ ನಿನ್ನ ಲಗ್ನದ ವಿಚಾರವನ್ನು ಎಲ್ಲಿಯಾದರೂ ಪ್ರಸ್ತಾಪ ಮಾಡಿದ್ದಾರೇ ನಪ್ಪ ?'' ಎಂದರು.

ಮರಿಗೌಡ—(ಸ್ವಲ್ಪ ಯೋಚಿಸಿ) ಇಲ್ಲ. ಇನ್ನೂ ಆ ಆಲೋಚನೆಯೇ ಹೊಳೆದಂತೆ ಕಾಣುವುದಿಲ್ಲ.

ಪಟೇಲರು–ನಿನ್ನೊಡನೆ ಯಾರಾದರೂ ಪ್ರಸ್ತಾಪ ಮಾಡಿದ್ದಾರೋ ?

ಮರಿಗೌಡ—ಯಾರು ಯಾರೋ ಸುಮ್ಮನೆ ಪ್ರಸ್ತಾಪ ಮಾಡಿದ್ದಾರೆ. ನಾನು ಮಾತ್ರ ಯಾವುದನ್ನೂ ಮನಸ್ಸಿಗೆ ಹಚ್ಚಿಕೊಂಡಿಲ್ಲ.

ಪಟೇಲರು—ಮರಿಯಪ್ಪ, ಈ ದಿನ ಆ ವಿಚಾರವನ್ನೇ ಕುರಿತು ನಿನ್ನೊಡನೆ ಮಾತನಾಡಬೇಕೆಂದು ಕರೆಸಿದೆ. ಕೇಳು, ನಮಗಿರುವುದೊಂದೇ ಹೆಣ್ಣು ಮಗು. ಗಂಡೂ ಹೆಣ್ಣೂ ಎಲ್ಲವೂ ಅದೇ ಎಂದು ಭಾವಿಸಿ ಸಾಕಿದ್ದೇವೆ. ಸೋದರಿಕೆಯಲ್ಲಿ ಎಷ್ಟೋ ವರಗಳಿದ್ದಾಗ್ಯೂ, ಹುಡುಗಿಯನ್ನು ವಿದ್ಯಾವಂತನಿಗೆ ಕೊಟ್ಟು ಲಗ್ನ ಮಾಡಬೇಕೆಂದು ನಮ್ಮ ಆಸೆ. ಅಲ್ಲದೆ ನಾವಿರುವವರೆಗೂ ಮಗು ನಮ್ಮ ಕಣ್ಣೆದುರಿನಲ್ಲೇ ಇರಬೇಕೆಂಬುದೊಂದೂ ನಮ್ಮ ಅಭಿಲಾಷೆ. ಆದ್ದರಿಂದ ಅದನ್ನು ನಿನಗೇ ಕೊಟ್ಟು ಲಗ್ನ ಮಾಡಬೇಕೆಂದು ಆಲೋಚಿಸಿದ್ದೇವೆ. ನಿನ್ನಿಷ್ಟವೇನು, ಹೇಳು.

ಮರಿಗೌಡನಿಗೆ ಆಶ್ಚರ್ಯವಾಯಿತು. ಕೂಡಲೆ ಯಾವ ಉತ್ತರವನ್ನು ಕೊಡುವುದಕ್ಕೂ ತಿಳಿಯಲಿಲ್ಲ. ಕ್ಷಣಕಾಲ ತಲೆಬಾಗಿ ಕುಳಿತ. ಯಾವ

ಯಾವ ಯೋಚನೆಗಳೋ ತಲೆದೋರಿದವು. ರೂಪವತಿಯಾದ ಹುಡುಗಿ. ಅನುಕೂಲ ಸಂಬಂಧ. ಗಂಡುಮಕ್ಕಳಿಲ್ಲದ ಪಟೇಲರ ವಿಶಿಷ್ಟ ಆಸ್ತಿಯೂ ತನ್ನದಾಗುವ ಸಂಭವ. ಆದರೆ ಅದರಿಂದ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕಾಗಬಹುದು. ಶ್ರೀಮಂತರ ಹೆಣ್ಣನ್ನು ತಮ್ಮ ಮನೆಗೆ ಸೊಸೆಯಾಗಿ ತಂದರೆ ಬಡತನವೇ ಭಾಗ್ಯವೆಂದು ಸಂತೋಷದಿಂದಿರುವ ಸಂಸಾರದಲ್ಲಿ ವಿರಸ ಉಂಟಾಗಬಹುದು. ತಾಯಿತಂದೆಗಳ ಪುಣ್ಯ ವಿಶೇಷ ದಿಂದಲೋ ಏನೋ ಅಲ್ಪಸ್ವಲ್ಪ ವಿದ್ಯಾವಂತನಾದ ತಾನು ತಾಯಿತಂದೆಗಳಿಗೆ ತನ್ನ ಕೈಲಾದ ಸೇವೆಯನ್ನು ಸಲ್ಲಿಸುವ ಸುಯೋಗವನ್ನು ಕಳೆದುಕೊಳ್ಳುವ ಸಂಭವ ಬಂದರೂ ಬರಬಹುದು. ಇದೆಲ್ಲವನ್ನೂ ಯೋಚಿಸಿಯೇ, ತಾನು ವ್ಯಾಸಂಗ ಮಾಡುತ್ತಿರುವಾಗಲೇ ವಿವಾಹ ವಿಚಾರವನ್ನು ಪ್ರಸ್ತಾಪಿಸಲು ಬಂದಿದ್ದ ಕೆಲವು ಮಂದಿ ಶ್ರೀಮಂತರಿಗೂ, ಅಧಿಕಾರವರ್ಗದವರಿಗೂ ತನ್ನ ಧಿಕ್ಕಾರವನ್ನು ಸೂಚಿಸಿದ್ದನು. ಆದ್ದರಿಂದ ಸಧ್ಯದ ಸನ್ನಿವೇಶದಲ್ಲಿ ಯಾವುದೊಂದು ಖಚಿತವಾದ ಉತ್ತರವನ್ನೂ ಹೇಳಲಾರದೆ ಕಡೆಗೆ, "ಮನೆಯಲ್ಲಿ ನನಗಿಂತಲೂ ಹಿರಿಯರಾದವರು ಇರುವಾಗ ಈ ವಿಚಾರದಲ್ಲಿ ನಾನೇ ಸ್ವತಂತ್ರಿಸಿ ಹೇಗೆ ಮಾತನಾಡುವುದು?" ಎಂದ. ತಂದೆಯು ಏನೂ ಅರಿಯದವನೆಂಬುದು ಗೊತ್ತು. ಪಟೇಲರ ಅಭಿಪ್ರಾಯಕ್ಕೆ ವ್ಯತಿ ರಿಕ್ತವಾಗಿ ಮಾತನಾಡಲಾರನೆಂಬುದು ತಿಳಿದಿತ್ತು. ಆದರೆ ತಾನು ಸ್ವಲ್ಪ ಕೂಲಂಕುಷವಾಗಿ ಯೋಚಿಸಲು ಅವಕಾಶ ದೊರೆಯುವುದೆಂದು ಹಾಗೆ ಹೇಳಿದನು. ಅದಕ್ಕೆ ಪಟೇಲರು, "ನೀನು ಹೇಳುವ ಮಾತು ನ್ಯಾಯ ವಾದದ್ದು. ನಿನ್ನ ತಾಯಿತಂದೆಗಳು ನಿನ್ನ ಅಭಿಪ್ರಾಯವನ್ನೇ ಅನುಮೋದಿಸ ಬಹುದು. ಆದರೂ ವ್ಯವಹಾರ ರೀತಿಯಿಂದ ಅವರನ್ನು ಕೇಳಲೇಬೇಕು. ಅದೂ ಆಗಲಿ" ಎಂದು ಆಳೊಬ್ಬನನ್ನು ಕರೆದು ಮರಿಗೌಡನ ತಾಯ್ತಂದೆ ಗಳನ್ನು ಕರೆದುಕೊಂಡು ಬರುವಂತೆ ಹೇಳಿದರು. ಅವರೂ ಬಂದರು. ಬೋರೆಗೌಡನನ್ನು ತಾವು ಕುಳಿತಿದ್ದ ರತ್ನಗಂಬಳಿಯ ಮೇಲೆ ಬಂದು ಕುಳಿತುಕೊಳ್ಳುವಂತೆ ಪಟೇಲರು ಹೇಳಿದರು. ಎಂದೂ ಇಲ್ಲದ ಈ

ಮರ್ಯಾದೆಯನ್ನು ಕಂಡು ಬೋರೆಗೌಡನಿಗೆ ಆಶ್ಚರ್ಯವಾಯಿತು. ಹಾಗೆ ರತ್ನಗಂಬಳಿಯ ಮೇಲೆ ಕುಳಿತುಕೊಳ್ಳಲು ಹಿಂಜರಿದನು. ಪಟೇಲರು ಬಲವಂತದಿಂದ ತಮ್ಮ ಹತ್ತಿರ ಕೂರಿಸಿಕೊಂಡು, ಒಳಗಡೆ ಕೋಣೆಯಲ್ಲಿ ಗೌಡಸಾನಿಯ ಸಂಗಡ ಕುಳಿತಿದ್ದ ಬೋರೆಗೌಡನ ಹೆಂಡತಿಗೆ ಕೇಳಿಸುವಂತೆ ತನ್ನ ಅಭಿಪ್ರಾಯವನ್ನು ತಿಳಿಸಿದರು. ಕನಸಿನಲ್ಲಿಯೂ ಅಸಂಭವವೆಂದು ತಿಳಿದಿದ್ದ ಬೋರೆಗೌಡನಿಗೆ ಅದು ಅರ್ಥವೇ ಆಗಲಿಲ್ಲ. ಯಾವ ಮಾತನ್ನೂ ಆಡದೆ ಮೂಕನಂತೆ ಕುಳಿತುಬಿಟ್ಟ.

ಪಟೇಲರು ಪುನಃ ತಂದೆಯನ್ನೂ ಮಗನನ್ನೂ ಕುರಿತು, "ನಾನು ನಿಮ್ಮ ವಿಚಾರದಲ್ಲಿ ಈ ವರೆಗೂ ಎಷ್ಟೋ ಉದಾಸೀನತೆಯನ್ನು ತೋರಿಸಿದ್ದೇನೆ. ಅದಕ್ಕಾಗಿ ನಾನು ತುಂಬಾ ಪಶ್ಚಾತ್ತಾಪಪಡುತ್ತಿದ್ದೇನೆ. ನೀವೂ ಕೂಡ ಅದೆಲ್ಲವನ್ನೂ ಮರೆಯಬೇಕೆಂದು ಕೇಳುತ್ತೇನೆ. ಮತ್ತೊಂದು ವಿಷಯವೇನೆಂದರೆ—ಅನುಕೂಲಸ್ಥರ ಮನೆಯ ಹೆಣ್ಣನ್ನು ಬಡವರ ಮನೆಗೆ ತರುವುದು ಸೂಕ್ತವೇ ಎಂಬುದನ್ನು ಯೋಚಿಸಬೇಕಾಗಿದೆ. ಆದರೆ ತೌರುಮನೆಯ ಐಶ್ವರ್ಯದಿಂದ ಅಹಂಕಾರಪಡುವ ಬುದ್ಧಿಯು ನಮ್ಮ ಮಗುವಿಗೆ ಇಲ್ಲ. ಒಂದುವೇಳೆ ಹಾಗಿದ್ದರೂ ನಾವು ಅದಕ್ಕೆ ಉತ್ತೇಜನ ಕೊಡುವವರಲ್ಲ. ಅಂದಮೇಲಾದರೂ ನಿಮ್ಮ ಅಭಿಪ್ರಾಯವೇನು, ತಿಳಿಸಿ" ಎಂದರು.

ಪಟೇಲರು ಆಡಿದ ಮಾತುಗಳಿಂದ ಮರಿಗೌಡನಿಗಿದ್ದ ಒಂದೆರಡು ಮುಖ್ಯವಾದ ಸಂದೇಹಗಳು ನಿವೃತ್ತಿಯಾದುವು. ಪಟೇಲರ ಹಿಂದಿನ ನಡವಳಿಕೆಗಳೆಲ್ಲಾ ಅವನ ಜ್ಞಾಪಕಕ್ಕೆ ಬಂದುವು. ಅವುಗಳಿಗಾಗಿ ಅವರೇ ಪಶ್ಚಾತ್ತಾಪವನ್ನು ಸೂಚಿಸುತ್ತಿರುವಾಗ ಮತ್ತೆ ಅವುಗಳನ್ನು ತಾನು ಎತ್ತಿ ಎಣಿಸುವುದು ನ್ಯಾಯವಲ್ಲವೆಂದು ತಿಳಿದನು. ತನ್ನ ಮುಂದಿನ ಆಗು ಹೋಗುಗಳನ್ನು ಗುಣಿಸಿದನು. ಚಿಕ್ಕವನಾದರೂ ಕೆಲವು ವಿವಾಹಗಳನ್ನೂ ಅವುಗಳಿಂದಾದ ದಾಂಪತ್ಯ ಜೀವನವನ್ನೂ ಕಂಡು ಕೇಳಿ ವಿವಾಹವೆಂಬುದು ಒಂದು ದೈವಿಕ ಸಂಘಟನೆಯೆಂದೂ, ಮನುಷ್ಯ ಪ್ರಯತ್ನಗಳು ಅದರ

ಅಧೀನವೆಂದೂ, ವಿವಾಹವು ತನ್ನ ಭವಿಷ್ಯಜೀವನದ ಸುಖದುಃಖಗಳನ್ನು ಮೊದಲೇ ನಿರ್ಧರಿಸಲಾಗದ ಒಂದು ಸಾಹಸ ಕೃತ್ಯವೆಂದೂ, ಅವರವರ ಕರ್ಮಫಲಕ್ಕನುಸಾರವಾಗಿ ಮೊದಲು ಒಳ್ಳೆಯದೆಂದು ಕಂಡುದು ಕ್ರಮೇಣ ಕೆಟ್ಟುದಾಗಿಯೂ, ಮೊದಲು ಅನಾನುಕೂಲವೆಂದು ಕಂಡುದು ಉತ್ತರೋತ್ತರ ಅನುಕೂಲವಾಗಿ ಪರಿಣಮಿಸಬಹುದೆಂದೂ, ಇದಕ್ಕಾಗಿ ಸಂಶಯ ಗ್ರಸ್ತನಾಗುವುದು ಸೂಕ್ತವಲ್ಲವೆಂದು ತಿಳಿದು ದೇವರ ಮೇಲೆ ಭಾರ ಹಾಕಿ ತಂದೆಯ ಕಡೆ ನೋಡಿದನು. ಪಟೇಲರೂ ಆ ಕಡೆಯೇ ನೋಡಿದರು. ಮಗನ ಅಭಿಪ್ರಾಯವೇನೆಂಬುದು ತಂದೆಗೆ ತಿಳಿಯಲಿಲ್ಲ. ಮಗನೊಂದಿಗೆ ಆಲೋಚಿಸೋಣವೆಂದರೆ ಎದುರಾಗಿ ಪಟೇಲರು ಕುಳಿತಿದ್ದಾರೆ. ಅವರೆದುರಿನಲ್ಲಿ ಯಾವ ಮಾತನ್ನಾಡಿದರೆ ಹೆಚ್ಚೋ, ಯಾವ ಮಾತನ್ನಾಡಿದರೆ ಕಡಿಮೆಯೋ ಎಂದು ಭಾವಿಸಿ ಬೋರೆಗೌಡನು ಪಟೇಲರ ಕಡೆ ತಿರುಗಿ "ನಿಮ್ಮ ಸಂತೋಸ ಇದ್ದಂಗೆ ಮಾಡ್ರಿ" ಎಂದನು. ಪಟೇಲರು ಮರಿಗೌಡನ ಕಡೆ ತಿರುಗಿ—"ಏನಪ್ಪಾ, ನಿಮ್ಮ ತಂದೆಯ ಅಭಿಪ್ರಾಯಕ್ಕೆ ನಿನ್ನ ಸಮ್ಮತಿಯೋ?" ಎಂದರು. ಮರಿಗೌಡನು—"ಹಿರಿಯರ ಮಾತಿಗೆ ನಾನು ಎದುರು ಹೇಳುವುದಕ್ಕಾಗುತ್ತದೆಯೇ? ಅವರ ಅಭಿಪ್ರಾಯವೇ ನನ್ನ ಅಭಿಪ್ರಾಯ" ಎಂದನು. ಒಳಗಡೆ ಏನೋ ಪಿಸುಗುಟ್ಟುವ ಶಬ್ದ ಕೇಳಿಸಿತು. ಪಟೇಲರು ಗೌಡಸಾನಿಯನ್ನು ಸಂಬೋಧಿಸಿ "ಏನು ಸಮಾಚಾರ?" ಎಂದು ಕೇಳಿದರು. "ತಾಯಿಗೂ ಸಮ್ಮತ" ಎಂದು ಉತ್ತರ ಬಂತು. ಮರಿಗೌಡನ ತಾಯ್ತಂದೆಗಳು ತಾಂಬೂಲವನ್ನು ಸ್ವೀಕರಿಸಿ ಮಗನೊಡನೆ ತಮ್ಮ ಮನೆಗೆ ಬಂದರು.

ಕರಣಿಕರು ಜೀವಂತರಾಗಿರುವಾಗಲೇ ಪಟೇಲರು ತಮ್ಮ ಮಗಳ ಲಗ್ನದ ವಿಚಾರವನ್ನು ಅವರೊಡನೆಯೂ ಗುರುಗಳೊಡನೆಯೂ ಆಲೋಚಿಸಿದ್ದರು. ಪುರೋಹಿತರನ್ನೂ ಸಹ ಕೇಳಿ ದಾಂಪತ್ಯಾನುಕೂಲವೆಂದು ತಿಳಿದ ಮೇಲೆಯೇ ಆ ನಿರ್ಧಾರಕ್ಕೆ ಬಂದಿದ್ದರು. ಅದನ್ನು ಬಹಿರಂಗಪಡಿಸದೆ ಗುಟ್ಟಾಗಿದ್ದರು. ಮರಿಗೌಡ ಮತ್ತು ಅವನ ತಾಯ್ತಂದೆಗಳ ಒಪ್ಪಿಗೆಯೂ

ದೊರೆಯಿತು. ಕಾರ್ತಿಕ ಮಾಸದಲ್ಲಿ ಲಗ್ನವೊಂದನ್ನು ನಿಶ್ಚಯಿಸಿ ತಮ್ಮ
ಜೀವಿತಕಾಲದಲ್ಲಿ ವಿಜೃಂಭಣೆಯಿಂದ ಮಾಡಬೇಕೆಂದು ಬಹು ದಿನಗಳಿಂದ
ಬಯಸಿದ್ದ ಕನ್ಯಾದಾನ ಮಹೋತ್ಸವವನ್ನು ಸ್ವಗೃಹದಲ್ಲಿ ತಮಗೂ ಬಂಧ
ಮಿತ್ರರಿಗೂ ತೃಪ್ತಿಯಾಗುವ ರೀತಿಯಲ್ಲಿ ನೆರವೇರಿಸಿದರು.

ಪಟೇಲ್ ತಿಮ್ಮೆಗೌಡರ ಕುಮಾರಿ ಶಾರದೆಯನ್ನು ವಿವಾಹವಾದ
ನಂತರ ಮರಿಗೌಡನ ಉತ್ಸಾಹ, ಕಾರ್ಯದಕ್ಷತೆ, ಅಭಿಮಾನ ಮುಂತಾದುವು
ಇಮ್ಮಡಿಸಿದುವು. ಶಾರದೆಯೂ ಕೂಡ, ತನ್ನ ಗಂಡನ ಮನೆಗೆ ಬಂದಮೇಲೆ
ತೌರುಮನೆಯ ಐಶ್ವರ್ಯದಿಂದ ಅಹಂಕಾರಪಡದೆ, ಅಡಿಗೆ ಮಾಡುವುದು,
ನೀರು ತರುವುದು, ಸಾರಿಸುವುದು, ಗುಡಿಸುವುದು, ಊಟಕ್ಕೆ ಬಡಿಸುವುದು,
ಮುಸುರೆ ತೊಳೆಯುವುದು ಮುಂತಾದ ಮನೆಯ ಎಲ್ಲಾ ಕೆಲಸಕಾರ್ಯ
ಗಳಲ್ಲಿ ಅತ್ತೆಗೂ ಓರಗಿತ್ತಿಗೂ ತುಂಬಾ ನೆರವಾಗುತ್ತಿದ್ದಳು. ಶ್ರೀಮಂತರ
ಮನೆಯಲ್ಲಿ ಹುಟ್ಟಿದರೂ ಬಡವರ ಮನೆಯ ಸೊಸೆಯಾಗಿ ಈ ರೀತಿ ಕೆಲಸ
ಮಾಡುತ್ತಿರುವುದನ್ನು ಕಂಡು ನೆರೆಹೊರೆಯವರೆಲ್ಲರಿಗೂ ಆಶ್ಚರ್ಯ. ಪಟೇ
ಲರಿಗೂ ಅವರ ಹೆಂಡತಿಗೂ ಸಂತೋಷ. ಮರಿಗೌಡನು ತನ್ನಲ್ಲಿ ತಾನೇ
ತೃಪ್ತಿಪಡುತ್ತಿದ್ದನು.

ಅದುವರೆಗೆ ಮಿತವ್ಯಯದಿಂದ ಕೂಡಿಟ್ಟಿದ್ದ ಹಣದಿಂದ ಮರಿಗೌಡನು
ತನ್ನ ತೋಟದಲ್ಲಿ ತೊರೆ ಅಂಚಿಗೆ ಸಮೀಪವಾಗಿ ವಿಶಾಲವಾದ ಕಲ್ಲು
ಭಾವಿಯೊಂದನ್ನು ಕಟ್ಟಿಸಿ ಅದಕ್ಕೆ ಕಪಿಲೆಯನ್ನು ಹಾಕಿಸಿದನು. ದರಖಾಸ್ತಿ
ನಲ್ಲಿ ಪಡೆದ ಹೊಸ ಜಮೀನೆಲ್ಲವನ್ನೂ ಕ್ರಯಕ್ಕೆ ತಂದನು. ಭಾವಿಯ
ಪಕ್ಕದಲ್ಲಿ ಗಂಡಹೆಂಡಿರ ವಸತಿಗಾಗಿ ಪುಟ್ಟದಾದ ಮನೆಯೊಂದನ್ನು ಕಟ್ಟಿಸಿ
ದನು. ಸಧ್ಯದಲ್ಲಿ ಊರೊಳಗಿನ ತಮ್ಮ ಮನೆಯಿಂದ ಊಟ ತಿಂಡಿಗಳು
ಬರುತ್ತಿದ್ದರೂ ದನ ಕರುಗಳನ್ನೂ ವ್ಯವಸಾಯಕ್ಕೆ ಬೇಕಾದ ಮುಟ್ಟು
ಗಳನ್ನೂ ಆ ಮನೆಯ ಆವರಣದಲ್ಲಿಯೇ ಇರಿಸಿಕೊಂಡು ಜಮೀನಿನ
ಸಂಪೂರ್ಣವಾದ ಮೇಲ್ವಿಚಾರಣೆಗಾಗಿ ಮರಿಗೌಡನೂ ಅವನ ಹೆಂಡತಿ

ಶಾರದೆಯೂ ಅಲ್ಲಿಯೇ ವಾಸಿಸತೊಡಗಿದರು. ಮರಿಗೌಡನು ಕೇವಲ ಎರಡು ಎಕರೆಯಷ್ಟು ಜಮೀನನ್ನು ತನ್ನ ತಂದೆಯ ಆರಂಬಕ್ಕೆ ಬಿಟ್ಟು, ಉಳಿದ ಜಮೀನಿನ ಸುಮಾರು ಅರ್ಧ ಭಾಗಕ್ಕೆ ತನ್ನ ಅಣ್ಣನ ಮತ್ತು ಒಂದೆರಡು ಆಳುಗಳ ಸಹಾಯದಿಂದ ನಿಂಬೆ, ಅಂಜೂರ, ದ್ರಾಕ್ಷಿ, ಸೇವು, ಕಿತ್ತಳೆ ಮುಂತಾದ ಹಣ್ಣಿನ ಗಿಡಗಳನ್ನು ಹಾಕಿಸಿ, ಉಳಿದ ಜಮೀನಿನಲ್ಲಿ ತರಕಾರಿ ಬೆಳೆಯನ್ನು ಹೆಚ್ಚಿಸಿದನು.

ದಿನ ದಿನಕ್ಕೂ ಬೆಳೆಯುತ್ತಿರುವ ಬೆಂಗಳೂರು ನಗರದಲ್ಲಿ ತರಕಾರಿಗೆ ಒಳ್ಳೇ ಗಿರಾಕಿ ಇದ್ದುದರಿಂದ ಮರಿಗೌಡನ ಆದಾಯವು ವರ್ಷ ವರ್ಷಕ್ಕೂ ಹೆಚ್ಚುತ್ತಾ ಬಂತು. ವರ್ಷ ಒಂದಕ್ಕೆ ಸಾವಿರಾರು ರೂಪಾಯಿಗಳ ಉಳಿತಾಯವಾಯಿತು. ವ್ಯವಸಾಯದ ಅಭಿವೃದ್ಧಿಗಾಗಿ ಸರ್ಕಾರದವರು ದಯಪಾಲಿಸಿರುವ ರಿಯಾಯಿತಿಗಳನ್ನು ಸದುಪಯೋಗ ಪಡಿಸಿಕೊಂಡು, ಊರಿಗೆ ಎರಡು ಮೈಲಿ ದೂರದಲ್ಲಿದ್ದ ವಿದ್ಯುಚ್ಛಕ್ತಿಯನ್ನು ತನ್ನ ಜಮೀನಿನವರೆಗೂ ತರಮಾಡಿಕೊಂಡು ಭಾವಿಗೆ ಕೊಳಾಯಿಯನ್ನು ಹಾಕಿಸಿ ಕಪಿಲೆಯಿಂದ ನೀರೆತ್ತುವುದನ್ನು ತಪ್ಪಿಸಿದನು. ಕ್ರಮೇಣ ಹಣ್ಣಿನ ಮರಗಳೂ ಫಲಕ್ಕೆ ಬಂದುವು. ಪ್ರತಿ ದಿನವೂ ಕಾಲಕ್ಕೆ ಸರಿಯಾಗಿ ತರಕಾರಿಗಳನ್ನೂ ಹಣ್ಣುಗಳನ್ನೂ ಬೆಂಗಳೂರಿಗೆ ಕೊಂಡೊಯ್ಯಲು ಅನುಕೂಲವಾದಂಥ ಮೋಟಾರ್ ಗಾಡಿಯೊಂದನ್ನು ಕೊಂಡು ಅವುಗಳನ್ನು ಸಾಗಿಸುವ ಮತ್ತು ತನ್ನ ಪ್ರಯಾಣದ ಸೌಕರ್ಯವನ್ನು ಹೆಚ್ಚಿಸಿದನು. ಕೆಲವು ವರ್ಷಗಳಾದ ಮೇಲೆ ಜಮೀನಿನ ಆವರಣದಲ್ಲಿಯೇ ಎತ್ತರವಾದ ಸ್ಥಳದಲ್ಲಿ ತನ್ನ ಮನೆಯವರೆಲ್ಲರ ವಾಸಕ್ಕೂ ಅನುಕೂಲವಾದ ಮನೆಯೊಂದನ್ನು ಆಧುನಿಕ ರೀತಿಯಲ್ಲಿ ಕಟ್ಟಿಸಿ ಎಲ್ಲರೊಡನೆ ಅಲ್ಲಿಯೇ ವಾಸಿಸತೊಡಗಿದನು.

ಮರಿಗೌಡನು ಹೊರಗಡೆಯ ಕೆಲಸಕಾರ್ಯಗಳನ್ನು ನೋಡುತ್ತಿದ್ದುದೆಷ್ಟೋ ಅಷ್ಟೆ. ಗೃಹಕೃತ್ಯದ ಒಳಾಡಳಿತವೆಲ್ಲವನ್ನೂ ಶಾರದೆಯೇ ನೋಡಿಕೊಳ್ಳುತ್ತಿದ್ದಳು. ಮನೆಯಲ್ಲಿ ತನ್ನ ಎರಡು ಮಕ್ಕಳ ಮತ್ತು

ತನ್ನ ಓರಗಿತ್ತಿಯು ಎರಡು ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿಯು ಅವಳ ಮೇಲೆಯೇ ಬಿದ್ದಿತು. ಇಷ್ಟಿದ್ದಾಗ್ಯೂ ಶಾರದೆಯು ಬೇಸರ ಪಡದೆ ಮುಪ್ಪಿನ ಅತ್ತೆಮಾವಂದಿರ ಶುಶ್ರೂಷೆಯನ್ನೂ ಬಹಳ ಭಕ್ತಿಯಿಂದ ಮಾಡುತ್ತಿದ್ದಳು. ಅವರನ್ನು ಕಂಡರೆ ತನ್ನ ತಾಯ್ತಂದೆಗಳಿಗೆ ತೋರಿಸುತ್ತಿದ್ದುದಕ್ಕಿಂತ ಹೆಚ್ಚಿನ ಪ್ರೀತಿ ಮತ್ತು ಗೌರವಗಳನ್ನು ತೋರಿಸುತ್ತಿದ್ದಳು. ಮನೆಯಲ್ಲಿ ಯಾವ ಹಬ್ಬವಾದರೂ ತನ್ನ ತಾಯ್ತಂದೆಗಳಿಗೆ ಅಹ್ವಾನವನ್ನು ಕಳುಹಿಸುತ್ತಿದ್ದಳು. ಅಂಥ ಸಮಯಗಳಲ್ಲಿ ಮಗಳು ತೌರುಮನೆಗೆ ಹೋಗುವುದಕ್ಕೆ ಬದಲಾಗಿ ತಾಯ್ತಂದೆಗಳೇ ಮಗಳ ಮನೆಗೆ ಬರುವುದಾಯಿತು. ಇದರಿಂದ ಮರಿಗೌಡನಾಗಲೀ ಅವನ ಮನೆಯವರಾಗಲೀ ಯಾವ ರೀತಿಯಲ್ಲಿಯೂ ಅಸಮಾಧಾನವನ್ನು ಸೂಚಿಸುತ್ತಿರಲಿಲ್ಲ. ಅದನ್ನು ಚನ್ನಾಗಿ ಪರೀಕ್ಷಿಸಿಯೇ ಪಟೇಲರೂ ಅವರ ಹೆಂಡತಿಯೂ ಸಲಿಗೆಯಿಂದ ಮಗಳ ಮನೆಗೆ ಬರುತ್ತಿದ್ದರು. ಬಂದವರು ಮಗಳ ಸುಖಸಂಸಾರವನ್ನು ನೋಡಿ ಹಿಗ್ಗುತ್ತಿದ್ದರು.

೮. ಶಂಕುಸ್ಥಾಪನೆ

ಪಟೇಲ್ ತಿಮ್ಮೆಗೌಡರಿಗೂ ವಯಸ್ಸಾಗುತ್ತಾ ಬಂತು. ಅವರು ಮೊದಮೊದಲು ತಮ್ಮ ಆಸ್ತಿಯೆಲ್ಲವೂ ಮಗಳಿಗೇ ಸೇರತಕ್ಕದ್ದೆಂದು ಯೋಚಿಸಿದ್ದರು. ಕ್ರಮೇಣ ನೋಡುವಲ್ಲಿ ಮಗಳಾಗಲೀ ಅಳಿಯನಾಗಲೀ ಪಟೇಲರ ಜಮೀನುಗಳ ವಿಷಯದಲ್ಲಿ ಮತ್ತು ಅವರ ಹಣಕಾಸಿನ ವ್ಯವಹಾರದಲ್ಲಿ ಯಾವ ಆಸಕ್ತಿಯನ್ನೂ ತೋರಿಸದೆ ಇದ್ದುದನ್ನು ಕಂಡು, ತಮ್ಮ ಆಸ್ತಿಪಾಸ್ತಿಗಳ ಭವಿಷ್ಯವನ್ನು ಮಗಳೊಂದಿಗೆ ಒಂದು ದಿನ ಪ್ರಸ್ತಾಪಿಸಿದರು. ಗಂಡನೊಂದಿಗೆ ಆಲೋಚಿಸುವುದಾಗಿ ಮಗಳು ಹೇಳಿದಳು. ಕಾರ್ಯಾಂತರದಿಂದ ಬೆಂಗಳೂರಿಗೆ ಹೋಗಿದ್ದ ಗಂಡನು ಆ ದಿನ ಸಾಯಂಕಾಲ ಮನೆಗೆ ಬರುತ್ತಲೇ ಉಪಾಹಾರವನ್ನು ಕೊಟ್ಟು ಶಾರದೆಯು ಗಂಡನೊಂದಿಗೆ ಮಾತನಾಡುತ್ತಾ ತೋಟದ ಕಡೆ ಹೊರಟಳು. ಇಬ್ಬರೂ ಬಂದು ಭಾವಿಯ ಅಂಚಿನ ಹಾಸುಗಲ್ಲಿನ ಮೇಲೆ ಕುಳಿತರು. ಯಾವುದೋ ಮಾತನಾಡುತ್ತಾ ಮಧ್ಯೆ, "ಗೌಡರಿಗೆ ವಯಸ್ಸಾಗುತ್ತಾ ಬಂತು. ಮೊದಲಿನಂತೆ ಚುರುಕಾಗಿ ಓಡಾಡಲು ಸಾಧ್ಯವಿಲ್ಲ. ಇದರ ಮೇಲೆ ಬೇಕಾದಷ್ಟು ಲೇವಾದೇವಿ. ಬರಬೇಕಾದ ಬಾಕಿ ಎಷ್ಟೋ ಬಿದ್ದಿದೆ. ಮುಪ್ಪಿನಲ್ಲಿ ಅವರ ಕಷ್ಟ ಸುಖವನ್ನು ವಿಚಾರಿಸುವವರೇ ಇಲ್ಲ." ಎಂದು ಆಕ್ಷೇಪಣೀಯವಾಗಿ ಹೇಳಿದಳು. ಮರಿಗೌಡನು ಒಮ್ಮೆ ಅವಳ ಮುಖವನ್ನು ನೋಡಿದನು. ಮಾತುಗಳು ಸ್ವಲ್ಪ ಬಿರುಸಾಗಿದ್ದರೂ ಮುಖದಲ್ಲಿ ಮುಗುಳ್ನಗೆಯು ನಲಿದಾಡುತ್ತಿತ್ತು. ಅಸ್ತಮಿತ ರವಿಯ ದೆಸೆಯಿಂದ ಎದುರಾಗಿ ಕಾಣುತ್ತಿದ್ದ ಕೆಂಪಾದ ಗಗನ ಮಂಡಲವು ಅವಳ ಮುಖಕಾಂತಿಯನ್ನು ಮತ್ತಷ್ಟು ಕೆಂಪುಮಾಡಿದ್ದರೂ ಕಣ್ಣುಗಳೂ ತುಟಿಗಳೂ ಸಹನೆಯಿಂದ ಕೂಡಿದ್ದವು.

ಮರಿಗೌಡ—ಹೌದು, ಗೌಡರಿಗೆ ವಯಸ್ಸೇನೋ ಆಯಿತು. ತಾಯಿ ತಂದೆಗಳ ಕಷ್ಟಸುಖದಲ್ಲಿ ಭಾಗಿಯಾಗಬೇಕಾದುದು ಮಗಳ ಕರ್ತವ್ಯ.

ಏಕೆಂದರೆ ಗಂಡೂ ನೀನೆ, ಹೆಣ್ಣೂ ನೀನೆ ಎಂದು ಸಾಕಿದ್ದಾರೆ. ಹೀಗಿರುವಾಗ ನನ್ನದೇನಿದೆ?

ಶಾರದೆ— ಹಾಗಿದ್ದರೆ ಅವರು ಯಾರಿಗೋಸ್ಕರ ಇಷ್ಟು ಕಷ್ಟಪಡುತ್ತಿರುವುದು?

ಮರಿಗೌಡ—ಕಷ್ಟವೇಕೆ? ಈವರೆಗೆ ಗಳಿಸಿರುವುದನ್ನು ಸುಖವಾಗಿ ಅನುಭವಿಸಬಾರದೆ?

ಶಾರದೆ—ಅವರು ಅನುಭವಿಸುವ ಮಾತು ಬೇರೆ. ಅವರು ತಾನೆ ಇನ್ನೆಷ್ಟು ಕಾಲ ಅನುಭವಿಸಿಯಾರು?

ಮರಿಗೌಡ—ಅವರ ಜೀವಾವಧಿ.

ಶಾರದೆ—ಆಮೇಲೊ? ಅದೆಲ್ಲಕ್ಕೂ ಉತ್ತರಾಧಿಕಾರಿಗಳು?

ಮರಿಗೌಡ—ಅವರನ್ನೇ ಕೇಳು.

ಶಾರದೆ—ನಿಮಗೆ ತಿಳಿಯದ? ಈಗತಾನೆ ಹೇಳಿದಿರಿ–'ನೀನೆ ಗಂಡು ನೀನೆ ಹೆಣ್ಣು ಎಂದು ಸಾಕಿದ್ದಾರೆ' ಎಂದು

ಮರಿಗೌಡ—ಹಾಗಾದರೆ ನೀನೇನೋ ಉತ್ತರಾಧಿಕಾರಿ?

ಶಾರದೆ—ನಾನೆಂದರೇನು ನೀವೆಂದರೇನು?

ಮರಿಗೌಡ—ಏನೆಂದೆ, ಪುನಃ ಹೇಳು?

ಶಾರದೆ—ನಾನು ಉತ್ತರಾಧಿಕಾರಿಯಾದರೆ ನೀವೇ ಆದಂತಲ್ಲವೆ?

ಮರಿಗೌಡ—ಶಿವ ಶಿವಾ, ನಿಮ್ಮ ತಂದೆ ಆಸ್ತಿಗೆ ಉತ್ತರಾಧಿಕಾರಿಯಾಗುವ ಪಾಪ ನನಗೆ ಬೇಡ.

ಶಾರದೆ—ಅದು ಪಾಪವೆ?

ಮರಿಗೌಡ–ಅಲ್ಲದೆ ಮತ್ತೇನು? ಎಷ್ಟು ಮಂದಿ ಬಡರೈತರ ಕಣ್ಣೀರು ಸುರಿಸಿ ವಸೂಲ್ಮಾಡಿದ ಬಡ್ಡಿ ಹಣವೋ ಅದು? ಎಷ್ಟು ಮಂದಿ ಬಡರೈತರ ಮೇಲೆ ಬಡ್ಡಿಗೆ ಬಡ್ಡಿ ಏರಿಸಿ ಋಣಮುಕ್ತರಾಗದಂತೆ ಮಾಡಿ ಕ್ರಯಕ್ಕೆಂದು ಬರೆಸಿಕೊಂಡ ಜಮೀನುಗಳೋ ಅವು? ಅದನ್ನೆಲ್ಲಾ ನಾನು ಕಟ್ಟಿಕೊಂಡು

ಅವರೆಲ್ಲರ ಋಣ ತೀರಿಸಲು ಇನ್ನು ಎಷ್ಟು ಜನ್ಮಗಳೆತ್ತಬೇಕೋ ಕಾಣೆ. ಸರಿ, ಈ ಹಂಚಿಕೆಯನ್ನು ಎಷ್ಟು ದಿನದಿಂದ ಯೋಚಿಸಿದ್ದೆ ?

ಶಾರದೆ—ಹಾಗಾದರೆ ನಮ್ಮ ತಂದೆ ಸಂಪಾದಿಸಿರುವುದೆಲ್ಲಾ ಅಷ್ಟು ಅನ್ಯಾಯವೆ ?

ಮರಿಗೌಡ—ಹಾಗಲ್ಲದೆ ನನ್ನಂತೆ ವ್ಯೈಬೆನರನ್ನು ನೆಲಕ್ಕೆ ಬಸಿದು ಸಂಪಾದಿಸಿದರೇನು ?

ಶಾರದೆ—ಅದು ನನಗೆ ತಿಳಿಯದು. ಸಂಪಾದಿಸಿರುವುದೇನೋ ನಿಜ. ಆದರೆ ಅದರಲ್ಲಿ ಎಳ್ಳಷ್ಟನ್ನಾದರೂ ಅವರ ಜೊತೆಯಲ್ಲಿ ತೆಗೆದುಕೊಂಡು ಹೋಗುವುದು ಸಾಧ್ಯವೆ ?

ಮರಿಗೌಡ—ಏಕಾಗಬಾರದು ? ಎಲ್ಲವನ್ನೂ ತೆಗೆದುಕೊಂಡು ಹೋಗಬಹುದು.

ಶಾರದೆ—ಹೇಗೆ ?

ಮರಿಗೌಡ—ಯಾರಿಂದ ಅದನ್ನು ಸಂಪಾದಿಸಿದರೋ ಅವರ ಮೇಲ್ಮೆಗಾಗಿಯೇ ಅದನ್ನು ವಿನಿಯೋಗಿಸಿದರಾಯ್ತು. ಎಲ್ಲವನ್ನೂ ಜೊತೆಯಲ್ಲಿ ತೆಗೆದುಕೊಂಡು ಹೋದಂತೆಯೇ ಅದರ ಪರಿಣಾಮ.

ಶಾರದೆ—ನಿಮ್ಮ ವೇದಾಂತ ನಾನು ಕೇಳಲಿಲ್ಲ. ಅದರ ಹವ್ಯಾಸ ನಿಮಗೆ ಬೇಕೋ ಬೇಡವೋ ಅಷ್ಟು ಹೇಳಿ.

ಮರಿಗೌಡ—ನನಗೆ ಬೇಡ.

ಶಾರದೆ—ಖಂಡಿತವೊ ?

ಮರಿಗೌಡ—ಖಂಡಿತ.

ಶಾರದೆಯು ಕ್ಷಣಕಾಲ ಎವೆಯಿಕ್ಕದೆ ಗಂಡನ ಮುಖವನ್ನೇ ನೋಡುತ್ತಿದ್ದಳು.

ಮರಿಗೌಡ—ಶಾರದ, ನಾನು ಹೇಳುತ್ತಿರುವುದನ್ನು ಸತ್ಯವೆಂದು ತಿಳಿ. ನಮ್ಮ ತಾಯ್ತಂದೆಗಳ ಸುಕೃತ ವಿಶೇಷದಿಂದಲೋ ನಿನ್ನ ಅಥವಾ ಮಕ್ಕಳ ದೆಸೆಯಿಂದಲೋ ಭಗವಂತನು ಸಧ್ಯದಲ್ಲಿ ನಾವೂ ತಿಂದು ಮನೆಗೆ ಬಂದವ

ರಿಗೂ ಒಂದು ತುತ್ತು ಹಾಕುವಷ್ಟನ್ನು ಅನುಗ್ರಹಿಸಿದ್ದಾನೆ. ನಮ್ಮ ಕಾಯಕಷ್ಟದಿಂದ ಸಂಪಾದಿಸಿದ್ದೆಂಬ ಸಮಾಧಾನವಿದೆ. ಹೀಗಿರುವಾಗ ದುರಾಸೆ ಏಕೆ? ಮತ್ತೊಬ್ಬರ ಮನಸ್ಸನ್ನು ನೋಯಿಸಿದ್ದರಿಂದ ಬರುವ ಸುಖ ನಮಗೆ ಬೇಡ. ಅದರಿಂದ ಸಂಘಟಿಸುವ ಪಾಪವನ್ನು ನಾವಲ್ಲದಿದ್ದರೆ ನಮ್ಮ ಮಕ್ಕಳಾದರೂ ಒಂದಲ್ಲ ಒಂದು ರೀತಿಯಲ್ಲಿ ಅನುಭವಿಸಲೇ ಬೇಕಾದೀತು. ಆದ್ದರಿಂದ ಅದರ ಹವ್ಯಾಸ ಖಂಡಿತ ನಮಗೆ ಬೇಡ.

ಶಾರದೆ—ಈಗ ನಾನು ಅವರಿಗೆ ಏನು ಹೇಳಲಿ?

ಮರಿಗೌಡ—ಹಾಗಾದರೆ ಈ ಮೊದಲೆ ಅವರು ನಿನ್ನನ್ನು ಕೇಳಿದರೇ?

ಶಾರದೆ—ಹೌದು, ಈ ದಿನ ಬೆಳಗ್ಗೆ ನನ್ನೊಡನೆ ಪ್ರಸ್ತಾಪಿಸಿದರು. ನಿಮ್ಮೊಡನೆ ಆಲೋಚಿಸುವುದಾಗಿ ಹೇಳಿದ್ದೆ.

ಮರಿಗೌಡ—ಆಲೋಚಿಸಿದ್ದಾಯ್ತಲ್ಲ.

ಶಾರದೆ—ಇದೆಲ್ಲವನ್ನೂ ಅವರ ಮನಸ್ಸಿಗೆ ಹಿಡಿಯುವಂತೆ ಹೇಳಲು ನನಗೆ ಶಕ್ತಿ ಇಲ್ಲ. ನಿಮ್ಮೊಡನೆಯೇ ಆಲೋಚಿಸುವುದಾಗಿ ಹೇಳುತ್ತೇನೆ.

ಮರಿಗೌಡ—ಆಗಬಹುದು.

ಅಷ್ಟು ಹೊತ್ತಿಗೆ ಅಲುಗಾಡದೆ ಕನ್ನಡಿಯಂತಿದ್ದ ಭಾವಿಯ ನೀರಿನಲ್ಲಿ ಪಂಚಮಿ ಚಂದ್ರನ ಪ್ರತಿಬಿಂಬವು ಕಾಣಿಸಿತು. ಇಬ್ಬರೂ ಮನೆಯ ಕಡೆ ಹೊರಟರು.

ಮಾವನಿಗೂ ಅಳಿಯನಿಗೂ ಒಂದಲ್ಲ ನಾಲ್ಕು ದಿನ ಸಂಭಾಷಣೆ ನಡೆಯಿತು. ಅಳಿಯನ ಮಾತುಗಳು ಮಾವನಿಗೆ ಮೊದಮೊದಲು ಅರ್ಥವೇ ಆಗಲಿಲ್ಲ. ದುಡ್ಡು ದುಡ್ಡನ್ನು ದುಡಿಯಬೇಕೆಂಬುದೊಂದೇ ಮಾವನ ಭಾವನೆ. ದುಡಿದ ದುಡ್ಡು ಸದ್ವಿನಿಯೋಗವಾಗಬೇಕೆಂಬುದೇ ಅಳಿಯನ ಭಾವನೆ. ಆಸ್ತಿಯ ವಿಚಾರವಾಗಿ ಮಗಳಿಗೂ ಅಳಿಯನಿಗೂ ಇದ್ದ ಔದಾಸೀನ್ಯವು ಗೌಡರ ಮನಸ್ಸಿಗೆ ಹಿಡಿಯಿತು. ಯೋಚಿಸಿ ಯೋಚಿಸಿ ಕಡೆಗೊಂದು ನಿರ್ಧಾರಕ್ಕೆ ಬಂದರು.

ಇಂದು ಶಿವಪುರದ ಇತಿಹಾಸದಲ್ಲೇ ಒಂದು ಮುಖ್ಯ ದಿನ. ನದಿ

ಆಚೆದಡದ ಶಿವಾಲಕ್ಕೆ ಸ್ವಲ್ಪ ದೂರದಲ್ಲಿ ವಿಶಾಲವಾದ ಚಪ್ಪರದ ಕೆಳಗಡೆ ಜಗುಲಿಯ ಮೇಲೆ ಮಧ್ಯದಲ್ಲಿ ಸಂಸ್ಥಾನದ ಮುಖ್ಯ ಮಂತ್ರಿಗಳವರೂ ಅವರ ಎಡಗಡೆ ವಿದ್ಯಾಸಚಿವರೂ ಬಲಗಡೆ ಶಿವಪುರದ ಗುರುಗಳೂ ಕುಳಿತಿದ್ದಾರೆ. ಮುಂಭಾಗದಲ್ಲಿ ಬೆಂಗಳೂರಿಂದ ಬಂದಿದ್ದ ಅನೇಕ ಮಂದಿ ಅಧಿಕಾರ ವರ್ಗದವರೂ ಖಾಸಗಿ ಮಹನೀಯರೂ ಶಿವಪುರ ಮತ್ತು ಅದರ ಸುತ್ತ ಮುತ್ತಲಿನ ಗ್ರಾಮದ ರೈತರೂ, ಹೆಂಗಸರು ಮಕ್ಕಳಾದಿಯಾಗಿ ಕುಳಿತಿದ್ದಾರೆ. ಸುಶ್ರಾವ್ಯವಾಗಿ ಮೊಳಗುತ್ತಿದ್ದ ವಾದ್ಯಧ್ವನಿಯು ನಿಂತ ಕೂಡಲೆ ಮರಿಗೌಡನೆದ್ದು ಬಂದಿದ್ದ ಅತಿಥಿಗಳಿಗೆಲ್ಲಾ ಸ್ವಾಗತವನ್ನು ಬಯಸಿ ಗ್ರಾಮಗಳ ಸ್ಥಿತಿಗತಿಗಳಿಗೆ ಶಿವಪುರವನ್ನೇ ಉದಾಹರಣೆಯನ್ನಾಗಿ ತೆಗೆದುಕೊಂಡು ಆವರೆಗೆ ತನಗೆ ಅನುಭವವಾಗಿದ್ದ ವಿಚಾರಗಳನ್ನು ಕುರಿತು ಪುಟ್ಟದೊಂದು ಭಾಷಣವನ್ನು ಮಾಡಿದನು.

ಅನಂತರ ಪಟೇಲ್ ತಿಮ್ಮೆಗೌಡರು ತಮ್ಮ ವಿಶಿಷ್ಟ ಆಸ್ತಿಯೂ ಯಾವ ರೀತಿ ವಿನಿಯೋಗವಾಗಬೇಕೆಂಬ ಬಗ್ಗೆ ಅವರ ಮರಣಶಾಸನದಲ್ಲಡಗಿದ್ದ ಅಭಿಪ್ರಾಯವನ್ನು ಸಂಕ್ಷಿಪ್ತವಾಗಿ ಹೇಳಿದರು. ಏನೆಂದರೆ—ಈ ವರೆಗೆ ಗಳಿಸಿರುವ ಸುಮಾರು 'ಎರಡು ಲಕ್ಷ ರೂಪಾಯಿಗಳ ಆಸ್ತಿಯಲ್ಲಿ ಶಿವಪುರದ ವಸತಿ ವಿದ್ಯಾಶಾಲೆಯ ಕಟ್ಟಡಕ್ಕಾಗಿ ಐವತ್ತು ಸಹಸ್ರ ರೂಪಾಯಿಗಳೂ, ಬಡ್ಡಿಯಿಂದ ಶಿಬ್ಬಂದಿ ಖರ್ಚಿಗಾಗಿ ವಿನಿಯೋಗಿಸಲು ಠೇವಣಿಗಾಗಿ ಐವತ್ತು ಸಹಸ್ರ ರೂಪಾಯಿಗಳೂ, ವಸತಿ ವಿದ್ಯಾಶಾಲೆಯಲ್ಲಿ ವ್ಯಾಸಂಗ ಮಾಡುವ ಸುಮಾರು ನೂರು ಮಂದಿ ಬಡ ವಿದ್ಯಾರ್ಥಿಗಳ ಉಚಿತ ಭೋಜನ ಸೌಕರ್ಯಕ್ಕಾಗಿ ಐವತ್ತು ಸಹಸ್ರ ರೂಪಾಯಿ ಬೆಲೆ ಬಾಳುವ ಜಮೀನುಗಳೂ, ಶಿವಪುರದಿಂದ ಹೋಗಿ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ವೇತನಕ್ಕಾಗಿ ಬಡ್ಡಿ ಹಣದಿಂದ ವಿನಿಯೋಗಿಸುವಂತೆ ಠೇವಣಿಗಾಗಿ ಇಪ್ಪತ್ತೈದು ಸಹಸ್ರ ರೂಪಾಯಿಗಳೂ, ಇದರಂತೆಯೇ ಬೆಟ್ಟದ ಮೇಲಿನ ಭೈರೇದೇವರ ದೇವಸ್ಥಾನದಲ್ಲಿಯೂ ಊರು ಮುಂದಿನ ಈಶ್ವರ ದೇವಸ್ಥಾನದಲ್ಲಿಯೂ ದೀಪಾರಾಧನೆ, ಮತ್ತು ವರ್ಷಕ್ಕೊಮ್ಮೆ ಸಂತರ್ಪಣೆ

ಖರ್ಚಿಗಾಗಿ ಹತ್ತು ಸಾವಿರ ರೂಪಾಯಿಗಳೂ, ಶಿವಪುರದ ರೈತರಿಗಾಗಿ ಒಂದು ಸಹಕಾರ ಸಂಘವನ್ನು ಸ್ಥಾಪಿಸಲು ಅದರ ಬಂಡವಾಳಕ್ಕಾಗಿಯೂ ಮತ್ತು ಗ್ರಾಮೋದ್ಧಾರ ಕಾರ್ಯಕ್ಕಾಗಿಯೂ ಹದಿನೈದು ಸಹಸ್ರ ರೂಪಾಯಿಗಳೂ ವಿನಿಯೋಗಿಸಲ್ಪಡಬೇಕೆಂದೂ, ಈ ರೀತಿ ತನ್ನ ಮನಸ್ಸಿನ ಪರಿವರ್ತನೆಗೆ ಶ್ರೀ ಗುರುಗಳೂ ಅವರ ಪ್ರಿಯ ಶಿಷ್ಯನೂ ತನ್ನ ಅಳಿಯನೂ ಆದ ಮರಿ ಗೌಡನೂ ಕಾರಣರಾದ್ದರಿಂದ ಮೇಲ್ಕಂಡ ಎಲ್ಲಾ ಸಂಸ್ಥೆಗಳ ಎಲ್ಲಾ ಕಾರ್ಯ ಕಾರಿ ಮಂಡಲಿಯ ಅಧ್ಯಕ್ಷತೆಯು ಜೀವಾವಧಿ ಮರಿಗೌಡನದೇ ಆಗಿರ ಬೇಕೆಂದೂ ಅಂದಿನ ವಸತಿ ವಿದ್ಯಾಶಾಲಾ ಕಟ್ಟಡದ ಶಂಕುಸ್ಥಾಪನೆಯು ಶ್ರೀ ಗುರುಗಳ ಅಮೃತಹಸ್ತದಿಂದ ನೆರವೇರಬೇಕೆಂದೂ ಪ್ರಾರ್ಥಿಸಿದರು.

ಗೊತ್ತುಮಾಡಿದ್ದ ಮುಹೂರ್ತಕ್ಕೆ ಸರಿಯಾಗಿ ಮಂತ್ರಿವರ್ಯರ ಮತ್ತು ಪಟೇಲರಾದಿಯಾಗಿ ಸರ್ವರ ಅಭಿಮತದಂತೆ ಶ್ರೀಗಳವರು ಅವರಿಗೆ ತಾವು ಗಳಿಸಿದ್ದ ಪುಣ್ಯಪ್ರಭಾವವನ್ನೆಲ್ಲಾ ಆತ್ಮಪೂರ್ವಕವಾಗಿ ಧಾರೆ ಎರೆದು ವಸತಿ ವಿದ್ಯಾಶಾಲೆಯ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಆ ದಿನ ಅಧ್ಯಕ್ಷ ಪದವಿಯನ್ನಲಂಕರಿಸಿದ್ದ ಮಂತ್ರಿವರ್ಯರು ತಮ್ಮ ಉಪಸಂಹಾರ ಭಾಷಣವನ್ನು ಮಾಡುತ್ತಾ ಶ್ರೀ ಗುರುಗಳವರ ಸ್ವಾರ್ಥ ತ್ಯಾಗವನ್ನೂ ತಿಮ್ಮೇಗೌಡರ ಧರ್ಮ ಬುದ್ಧಿಯನ್ನೂ ಮರಿಗೌಡನ ದೇಶಾಭಿ ಮಾನವನ್ನೂ ಪ್ರಶಂಸಿಸಿ ವಸತಿ ವಿದ್ಯಾಶಾಲೆಯ ಅಭಿವೃದ್ಧಿಗೆ ಘನಸರ್ಕಾರ ದಿಂದ ಸಾಧ್ಯವಾದ ಸೌಕರ್ಯಗಳನ್ನು ಕಲ್ಪಿಸಿಕೊಡುವುದಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಸಭೆಯು ಮುಕ್ತಾಯವಾಯಿತು.

ಬಂದಿದ್ದ ಅತಿಥಿಗಳಿಗೆಲ್ಲಾ ಉಚಿತ ರೀತಿಯಲ್ಲಿ ಔತಣಾದಿಗಳು ನಡೆ ದುವು. ಸಾಯಂಕಾಲದಲ್ಲಿ ಎಲ್ಲರೂ ತಮ್ಮ ತಮ್ಮ ಊರುಗಳಿಗೆ ಹೊರಟರು. ಬೆಂಗಳೂರಿಂದ ಆಹ್ವಾನಿತರಾಗಿದ್ದವರಲ್ಲಿ ಲಾಯರ್ ರಾಮಸ್ವಾಮಿಯವರೂ ಒಬ್ಬರು. ಆ ದಿನ ಅವರು ಅಲ್ಲಿಯೇ ಇದ್ದು ಮನೆಗೆ ದಯಮಾಡಿಸಿ ಆತಿ ಥ್ಯವನ್ನು ಸ್ವೀಕರಿಸಬೇಕೆಂದು ಕೃಷ್ಣಮೂರ್ತಿಯೂ ಮರಿಗೌಡನೂ ಕೇಳಿ ಕೊಂಡರು. ರಾಮಸ್ವಾಮಿಯವರು ಅವರ ಇಷ್ಟದಂತೆ ಆ ದಿನ ಅಲ್ಲಿಯೇ

ಇಳಿದರು. ಸಾಯಂಕಾಲ ಇಬ್ಬರೂ ರಾಮಸ್ವಾಮಿಯವರನ್ನು ಕರೆದುಕೊಂಡು ಗುರುಗಳ ದರ್ಶನಾರ್ಥವಾಗಿ ಗುಡಿಸಲಿಗೆ ಹೋದರು. ಗುಡಿಸಲಿನ ಮುಂಭಾಗದ ಮರದ ಕೆಳಗೆ ಹಾಕಿದ್ದ ಕೃಷ್ಣಾಜಿನದ ಮೇಲೆ ಪದ್ಮಾಸನವನ್ನು ಹಾಕಿ ಕುಳಿತು ಗುರುಗಳು ಯಾವುದೊ ಗ್ರಂಥವೊಂದನ್ನು ಓದುತ್ತಿದ್ದರು. ಅವರನ್ನು ಸಮೀಪಿಸಿದೊಡನೆಯೇ ರಾಮಸ್ವಾಮಿಯ ಹೃದಯದಲ್ಲಿ ಅನಿರ್ವಚನೀಯವಾದೊಂದು ಪ್ರೇಮವೂ ಭಕ್ತಿಯೂ ಮೂಡಿ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಕುಳಿತರು.



ಗುರುಗಳು ಒಮ್ಮೆ ಅವರ ಕಡೆ ನೋಡಿ "ನಿಮ್ಮ ಹೆಸರು ?" ಎಂದರು. ಅಷ್ಟರಲ್ಲಿಯೇ ಕೃಷ್ಣಮೂರ್ತಿಯು ಅವರ ಹೆಸರನ್ನು ತಾನೇ ಹೇಳಿ, ಅವರು ಬೆಂಗಳೂರಿನ ಪ್ರಮುಖ ಲಾಯರುಗಳಲ್ಲೊಬ್ಬರೆಂದೂ, ತಾನು ಲಾಯರ್ ವೃತ್ತಿಯನ್ನು ಅವಲಂಬಿಸಿದಾಗ ತನಗೆ ಶಿಕ್ಷಣ ಕೊಟ್ಟರೆಂದೂ ಹೇಳಿದನು. ಮರಿಗೌಡನು ಓದುತ್ತಿದ್ದಾಗ ಅವನು ವಿದ್ಯಾರ್ಥಿವೇತನವನ್ನು ಪಡೆಯಲು ಅವರು ಮಾಡಿದ ಸಹಾಯವನ್ನು ಹೇಳಿದನು. ಗುರುಗಳು ಸಂತೋಷಪಟ್ಟು ಅವರ ಕಡೆ ತಿರುಗಿ "ನಿಮ್ಮ ತಂದೆಯವರ ಹೆಸರು ?" ಎಂದರು.

ರಾಮಸ್ವಾಮಿ— ಚಿದಂಬರಶಾಸ್ತ್ರಿಗಳು.

ಗುರುಗಳು—ಯಾವ ಉದ್ಯೋಗವನ್ನು ಮಾಡುತ್ತಿದ್ದಾರೆ.

ರಾಮಸ್ವಾಮಿ—ಅವರು ಮಂಡಿಯಲ್ಲಿ ಗುಮಾಸ್ತರಾಗಿದ್ದರು.

ಗುರುಗಳು—ಯಾರ ಮಂಡಿಯಲ್ಲಿ?

ರಾಮಸ್ವಾಮಿ—ವೀರಪ್ಪನವರ ಮಂಡಿಯಲ್ಲಿ.

ಗುರುಗಳು—ಈಗ ಎಲ್ಲಿದ್ದಾರೆ ?

ರಾಮಸ್ವಾಮಿ–ಇಲ್ಲ. ಅವರು ತೀರಿಹೋಗಿ ಒಂಭತ್ತು ವರ್ಷವಾಯ್ತು.

ಅದನ್ನು ಕೇಳುತ್ತಲೇ ಗುರುಗಳ ಮುಖವು ಖಿನ್ನವಾಯಿತು. ಒಂದು ಬಾರಿ ನಿಟ್ಟುಸಿರು ಬಿಟ್ಟು ನೆಲದ ಕಡೆ ನೋಡುತ್ತಾ "ನಿಮ್ಮ ತಾಯಿ ಇದ್ದಾರೋ ?" ಎಂದರು.

ರಾಮಸ್ವಾಮಿ—ಇಲ್ಲ. ಅವರು ತೀರಿಹೋಗಿ ಹತ್ತು ವರ್ಷಗಳಾದುವು.

ಗುರು—(ಮತ್ತೊಮ್ಮೆ ನಿಟ್ಟುಸಿರನ್ನು ಬಿಡುತ್ತಾ) ನಿಮಗೆ ಅಣ್ಣ ತಮ್ಮಂದಿರಿದ್ದಾರೋ?

ರಾಮಸ್ವಾಮಿ—ಇಲ್ಲ. ಹುಟ್ಟಿದವನೂ ನಾನೊಬ್ಬ, ಇರುವವನೂ ನಾನೊಬ್ಬ. (ಎಂದು ಗುರುಗಳ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾ ತನ್ನ ತಂದೆತಾಯಿಯ ಮರಣವಾರ್ತೆಯನ್ನು ಕೇಳಿ ಅವರು ಪಶ್ಚಾತ್ತಾಪಪಟ್ಟದ್ದನ್ನು ನೋಡಿ) "ನಮ್ಮ ತಂದೆಯವರು ತಮಗೆ ಪರಿಚಯವೇ?" ಎಂದರು.

ಗುರುಗಳು—ಇದ್ದಂತೆ ಜ್ಞಾಪಕ. ಬಹಳ ವರ್ಷಗಳ ಹಿಂದಿನ ಮಾತು.

ರಾಮಸ್ವಾಮಿ—(ಅವರ ಪೂರ್ವಾಪರವನ್ನು ತಿಳಿಯುವ ಉತ್ಸಾಹ ದಿಂದ) ತಮ್ಮ ಜನ್ಮಸ್ಥಳ?

ಗುರು—ಮಾಗಡಿ ಪ್ರಾಂತ್ಯದಲ್ಲಿಯೇ ಯಾವುದೊ ಒಂದು ಹಳ್ಳಿ.

ರಾಮಸ್ವಾಮಿ–ಈ ಆಶ್ರಮವನ್ನು ಕೈಗೊಂಡು ಎಷ್ಟು ವರ್ಷವಾಯ್ತು.

ಗುರು–ಎಷ್ಟೋ ವರ್ಷಗಳಾದುವು. ಅದೆಲ್ಲವೂ ಬಹಳ ಹಿಂದಿನಮಾತು.

ಎಂದು ಆ ವಿಚಾರವಾಗಿ ಪ್ರಸ್ತಾಪಿಸಲು ತಮಗಿಷ್ಟವಿಲ್ಲವೆಂಬುದನ್ನು ಮುಖ ಭಂಗಿಯಿಂದ ತೋರಿಸಿದರು. ಅದನ್ನರಿತ ರಾಮಸ್ವಾಮಿಯವರು ಮುಂದಕ್ಕೆ ಪ್ರಶ್ನೆಮಾಡದೆ ಅವರು ಕೊಟ್ಟ ಒಂದೆರಡು ಹಣ್ಣುಗಳನ್ನು ಸ್ವೀಕರಿಸಿ ಗುರುಗಳಿಗೆ ನಮಸ್ಕಾರಮಾಡಿ ಮೂವರೂ ಕೃಷ್ಣಮೂರ್ತಿಯ ಮನೆಗೆ ಹೊರಟರು. ಮರುದಿನ ಬೆಳಗ್ಗೆ ಉಪಾಹಾರಕ್ಕಾಗಿ ಮರಿಗೌಡನ ಮನೆಗೆ ಬಂದ ರಾಮಸ್ವಾಮಿಯವರು ಮರಿಗೌಡನನ್ನು ಕುರಿತು "ಎಲ್ಲಿ, ಆ ದಿನ ಎಳನೀರನ್ನು ಕಿತ್ತ ಮರದಿಂದ ಪುನಃ ಒಂದು ಎಳನೀರನ್ನು ಕೊಡುವೆಯಾ?" ಎಂದು ಹಾಸ್ಯಕ್ಕಾಗಿ ಕೇಳಿದರು.

ಮರಿಗೌಡ—ಸಿದ್ಧವಾಗಿದೆ. ಇದು ಆ ಮರದ್ದೇ. (ಎಂದು ಹೇಳಿ ಎಳ ನೀರನ್ನು ಕಳಚಿಕೊಟ್ಟನು.)

ಅದನ್ನೂ ಸ್ವೀಕರಿಸಿ ಅವರಿಂದ ಬೀಳ್ಕೊಟ್ಟು ರಾಮಸ್ವಾಮಿಯು ಬೆಂಗಳೂರಿಗೆ ಹೊರಟುಹೋದರು.

ಪಟೇಲ್ ತಿಮ್ಮೆಗೌಡರ ಉದಾರ ಬುದ್ಧಿಗನುಸಾರವಾಗಿ ಎಲ್ಲರ ಸಹ ಕಾರದಿಂದ ವಸತಿ ವಿದ್ಯಾಶಾಲೆಯ ಕಟ್ಟಡವು ಸ್ವಲ್ಪ ಕಾಲದೊಳಗಾಗಿಯೇ ಪೂರ್ಣವಾಗಿ ಯೋಜನೆಯ ಪ್ರಕಾರ ಕೆಲಸ ಕಾರ್ಯಗಳು ಪ್ರಾರಂಭ ವಾದುವು. ಮೊದಲು ಮಾಧ್ಯಮಿಕ ಶಾಲಾ ದರ್ಜೆಯಲ್ಲಿ ಪ್ರಾರಂಭವಾದ ವಿದ್ಯಾಶಾಲೆಯು ಮೂರು ವರ್ಷಗಳೊಳಗಾಗಿ ಪ್ರೌಢಶಿಕ್ಷಣವನ್ನು ಕೊಡುವ ಮಟ್ಟಕ್ಕೆ ಏರಿತು. ಸಾಧಾರಣ ಪಾಠಪ್ರವಚನಗಳ ಜೊತೆಗೆ ನೂತನ ವ್ಯವಸಾಯ ಕ್ರಮ, ನೂಲುವುದು, ನೇಯುವುದು ಇತ್ಯಾದಿ ಯಾವು ದಾದರೊಂದು ಕೈಕಸಬುಗಳಲ್ಲಿ ಶಿಕ್ಷಣ ಕೊಡುವುದು ಮಾತ್ರವಲ್ಲದೆ,

ಪ್ರಾಚೀನ ಭಾರತದ ಗುರುಕುಲಗಳ ಮಾದರಿಯನ್ನನುಸರಿಸಿ ಬಾಲಕರ ನೈತಿಕ ಜ್ಞಾನಾಭಿವೃದ್ಧಿಗೂ ದೈಹಿಕ ಶಿಕ್ಷಣಕ್ಕೂ ಅಲ್ಲಿ ತಕ್ಕ ವ್ಯವಸ್ಥೆಗಳನ್ನು ಮಾಡಲಾಯಿತು.

ಅಲ್ಲಿನ ಶಾಂತ ವಾತಾವರಣ, ದಿನಚರಿಯ ಕ್ರಮ, ಶಿಸ್ತು ಮುಂತಾದುವನ್ನು ತಿಳಿದ ನಗರವಾಸಿಗಳಾದ ಶ್ರೀಮಂತರನೇಕರು ತಮ್ಮ ಮಕ್ಕಳನ್ನು ಕೆಲವು ಕಾಲ ಶಿಕ್ಷಣಕ್ಕಾಗಿ ಅಲ್ಲಿ ಇರಿಸುವಂತಾಯಿತು. ಮರಿಗೌಡನು ತನ್ನ ಮನೆಯು ವಸತಿ ವಿದ್ಯಾಶಾಲೆಗೆ ಹತ್ತಿರದಲ್ಲಿದ್ದರೂ ಕೂಡ ತನ್ನ ಮಗನಾದ ವಸಂತನನ್ನೂ ತನ್ನ ಅಣ್ಣನ ಮಗನನ್ನೂ ಶಾಲೆಯ ಶಿಸ್ತಿಗೊಳಪಡಿಸಿ ಅಲ್ಲಿಯೇ ಬಿಟ್ಟಿದ್ದನು. ಕೇವಲ ರಜದ ದಿನಗಳಲ್ಲಿ ಮಾತ್ರ ಹುಡುಗರು ವಿದ್ಯಾಶಾಲೆಯ ಅಧಿಕಾರಿಗಳ ಅಪ್ಪಣೆಯನ್ನು ಪಡೆದು ಮನೆಗೆ ಬರಬಹುದಾಗಿತ್ತು. ಮರಿಗೌಡನ ಅಣ್ಣನ ಮಗನು ಹಾಗೂ ಹೀಗೂ ಅಲ್ಲಿನ ವ್ಯಾಸಂಗವನ್ನು ಪೂರೈಸಿ ವ್ಯವಸಾಯವನ್ನು ಕೈಗೊಂಡನು. ವಸಂತನು ಅಲ್ಲಿನ ವ್ಯಾಸಂಗವು ಪೂರೈಸಿದನಂತರ ಬೆಂಗಳೂರಲ್ಲಿ ಇಂಟರ್ ಮೀಡಿಯಟ್ ಕಾಲೇಜನ್ನು ಸೇರಿದನು. ಮಗನ ಊಟ ವಸತಿಗಳಿಗೆ ಮರಿಗೌಡನು ಕಾಲೇಜ್ ಹಾಸ್ಟಲ್‌ನಲ್ಲಿ ತಕ್ಕ ಏರ್ಪಾಟನ್ನು ಮಾಡಿದನು.

ತಿಮ್ಮೆಗೌಡರ ಔದಾರ್ಯವು ಆಳುವ ಮಹಾಸ್ವಾಮಿಯವರ ಗಮನಕ್ಕೆ ಬಂದು ಸಂತೋಷಪಟ್ಟು ಮಹಾಸ್ವಾಮಿಯವರು ತಿಮ್ಮೆಗೌಡರಿಗೆ ಸುವರ್ಣ ಪದಕದೊಡನೆ "ಧರ್ಮಪ್ರಕಾಶ" ಎಂಬ ಬಿರುದನ್ನು ದಯಪಾಲಿಸಿದರು. ಅದಕ್ಕಾಗಿ ತಿಮ್ಮೆಗೌಡರನ್ನು ಅಭಿನಂದಿಸಲು ವಸತಿ ವಿದ್ಯಾಶಾಲೆಯ ವಿದ್ಯಾರ್ಥಿಗಳೂ ಅಧ್ಯಾಪಕರೂ ಒಂದು ದಿನ ಅವರಿಗೆ ಸತ್ಕಾರ ಕೂಟವನ್ನೇರ್ಪಡಿಸಿದರು. ಅದೇ ದಿನ ಶಾರದೆಯೂ ತನ್ನ ಮನೆಯಲ್ಲಿ ಒಂದು ಔತಣವನ್ನು ಮಾಡಿದಳು. ತಿಮ್ಮೆಗೌಡರೂ ಮರಿಗೌಡನೂ ಮನೆಯ ಔತಣವನ್ನು ಮುಗಿಸಿಕೊಂಡು ವಸತಿ ವಿದ್ಯಾಶಾಲೆಗೆ ಹೊರಟರು.

ಆ ದಿನದ ಆನಂದದಲ್ಲಿ ತಿಮ್ಮೆಗೌಡರ ಹೆಂಡತಿಯು ಮಗ್ನರಾಗಿ ಮಗಳನ್ನು ಕುರಿತು, "ಶಾರದ, ನಮ್ಮ ದಿನಗಳು ಕಳೆದುವು. ಇನ್ನು

ಇರುವಷ್ಟು ಕಾಲ ಎಲ್ಲಿಯಾದರೂ ಒಂದು ತುತ್ತು ಅನ್ನ ಸಿಕ್ಕಿದರೆ ಆಯಿತು. ನನ್ನ ಹತ್ತಿರ ಮೊದಲಿನಿಂದಲೂ ಕೂಡಿಟ್ಟ ಸ್ವಲ್ಪ ಹಣವಿದೆ. ಅದನ್ನು ತೆಗೆದುಕೊಂಡು ನಿನ್ನ ಮಗ ವಸಂತನ ವಿದ್ಯಾಭ್ಯಾಸಕ್ಕೆ ಉಪಯೋಗಿಸು." ಎಂದರು. ಶಾರದೆಯು ತನ್ನ ತಂದೆಯ ಮತ್ತು ಗಂಡನ ಅಭಿಪ್ರಾಯ ವೇನಿರುವುದೋ ಅದನ್ನೂ ಕೇಳಬೇಕೆಂದಳು. ಅದಕ್ಕೆ ಶಾರದೆಯ ತಾಯಿ ಒಪ್ಪಿದರು.

ಸಾಯಂಕಾಲ ವಸತಿ ವಿದ್ಯಾಶಾಲೆಯ ಸತ್ಕಾರವನ್ನು ಸ್ವೀಕರಿಸಿ ತಿಮ್ಮೇಗೌಡರು ಅಳಿಯನೊಂದಿಗೆ ಮನೆಗೆ ಬಂದಾಗ ಶಾರದೆಯು ತನ್ನ ತಾಯಿಯ ಆಶಯವನ್ನು ಅವರೊಡನೆ ಹೇಳಿದಳು. ಪಟೇಲರೂ ಒಪ್ಪಿದ ನಂತರ ಮಗನನ್ನು ವ್ಯಾಸಂಗಕ್ಕಾಗಿ ಕೆಲವು ಕಾಲ ಅಮೆರಿಕಾಕ್ಕೆ ಕಳುಹಿಸು ವುದು ಯುಕ್ತವೆಂದು ಮರಿಗೌಡನು ಸೂಚಿಸಿದನು. ಹುಡುಗನನ್ನು ಅಷ್ಟು ದೂರ ಕಳುಹಿಸುವುದು ಮನೆಯವರಾರಿಗೂ ರುಚಿಸಲಿಲ್ಲ. ಮರಿಗೌಡನ ಸ್ನೇಹಿತರೊಬ್ಬರು ಹೆಚ್ಚಿನ ವ್ಯಾಸಂಗಕ್ಕಾಗಿ ಕೆಲವು ವರ್ಷ ಅಮೆರಿಕಾಕ್ಕೆ ಹೊರಡಲಿದ್ದಾರೆಂದೂ, ಅವರೊಡನೆ ಹುಡುಗನನ್ನು ಕಳುಹಿಸಿದರೆ ಯಾವ ಅಂಜಿಕೆಯೂ ಇರಲಾರದೆಂದೂ ತಿಳಿದ ಮೇಲೆ ಎಲ್ಲರೂ ಒಪ್ಪಿದರು.

ಇಂಟರ್ ಮೀಡಿಯೆಟ್ ಪರೀಕ್ಷೆಯನ್ನು ಪೂರೈಸಿಕೊಂಡು ರಜದ ಮೇಲೆ ಊರಿಗೆ ಬಂದ ವಸಂತನೊಡನೆ ಅವನ ಮುಂದಿನ ವ್ಯಾಸಂಗದ ವಿಚಾರವಾಗಿ ಮಾಡಿರುವ ಆಲೋಚನೆಯನ್ನು ಅವನ ತಾಯ್ತಂದೆಗಳು ಹೇಳಿದರು. ಧೈರ್ಯದಿಂದಲೂ ಉತ್ಸಾಹದಿಂದಲೂ ಹುಡುಗನು ಒಪ್ಪಿದನು. ಅಮೆರಿಕಾದಲ್ಲಿ ಹಾಲು ಬೆಣ್ಣೆಗಳಿಗಾಗಿ ದನಗಳನ್ನು ಸಾಕುವ ವಿಧಾನವನ್ನು ಅವನು ಕಲಿತು ಬರುವುದೆಂದು ನಿರ್ಧರವಾಯಿತು. ಅವನು ಹೊರಡುವ ಮೂರು ದಿನ ಮುನ್ನ ಅವನ ಪರೀಕ್ಷೆಯ ಫಲಿತಾಂಶವೂ ಬಂತು. ಉತ್ತೀರ್ಣನಾಗಿದ್ದನು. ಸರ್ವಸಿದ್ಧತೆಗಳನ್ನೂ ಮಾಡಿಕೊಂಡು, ತಂದೆಯ ಸ್ನೇಹಿತರು ಹೊರಡುವ ಸಮಯವನ್ನು ಅನುಸರಿಸಿ ಎಲ್ಲರಿಂದಲೂ ಬೀಳ್ಕೊಟ್ಟು ವಸಂತನು ಅಮೆರಿಕಾಕ್ಕೆ ಪ್ರಯಾಣವನ್ನು ಬೆಳೆಸಿದನು.

೯. ಆತ್ಮಕಥೆ

ವಸತಿ ವಿದ್ಯಾಶಾಲೆಯ ಆಡಳಿತ ವಿಚಾರದಲ್ಲಿ ಗುರುಗಳ ಮೇಲೆ ಬಿದ್ದಿದ್ದ ಹೆಚ್ಚಾದ ಭಾರವು ಮರಿಗೌಡನಿಂದ ದಿನೇ ದಿನೇ ಹಗುರವಾಗುತ್ತಾ ಬಂತು. ವಿದ್ಯಾಶಾಲೆಯ ಆಡಳಿತ ಕ್ರಮವು ತಮ್ಮ ಮನಸ್ಸಿಗೆ ತೃಪ್ತಿಕರವಾಗಿ ನಿರ್ವಹಿಸಲ್ಪಡುತ್ತಿರುವುದನ್ನು ಕಂಡು ತಮ್ಮ ವೃದ್ಧಾಪ್ಯವನ್ನು ಕೇವಲ ಜಗದ್ರಕ್ಷಕನ ಧ್ಯಾನದಲ್ಲಿಯೇ ಕಳೆಯಲುಪಕ್ರಮಿಸಿದರು. ಆದರೂ ವಸತಿ ವಿದ್ಯಾಶಾಲೆಯ ಅಧ್ಯಾಪಕ ವರ್ಗದವರು ತಮಗೆ ಉಂಟಾದ ಕೆಲವು ಕಠಿನ ಸಮಸ್ಯೆಗಳನ್ನು ಬಗೆಹರಿಸಲು ಗುರುಗಳಲ್ಲಿಗೆ ಬಂದು ಆಲೋಚಿಸಿದಾಗ ವಯೋನುಗುಣವಾದ ತಮ್ಮ ದೈಹಿಕ ದುರ್ಬಲತೆಯನ್ನೂ ಲೆಕ್ಕಿಸದೆ ಉಚಿತ ರೀತಿಯಲ್ಲಿ ಅವರೊಡನೆ ಮಿಳಿತವಾಗಿ ಎಲ್ಲವನ್ನೂ ಪರಿಹರಿಸುತ್ತಿದ್ದರು.

ಹೀಗಿರುವಾಗ ಒಂದು ದಿವಸ ಗುರುಗಳು ಜ್ವರಪೀಡಿತರಾಗಿ ಹಾಸಿಗೆ ಹಿಡಿದು ಮಲಗಿದರು. ನಿಶ್ಶಕ್ತಿಯಿಂದ ಖಾಯಿಲೆಯು ದಿನೇ ದಿನೇ ವೃದ್ಧಿಯಾಗುತ್ತಾ ಬಂತು. ಕರಣಿಕರ ಮನೆಯಿಂದಲೂ, ವಸತಿ ವಿದ್ಯಾಶಾಲೆಯಿಂದಲೂ, ಅವರ ಆಹಾರದ ವಿಚಾರದಲ್ಲಿ ಬೇಕಾದ ಉಪಚಾರಗಳು ಒದಗುತ್ತಿದ್ದುವು. ಆವಶ್ಯಕತೆ ತೋರಿದಾಗಲೆಲ್ಲಾ, ಮರಿಗೌಡನು ಬೆಂಗಳೂರಿಗೆ ಹೋಗಿ ವೈದ್ಯರನ್ನು ಕರೆತಂದು ತೋರಿಸಿ ಬೇಕಾದ ಔಷಧಿಗಳನ್ನು ಕೊಡಿಸುತ್ತಿದ್ದನು. ಆದರೂ ಖಾಯಿಲೆಯು ಇಳಿಮುಖವಾಗಲಿಲ್ಲ.

ಒಂದು ದಿನ ಪ್ರಾತಃಕಾಲ ವಿದ್ಯಾನಿಲಯದ ಕೆಲವು ಮಂದಿ ಬಾಲಕರು ಮರಿಗೌಡನ ಮನೆಗೆ ಓಡಿ ಬಂದು, ಗುರುಗಳು ಅವನನ್ನು ಕೂಡಲೆ ಬರುವಂತೆ ಆಜ್ಞಾಪಿಸಿದರೆಂದು ತಿಳಿಸಿದರು. ಮರಿಗೌಡನು ಹೋಗಿ ನೋಡಿದ. ಗುರುಗಳು ಎಂದಿಗಿಂತಲೂ ಹೆಚ್ಚು ನಿಶ್ಶಕ್ತರಾಗಿ ಮಾತನಾಡಲು ಹೆಚ್ಚು ತ್ರಾಣವಿಲ್ಲದೆ ಮಲಗಿದ್ದರು. ಮರಿಗೌಡನು ಅವರ ತಲೆಯ ಹತ್ತಿರ ಕುಳಿತು ಅವರ ಕಡೆ ನೋಡತೊಡಗಿದ. ಗುರುಗಳು ಅವನ ಕಡೆ ಕಣ್ತೆರೆದು

ನೋಡಿ ಪಕ್ಕದಲ್ಲಿಟ್ಟಿದ್ದ ಹಾಲ ಕಡೆ ಕೈತೋರಿದರು. ಸ್ವಲ್ಪ ಹಾಲು ಕುಡಿಸಿದ ನಂತರ, ನಿದಾನವಾಗಿ, "ವಿಪರೀತ........ಸಂಕಟ, ಉಳಿಯುವಂತಿಲ್ಲ ....ನರಸಿಂಹಮೂರ್ತಿ" ಎಂದು ಹೇಳಿ ಸುಮ್ಮನಾದರು. ಒಂದೆರಡು ನಿಮಿಷ ಅವರು ಸುದಾರಿಸಿಕೊಳ್ಳುವುದರೊಳಗಾಗಿ, ಗುರುಗಳು ಪುನಃ ಕಣ್ದೆರೆದು ತಮ್ಮ ತಲೆದಿಂಬಿನ ಕಡೆ ಕೈತೋರಿಸುತ್ತಾ "ಕೈಲಿ ಬರೆದ....ಪುಸ್ತಕ ....ರಾಮಸ್ವಾಮಿಗೆ........ಕೂಡಲೆ ತಲಪಿಸು........ಬಾಲಕರನ್ನು........ಕರೆಹೇಳು........ಭಜನೆ........ಮಾಡುತ್ತಿರಲಿ.'' ಎಂದು ಹೇಳಿದರು.

ಮರಿಗೌಡನು ಇಬ್ಬರು ದೊಡ್ಡ ಹುಡುಗರನ್ನು ಕರೆದು ಆ ಪುಸ್ತಕವನ್ನು ಕೂಡಲೆ ಬೆಂಗಳೂರಲ್ಲಿರುವ ಲಾಯರ್ ರಾಮಸ್ವಾಮಿಯವರಿಗೆ ತಲುಪಿಸುವಂತೆ ಹೇಳಿ ತನ್ನ ಮೋಟಾರಿನಲ್ಲಿಯೇ ಕಳುಹಿಸಿಕೊಟ್ಟು ವಿದ್ಯಾಶಾಲೆಯ ಬಾಲಕರನ್ನು ಕರೆಸಿ ಭಜನೆಗೆ ಏರ್ಪಡಿಸಿದನು. ಸುಶ್ರಾವ್ಯವಾದ ದೇವರ ನಾಮಗಳು ತಮ್ಮ ಮಂಜುಳ ನಿನಾದದಿಂದ ಆಶ್ರಮದ ವಾತಾವರಣವನ್ನೆಲ್ಲಾ ಆವರಿಸಿದುವು. ಎಲ್ಲೆಲ್ಲಿಯೂ ದೇವ ದೇವನ ನಾಮೋಚ್ಚಾರಣೆಯ ಸುಸ್ವರವು ವಿನಹ ಬೇರೆ ಶಬ್ದವೇ ಇರಲಿಲ್ಲ. ಎಲ್ಲರೂ ಸ್ತಬ್ಧತೆಯಿಂದ ಗುರುಗಳ ಮುಖವನ್ನೇ ನೋಡುತ್ತಿದ್ದರು. ಸ್ವಲ್ಪಹೊತ್ತಿನ ಮೇಲೆ ಗುರುಗಳು ಮೆಲ್ಲನೆ ಕಣ್ತೆರೆದು ತಮ್ಮ ಬಾಯನ್ನು ತೋರಿಸಿದರು. ಇವರ ಇಂಗಿತವನ್ನು ತಿಳಿದ ಮರಿಗೌಡನು ಪಕ್ಕದಲ್ಲಿದ್ದ ಹಾಲಿನ ಬಟ್ಟಲನ್ನು ತೆಗೆದುಕೊಂಡು ಅವರ ಬಾಯಿಗೆ ಸ್ವಲ್ಪ ಹಾಲನ್ನು ಹಾಕಿದನು. ಹಾಲನ್ನು ಗುಟುಕಿರಿಸಿ ಒಂದು ಬಾರಿ ಸುತ್ತಲೂ ನೋಡಿ "........ಆತ್ಮ........ಶುದ್ಧಿ ....ಚೆನ್ನಾಗಿರಲಿ........ವಸತಿ........ವಿದ್ಯಾಶಾಲೆ........ಕಾಪಾಡಿ" ಎಂದು ಹೇಳುತ್ತಾ ಎರಡು ಕೈಗಳನ್ನೂ ಸ್ವಲ್ಪ ಮೇಲಕ್ಕೆತ್ತಿ ಊರ್ಧ್ವಮುಖಿಯಾದರು. ಮರಿಗೌಡನು ಪುನಃ ಸ್ವಲ್ಪ ಹಾಲನ್ನು ಅವರ ಬಾಯೊಳಗೆ ಹಾಕಿದನು. ಅದು ಗಂಟಲಿನಲ್ಲಿ ಇಳಿಯಿತು. ಸ್ವಲ್ಪ ಹೊತ್ತಿನೊಳಗಾಗಿ ಗುರುಗಳ ಪ್ರಾಣವಾಯುವು ವಿಶ್ವದಲ್ಲಿ ಲೀನವಾಯಿತು. ಭಜನೆಯು ನಿಂತಿತು. ಎಲ್ಲರೂ ನಿಸ್ತೇಜಮುಖದಿಂದ ತಲೆಬಾಗಿ ಕುಳಿತರು. ಎಲ್ಲರ

ಜ್ಞಾನಚಕ್ಷುಸುಗಳ ಮುಂದೆ ಗುರುಗಳ ಪ್ರತಿಬಿಂಬವು ಎದ್ದು ಕಾಣುತ್ತಿತ್ತು.

ಅಷ್ಟು ಹೊತ್ತಿಗೆ ವರ್ತಮಾನ ತಿಳಿದ ಗ್ರಾಮವಾಸಿಗಳೆಲ್ಲರೂ ಆಶ್ರಮದ ಮುಂದೆ ಗುಂಪುಗುಂಪಾಗಿ ಬಂದು ನಿಂತರು. ಪ್ರತಿಯೊಬ್ಬರಿಗೂ ಅವರ ಇಷ್ಟದಂತೆ ಗುರುಗಳ ಅಂತ್ಯದರ್ಶನವನ್ನು ಪಡೆಯಲು ಅವಕಾಶ ದೊರೆಯಿತು. ಕೆಲವರು ಮುಂದಿನ ಕಾರ್ಯಗಳಿಗೆ ಆಗಬೇಕಾಗಿದ್ದ ಏರ್ಪಾಟುಗಳನ್ನು ಮಾಡಲುಪಕ್ರಮಿಸಿದರು.

ಅತ್ತ ಬೆಂಗಳೂರಿಗೆ ಹೋದ ಬಾಲಕರು ರಾಮಸ್ವಾಮಿಯ ಮನೆಗೆ ಹೋಗಿ ಕೈ ಬರಹದ ಪುಸ್ತಕವನ್ನೂ ಮರಿಗೌಡನು ಬರೆದಿದ್ದ ಕಾಗದವನ್ನೂ ಅವರ ಕೈಲಿಕೊಟ್ಟು ಪುನಃ ಹಿಂದಕ್ಕೆ ಹೊರಡಲು ಅಪ್ಪಣೆಯನ್ನು ಬೇಡಿದರು. ರಾಮಸ್ವಾಮಿಯವರು ಆಗತಾನೆ ತಮ್ಮ ಉಪಾಹಾರವನ್ನು ಮುಗಿಸಿದ್ದರು. ಹೆಂಡತಿಯನ್ನು ಕೂಗಿ ದಣಿದು ಬಂದಿರುವ ಆ ಹುಡುಗರ ಮತ್ತು ಮೋಟಾರ್ ಡ್ರೈವರಿನ ಉಪಾಹಾರಕ್ಕೆ ಜಾಗ್ರತೆ ಅಣಿಮಾಡುವಂತೆ ತಿಳಿಸಿ ಬಾಲಕರಿಗೆ ಕೈ ಕಾಲು ಮುಖಗಳನ್ನು ತೊಳೆದುಕೊಳ್ಳುವಂತೆ ಹೇಳಿ ಕಳುಹಿಸಿ, ಮರಿಗೌಡನ ಕಾಗದವನ್ನು ಓದಿದರು. ಅದರಲ್ಲಿ ಗುರುಗಳ ಆಜ್ಞೆ ಮತ್ತು ಅವರ ದೇಹಸ್ಥಿತಿ ವಿನಹ ಮತ್ತೇನೂ ಬರೆದಿರಲಿಲ್ಲ. ಕೈ ಬರಹದ ಪುಸ್ತಕವನ್ನು ತೆಗೆದುನೋಡಿದರು. ಅಕ್ಷರಗಳು ಮುತ್ತಿನಮಣಿಯಂತಿದ್ದುವು. ಪುಸ್ತಕವು ಬಹಳ ಚಿಕ್ಕದಾಗಿಯೇ ಇತ್ತು. ಸ್ವಲ್ಪ ಹೊತ್ತಿನೊಳಗಾಗಿಯೇ ಓದಬಹುದೆಂದು ಯೋಚಿಸಿ ಓದಲುಪಕ್ರಮಿಸಿದರು. ಅದರಲ್ಲಿ ಹೀಗೆ ಬರೆದಿತ್ತು :—

“ ನನ್ನ ಜನ್ಮಸ್ಥಳ ಮಾಗಡಿ ತಾಲ್ಲೂಕಿನಲ್ಲಿ ಅಗ್ರಹಾರವೆಂಬ ಹಳ್ಳಿ. ಹಿಂದಿನ ನಾಲ್ಕು ತಲೆಗಳಿಂದಲೂ ನಮ್ಮ ವಂಶೀಯರು ಮಾಗಡಿ ದೊರೆಗಳ ಆಶ್ರಯದಲ್ಲಿ ವೈದಿಕ ವೃತ್ತಿಯಿಂದ ಚೆನ್ನಾಗಿ ಬಾಳಿ ಬದುಕಿದವರು. ನಮ್ಮ ತಂದೆಯು ಕಾರಣಾಂತರದಿಂದ ತಮ್ಮ ಮಧ್ಯ ವಯಸ್ಸಿನಲ್ಲಿಯೇ ಬೆಂಗಳೂರನ್ನು ಸೇರಿದರು. ಅದುವರೆಗೆ ನಮ್ಮ ತಾಯಿ ತೀರಿಹೋಗಿದ್ದರು. ಆಗ ನಾನಿನ್ನೂ ಹುಡುಗ.

ಬೆಂಗಳೂರಿನಲ್ಲಿ ನಮ್ಮ ತಂದೆಯವರು ವಂಶಪಾರಂಪರ್ಯವಾಗಿ ಬಂದ ವೈದಿಕವೃತ್ತಿಯನ್ನೇ ಅವಲಂಬಿಸಿ ಜೀವಿಸುತ್ತಿದ್ದರು. ಅವರಿಗೆ ನಾನೊಬ್ಬನೇ ಮಗನಾದುದರಿಂದಲೂ, ತಾಯಿಯಿಲ್ಲವ ಮಗುವಾದ್ದರಿಂದಲೂ, ನನ್ನನ್ನು ಬಹಳ ಆಸಕ್ತಿಯಿಂದಲೂ, ಪ್ರೀತಿಯಿಂದಲೂ ಸಾಕಿ ವಿದ್ಯಾಭ್ಯಾಸ ಮಾಡಿಸಿದರು. ನಾನು ಬಿ.ಎ. ತರಗತಿಯಲ್ಲಿ ಓದುತ್ತಿದ್ದಾಗ ನನ್ನ ವಿವಾಹದ ಏರ್ಪಾಟಾಯಿತು. ನಮ್ಮ ತಂದೆಯವರು ಕೇವಲ ಪ್ರಾಚೀನ ಸಂಪ್ರದಾಯದವರಾದರೂ, ನನ್ನ ವಿವಾಹದ ವಿಚಾರದಲ್ಲಿ ನನಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿದ್ದರು.

ನನಗೆ ಒಪ್ಪಿಗೆಯಾದ ಹುಡುಗಿಯನ್ನೇ ಮದುವೆಯಾದೆ. ಹುಡುಗಿಯು ಸಂಪನ್ನಳಾದರೂ ಅವಳ ತೌರುಮನೆಯವರು ಬಹಳ ನೀಚ ಸ್ವಭಾವದವರು. ಮಗಳ ಕಷ್ಟಸುಖಗಳ ವಿಚಾರದಲ್ಲಿ ಅವರ ಹೃದಯವು ಪಾಷಾಣವಾಗಿತ್ತು. ಇದನ್ನು ನೋಡಿ ಅವರ ಸಂಪರ್ಕವೇ ಯೋಗ್ಯವಲ್ಲವೆಂದು ಅವರನ್ನು ಮರೆತೆ.

ಅದುವರೆಗೂ ಮುತ್ತೈದೆಯರೇ ಇಲ್ಲದೆ ಕಾಂತಿಹೀನವಾಗಿದ್ದ ಮನೆಯಲ್ಲಿ ತನ್ನ ಏಕಮಾತ್ರ ಪುತ್ರನ ಪ್ರಿಯ ಗೃಹಿಣಿಯಾಗಿ ಬಂದ ಸೊಸೆಯನ್ನು ತನ್ನ ಮನೆಯ ಸೌಭಾಗ್ಯ ಲಕ್ಷ್ಮಿಯೆಂದು ಭಾವಿಸಿ ನಾವಿಬ್ಬರೂ ಮಕ್ಕಳಂತೆ ಆಡುವುದನ್ನು ನೋಡಿ ನೋಡಿ ನಮ್ಮ ತಂದೆಯವರು ಹಿಗ್ಗುತ್ತಿದ್ದರು. ಗೃಹಸ್ಥಾಶ್ರಮವು ಹೀಗೆಯೇ ಇರುವುದಾದರೆ ಇದಕ್ಕಿಂತಲೂ ಹೆಚ್ಚು ಸುಖದಾಯಕವಾದ ಬೇರೊಂದು ಸ್ವರ್ಗವೇ ಇಲ್ಲವೆಂದು ನಾನು ಭಾವಿಸಿದ್ದೆ. ಗರ್ಭಿಣಿಯಾಗಿದ್ದ ಸೊಸೆಯನ್ನು ನೋಡಿ ವಂಶಾಭಿವೃದ್ಧಿಗೆ ಕಾರಣನಾದ ಸುಕುಮಾರನು ಜನಿಸಲೆಂದು ನಮ್ಮ ತಂದೆಯು ಯಾವ ಯಾವ ದೇವರನ್ನು ಎಷ್ಟೆಷ್ಟು ಪ್ರಾರ್ಥಿಸಿದ್ದರೋ ಕಾಣೆ. ಆದರೂ ಅವರ ಆಶಯವನ್ನು ಈಡೇರಿಸಲು ವಿಧಿಗೆ ಮನಬಂದಂತೆ ತೋರಲಿಲ್ಲ. ಸೊಸೆಯು ಮೂರು ತಿಂಗಳು ಗರ್ಭಿಣಿಯಾಗಿರುವಾಗಲೇ ನನ್ನ ಇಹಲೋಕದ ದೇವರಂತಿದ್ದ ತಂದೆಯು ನನ್ನನ್ನು ಅನಾಥನನ್ನಾಗಿ ಮಾಡಿ ಪರಂಧಾಮವನ್ನೈದಿದರು.

ಅಲ್ಲಿಂದ ಮೂರು ತಿಂಗಳಿಗೆ ಬಿ.ಎ. ಪರೀಕ್ಷೆಯೂ ಆಯಿತು. ಮನೋವ್ಯಾಕುಲದಲ್ಲಿ ಮುಳುಗಿದ್ದ ನಾನು ಅರೆ ಮನಸ್ಸಿನಿಂದ ಪರೀಕ್ಷೆಗೆ ಕುಳಿತೆ. ಎರಡು ತಿಂಗಳಾದ ಮೇಲೆ ಅದರ ಫಲಿತಾಂಶವೂ ಬಂತು. ನಾನು ಮೊದಲೇ ಯೋಚಿಸಿದ್ದಂತೆ ಭಗ್ನ ಮನೋರಥನಾದೆ. ಅದುವರೆಗೆ ಸಂಸಾರದ ಸುಖಗಳು ಮಾತ್ರವಲ್ಲದೆ ಕಷ್ಟಗಳೂ ಸ್ವಲ್ಪಸ್ವಲ್ಪ ಅನುಭವಕ್ಕೆ ಬಂದಿದ್ದುವು. ಉದ್ಯೋಗವಿಲ್ಲದೆ ಸುಮ್ಮನೆ ಕಾಲಹರಣ ಮಾಡುವುದು ಪುರುಷ ಲಕ್ಷಣವಲ್ಲವೆಂದೂ, ಅದರಿಂದ ಸಂಸಾರಚಕ್ರವು ತಿರುಗುವುದು ಕಷ್ಟವೆಂದೂ ಯೋಚಿಸಿ ಹೆಚ್ಚು ಸೇವಾವೃತ್ತಿಗೆ ಅವಕಾಶವಿಲ್ಲದ ಉಪಾಧ್ಯಾಯವೃತ್ತಿಯನ್ನವಲಂಬಿಸಬೇಕೆಂದು ಯೋಚಿಸಿ ನಮ್ಮ ತಂದೆಯ ವಿಚಾರದಲ್ಲಿ ಅಭಿಮಾನಶಾಲಿಗಳಾದ ಅಧಿಕಾರಿಗಳೊಬ್ಬರಿಂದ ಬೆಂಗಳೂರಿಗೆ ಸಮೀಪವಾದ ಊರೊಂದರಲ್ಲಿ ಉಪಾಧ್ಯಾಯನಾಗಿ ನಿಯಮಿಸಲ್ಪಟ್ಟು ಕೆಲಸಮಾಡುತ್ತಿದ್ದೆ.

ಮನುಷ್ಯನಿಗೆ ಕಷ್ಟಗಳು ಒಂದೊಂದಾಗಿ ಬರದೆ ಗುಂಪು ಗುಂಪಾಗಿ ಬರುವುವೆಂದು ಪ್ರಾಜ್ಞರು ಹೇಳಿರುವರು. ಆ ಸೂಕ್ತಿ ವಚನಕ್ಕೆ ಪಾಮರನಾದ ನಾನೂ ಉದಾಹರಣೆಯಾದೆ. ಹೊರಗಡೆ ಕಾರ್ಯತತ್ಪರತೆಯಿಂದಲೂ ಮನೆಯಲ್ಲಿ ನನ್ನ ಮನವನ್ನರಿತು ವರ್ತಿಸುತ್ತಿದ್ದ ಹೆಂಡತಿಯ ಯೋಗ್ಯ ಸಹವಾಸದಿಂದಲೂ ಪಿತೃವಿಯೋಗದ ದುಃಖವನ್ನೂ ನಿಷ್ಕರುಣಿಯಾದ ಮಾವನ ದುಸ್ವಭಾವವನ್ನೂ ಮರೆಯಲು ಎಷ್ಟೋ ಪ್ರಯತ್ನಿಸುತ್ತಿದ್ದೆ. ಆದರೂ ಒಂದೊಂದು ತಡವೆ ನನ್ನ ಪರಿಸ್ಥಿತಿಯನ್ನು ಜ್ಞಾಪಿಸಿಕೊಂಡು ತಬ್ಬಲಿ ಮಗುವಿನಂತೆ ದಿಕ್ಕು ತೋರದೆ ಒಬ್ಬನೇ ಕುಳಿತು ರೋದಿಸುತ್ತಿದ್ದೆ.

ಹೀಗಿರುವಾಗ ಒಂದುದಿನ ನವಮಾಸ ತುಂಬಿದ ನನ್ನ ಹೆಂಡತಿಗೆ ಪ್ರಸವ ವೇದನೆಯುಂಟಾಯಿತು. ಕೂಡಲೆ ಅವಳನ್ನು ಬೆಂಗಳೂರಿನ ಹೆರಿಗೆ ಆಸ್ಪತ್ರೆಗೆ ಕೊಂಡೊಯ್ದು ನನ್ನ ಕಷ್ಟಸ್ಥಿತಿಯನ್ನು ಡಾಕ್ಟರಿಗೆ ತಿಳಿಸಿದೆ. ಹೆರಿಗೆ ಆಗುವವರೆಗೂ ಅಲ್ಲಿಯೇ ಇರಲೆಂದು ನನ್ನ ಹೆಂಡತಿಯನ್ನು ಇರಿಸಿಕೊಂಡರು. ಮರುದಿನವೇ ನನ್ನ ಹೆಂಡತಿಯು ಗಂಡು ಮಗುವನ್ನು ಪ್ರಸವಿಸಿದಳು. ಆಗ, ನನ್ನ ತಂದೆಯವರ ಜ್ಞಾಪಕ ಬಂತು. ಫಲವೇನು?

ಹೆರಿಗೆಯಾದ ನಾಲ್ಕೈದು ದಿವಸಗಳ ವರೆಗೂ ಬಾಣಂತಿಯ ದೇಹ ಸ್ಥಿತಿಯು ಸೂಕ್ಷ್ಮವಾಗಿಯೇ ಇತ್ತು. ಆಕೆಯ ಕ್ಷೇಮಚಿಂತನೆಗಾಗಿ ಹದಿನೈದು ದಿವಸಗಳ ರಜವನ್ನು ತೆಗೆದುಕೊಂಡಿದ್ದೆ. ಅಷ್ಟರೊಳಗಾಗಿಯೇ ನನ್ನ ದುರದೃಷ್ಟಕ್ಕೆ ಸರಿಯಾಗಿ ನನಗೆ ಉದ್ಯೋಗವನ್ನು ಕೊಟ್ಟಿದ್ದ ಅಧಿಕಾರಿಗಳಿಗೆ ವರ್ಗವಾಯಿತು. ರಜ ಮುಗಿದೊಡನೆಯೇ ಕೆಲಸದ ಮೇಲೆ ಹಾಜರಾಗಬೇಕೆಂದೂ ಆ ದಿನ ಆ ಮಾರ್ಗವಾಗಿ ಬರಲಿರುವ ಹೊಸ ಸಾಹೇಬರನ್ನು ರೈಲ್ವೆ ಸ್ಟೇಷನ್ನಲ್ಲಿ ಕಾಣಬೇಕೆಂದೂ ಕಾಗದ ಬಂತು. ಅದರಂತೆ ಹೋಗಿ ಕಾದು ಸಾಹೇಬರನ್ನು ಕಂಡೆ. ಮಧ್ಯಾಹ್ನ ಎರಡು ಘಂಟೆಯಾಗಿತ್ತು. ಸಾಹೇಬರು ಮೊದಲು ಸೌಮ್ಯವಾಗಿ ಮಾತನಾಡಿದರು. ಪಕ್ಕದ ಗಾಡಿಯಲ್ಲೇ ಕುಳಿತಿದ್ದ ಅವರ ಗುಮಾಸ್ತೆ ರಾಮಣ್ಣನವರು ನನ್ನನ್ನು ಕೈಸನ್ನೆ ಮಾಡಿ ಕರೆದು, "ಈ ಊರಲ್ಲಿ ಎಳನೀರು ಸಿಕ್ಕುವುದಿಲ್ಲವೆ?" ಎಂದರು, "ಸಿಕ್ಕುತ್ತೆ" ಎಂದೆ. 'ದೇವಸ್ಥಾನಕ್ಕೂ, ಮಕ್ಕಳಿರುವ ಮನೆಗೂ, ದೊಡ್ಡವರ ದರ್ಶನಕ್ಕೂ ಹೀಗೆ ಬರಿ ಕೈಲಿ ಬರುವುದೆ?' ಎಂದರು. "ನನಗಿರುವ ಕಷ್ಟಸ್ಥಿತಿಯಲ್ಲಿ ಇದು ನೆನಪಾಗಲಿಲ್ಲ" ಎಂದೆ. "ನಿಮ್ಮೂರಿನ ಸ್ಕೂಲ್ ಇನ್ಸ್ಪೆಕ್ಟರ್ ಕಾಳಿಂಗಪ್ಪನವರು ಊರಲ್ಲಿಲ್ಲವೆ?" ಎಂದರು. "ಸ್ವಾಮಿ, ಅವರ ತಾಯಿಗೆ ವಿಪರೀತ ಖಾಯಿಲೆ ಎಂದು ತಂತಿ ವರ್ತಮಾನ ಬಂದಿತ್ತು. ಆದರೂ ಸಾಹೇಬರ ಆಗಮನವನ್ನು ನಿರೀಕ್ಷಿಸುತ್ತಾ ಇಲ್ಲಿಯೇ ಕಾದಿದ್ದರು. ಆದರೆ ತಾಯಿಯನ್ನು ನೋಡಲು ಹೋಗುವಂತೆ ಅವರಿವರು ಹೇಳಿದ ಮೇಲೆ ಹೊರಟು ಹೋದರು." ಎಂದೆ. ಗುಮಾಸ್ತರು "ಅವರಿರಬೇಕಾಗಿತ್ತು..........." ಎಂದರು. ಅಷ್ಟರಲ್ಲಿ ಗಾಡಿ ಹೊರಡಲು ಘಂಟಾನಾದವಾಯಿತು. ಸಾಹೇಬರು ಕುಳಿತಿದ್ದ ಗಾಡಿಯಹತ್ತಿರ ಬಂದು ನಮಸ್ಕಾರ ಮಾಡಿದೆ. ಪಕ್ಕದಲ್ಲಿ ಕುಳಿತಿದ್ದವರೊಡನೆ ಮಾತನಾಡುತ್ತಿದ್ದ ಸಾಹೇಬರು ನನ್ನ ಕಡೆ ತಿರುಗಲೇ ಇಲ್ಲ. ಗಾಡಿ ಹೊರಟಿತು. ಅಲ್ಲಿಂದ ಎಂಟು ದಿನಗಳೊಳಗಾಗಿ ನನ್ನನ್ನು ಮಲೆನಾಡು ಪ್ರದೇಶಕ್ಕೆ ವರ್ಗ ಮಾಡಿರುವುದಾಗಿ ಪತ್ರ ಬಂತು. ಸಾಹೇಬರ ಮನೆಗೆ ಹೋಗಿ ಅವರ

ಎದುರಿನಲ್ಲಿ ನನ್ನ ಸ್ಥಿತಿಯನ್ನು ವಿಜ್ಞಾಪಿಸಿಕೊಂಡೆ. ಅದು ಅವರಿಗೆ ಹೇಗೆ ತಿಳಿಯಬೇಕು? ಪರಸ್ಥಳದವರು. ಅಲ್ಲದೆ ಕಷ್ಟಸುಖಗಳ ಅನುಭವವಾಗುವುದಕ್ಕೆ ಮುಂಚೆಯೇ ಅದೃಷ್ಟವಶಾತ್ ಉತ್ತಮ ಪದವಿಗೇರಿದವರು. ರಾಮಣ್ಣನವರಲ್ಲಿಯೂ ಹೇಳಿಕೊಂಡೆ.' ಅವರು "ನೀವು ರೈಲ್ವೆಸ್ಟೇಷನ್ ಇರುವ ಸ್ಥಳದಲ್ಲಿಯೂ ಮೋಟಾರ್‌ಕಾರ್ ಬಸ್ ಓಡಾಡುವ ಸ್ಥಳದಲ್ಲಿಯೂ ಇರುವುದಕ್ಕೆ ಅರ್ಹರಲ್ಲ." ಎಂದರು. ನನ್ನ ವಿಜ್ಞಾಪನೆಯು ವಿಫಲವಾಯಿತು.

ಮುಂದೇನು ಮಾಡಬೇಕೆಂಬುದನ್ನು ತಿಳಿಯದೆ ಅವರ ಮನೆಯಿಂದ ಹೊರಟು ಆಸ್ಪತ್ರೆಗೆ ಹೋಗುತ್ತಿದ್ದೆ. ನಡುದಾರಿಯಲ್ಲಿ ಯಾರೋ ನನ್ನನ್ನು ಕೂಗಿದ ಹಾಗಾಯಿತು. ತಲೆ ಎತ್ತಿ ನೋಡಿದೆ. ಕೂಗಿದವರು ನನ್ನ ಆಪ್ತ ಸ್ನೇಹಿತರಾದ ಚಿದಂಬರ ಶಾಸ್ತ್ರಿಗಳು. ಅವರೂ ನನ್ನ ಜೊತೆಯಲ್ಲಿಯೇ ಆಸ್ಪತ್ರೆಗೆ ಬಂದರು. ಆಸ್ಪತ್ರೆಯಲ್ಲಿ ನನ್ನ ಹೆಂಡತಿಯು ಮಲಗಿದ್ದ ಕೊಠಡಿಯೊಳಕ್ಕೆ ಪ್ರವೇಶಿಸಲು ಆತುರದಿಂದ ಬಾಗಿಲಿಗೆ ಹೋದೆ. ಅಲ್ಲಿ ನಿಂತಿದ್ದ ಕಾವಲಿನ ಹೆಂಗಸು ನಮ್ಮನ್ನು ತಡೆದು "ಸ್ವಲ್ಪ ಹೊರಗಡೆಯೇ ಇರಿ" ಎಂದಳು. ಅಷ್ಟರಲ್ಲಿಯೇ ಹೆಂಗಸು ಡಾಕ್ಟರೊಬ್ಬರು ಹೊರಗೆ ಬಂದು ನಮ್ಮನ್ನು ಬೇರೊಂದು ಕೊಠಡಿಗೆ ಕರೆದುಕೊಂಡುಹೋಗಿ "ನೀವು ಇಲ್ಲಿಯೇ ಸ್ವಲ್ಪ ಹೊತ್ತು ಇರಿ. ಬಾಣಂತಿಯ ದೇಹಸ್ಥಿತಿಯು ಬಹಳ ಸೂಕ್ಷ್ಮವಾಗಿದೆ. ಅವರ ಕ್ಷೇಮಕ್ಕಾಗಿ ನಾವೂ ನಮ್ಮ ಕೈಲಾದಷ್ಟು ಪ್ರಯತ್ನ ಮಾಡುತ್ತಿದ್ದೇವೆ" ಎಂದರು. ನಾನು ಆತುರದಿಂದ "ಪ್ರಾಣಭಯವೇನೂ ಇಲ್ಲವಷ್ಟೆ?" ಎಂದೆ. ಅದಕ್ಕವರು "ನಾವು ದೇವರ ಮೇಲೆ ಭಾರವನ್ನು ಹಾಕಿ ಉಪಚರಿಸುತ್ತಿದ್ದೇವೆ. ನೀವು ಇನ್ನೂ ಸ್ವಲ್ಪ ಹೊತ್ತು ಇರಿ" ಎಂದು ಹೇಳಿ ಹೊರಟು ಹೋದರು.

ಇಷ್ಟನ್ನು ಕೇಳಿದ ಕೂಡಲೆ ನನ್ನ ಮನಸ್ಸಿನಲ್ಲಿ ವಿಧವಿಧವಾದ ಆಲೋಚನೆಗಳು ತಲೆದೋರಿದುವು. ಪುನಃ ಡಾಕ್ಟರು ಬರುವುದನ್ನೇ ಎದುರು ನೋಡುತ್ತಾ ಕುಳಿತೆ. ಒಂದೊಂದು ನಿಮಿಷವೂ ಒಂದೊಂದು ಘಂಟೆಯಾಗಿ ಪರಿಣಮಿಸಿತು. ಸ್ವಲ್ಪಹೊತ್ತಿನೊಳಗಾಗಿ ಆ ಡಾಕ್ಟರು ನಾವಿದ್ದ

ಸ್ಥಳಕ್ಕೆ ಬಂದು ಕನಿಕರ ದೃಷ್ಟಿಯಿಂದಲೂ ಪಶ್ಚಾತ್ತಾಪಸೂಚಕವಾದ ಮೃದು ಸ್ವರದಿಂದಲೂ "ಅಪ್ಪಾ, ನಿಮ್ಮ ಅದೃಷ್ಟವು ಬಹಳ ಕೆಟ್ಟದ್ದು. ನಮ್ಮ ಸರ್ವ ಪ್ರಯತ್ನಗಳೂ ವಿಫಲವಾದವು." ಎಂದರು. ಅಷ್ಟನ್ನು ಕೇಳಿದ ಕೂಡಲೇ ನನಗೆ ಸಿಡಿಲು ಬಡಿದಂತಾಯಿತು. ಒಂದೇ ರಭಸದಲ್ಲಿ ಬಾಣಂತಿಯಿದ್ದ ಕೊಠಡಿಯೊಳಕ್ಕೆ ನುಗ್ಗಿ ಹೋಗಿ ಮಂಚದ ಬಳಿಯಲ್ಲಿ ನಿಂತು ನೋಡಿದೆ. ಮಂಚದ ಮೇಲೆ ಮಲಗಿದ್ದ ಬಾಣಂತಿಯ ಮುಖದ ಮೇಲೆ ಬಟ್ಟೆಯನ್ನು ಹೊದಿಸಿದ್ದರು. ಮಂಚದ ಪಕ್ಕದಲ್ಲಿ ತೊಟ್ಟಿಲಿನೊಳಗೆ ಮಗುವು ಅಳುತ್ತಿತ್ತು. ಬಾಣಂತಿಯ ಮುಖದ ಮೇಲೆ ಹೊದಿಸಿದ್ದ ಬಟ್ಟೆಯನ್ನು ತೆಗೆದು ಮುಖವನ್ನು ನೋಡಿದೆ. ಕಣ್ಣುಗಳು ಮುಚ್ಚಿಹೋಗಿದ್ದವು. ಅದನ್ನು ಕಂಡೊಡನೆಯೇ 'ಹಾ! ರತ್ನಾ' ಎಂದು ಒಮ್ಮೆಲೇ ಮಂಚದ ಮೇಲೆ ಬಿದ್ದುಬಿಟ್ಟೆ.

ಎಷ್ಟು ಹೊತ್ತು ನಾನು ಆ ಶೂನ್ಯಾವಸ್ಥೆಯಲ್ಲಿದ್ದೆನೋ ಕಾಣೆ. ಕಣ್ದೆರೆದು ನೋಡಿದಾಗ ನನ್ನ ಜೊತೆಯಲ್ಲಿ ಬಂದಿದ್ದ ಮಿತ್ರನ ಮನೆಯಲ್ಲಿ ಮಲಗಿದ್ದೆ. ಸುತ್ತಲೂ ಆ ನನ್ನ ಸ್ನೇಹಿತನೂ, ಆತನ ಪತ್ನಿಯೂ ಒಬ್ಬಿಬ್ಬರು ನಮ್ಮ ತಂದೆಯ ಪರಿಚಯಸ್ಥರೂ ನಿಂತು ಏನೇನೋ ಹೇಳುತ್ತಿದ್ದರು. ಅದೊಂದೂ ನನಗೆ ತಿಳಿಯದು. ಸ್ವಲ್ಪ ಹೊತ್ತಿನ ಮೇಲೆ ಜ್ಞಾನೋದಯವಾದಂತಾಗಿ ಮನಸ್ಸಿಗೆ ಧೈರ್ಯವನ್ನು ತಂದುಕೊಂಡೆ. ಮತ್ತೊಮ್ಮೆ ಸುತ್ತಲೂ ನೋಡಿದೆ. ಎಲ್ಲವೂ ಶೂನ್ಯವಾಗಿ ಕಾಣುತ್ತಿತ್ತು. ಎದೆಯು ಕಲ್ಲಾಯಿತು. ಮನಸ್ಸಿನ ವ್ಯಾಮೋಹವು ಮಾಯವಾಯಿತು. ಸುತ್ತಲೂ ನಿಂತಿದ್ದವರಾರೆಂಬುದು ಮರೆತು ಹೋಯಿತು. ಅವರಕಡೆ ನೋಡಿ ನನ್ನಿಂದ ಏನಾಗಬೇಕೆಂದು ಕೇಳಿದೆ. ಅವರು ತಮ್ಮ ಜೊತೆಯಲ್ಲಿ ಬರಬೇಕೆಂದು ಹೇಳಿದರು. ಮರುಮಾತಾಡದೆ ಅವರ ಜೊತೆಯಲ್ಲಿ ಆಸ್ಪತ್ರೆಗೆ ಹೋದೆ. ಶವವನ್ನು ದಹನ ಭೂಮಿಗೆ ಒಯ್ಯಲು ಎಲ್ಲವೂ ಸಿದ್ಧವಾಗಿತ್ತು. ನನ್ನ ಹೆಂಡತಿಯನ್ನು ಉಪಚರಿಸುತ್ತಿದ್ದ ಡಾಕ್ಟರು ಬಂದು ನನ್ನ ಕಿವಿಯಲ್ಲಿ ಏನೇನೋ ಹೇಳಿದರು. ಯಾವುದೋ ಆಲೋಚನೆಯ ಭರದಲ್ಲಿದ್ದ ನನಗೆ

ಅದೊಂದೂ ತಿಳಿಯಲಿಲ್ಲ. "...... ಮಗು........ಸಾಕುತ್ತೇವೆ ....." ಎಂಬ ಒಂದೆರಡು ಮಾತುಗಳು ಮಾತ್ರ ಕೇಳಿದಂತೆ ಜ್ಞಾಪಕ. ನನ್ನ ಜೊತೆಯಲ್ಲಿ ಬಂದಿದ್ದವರು ಶವವನ್ನು ಹೊತ್ತುಕೊಂಡು ಹೊರಟರು. ಅವರ ಹಿಂದೆ ನಾನು ಒಂದು ಮಗುವಿನಂತೆ ಹೋದೆ. ಸ್ಮಶಾನದಲ್ಲಿ ನಡೆಯಬೇಕಾದ ಕಾರ್ಯಗಳೆಲ್ಲವೂ ಮುಗಿದುವು.

ಮನೆಗೆ ಬರುವ ಹೊತ್ತಿಗೆ ಸಾಯಂಕಾಲವಾಗಿತ್ತು. ಸ್ನಾನ ಮಾಡೆಂದು ನನ್ನ ಸ್ನೇಹಿತರು ಹೇಳಿದರು. ನಾನು ಸ್ವಲ್ಪ ಮಲಗಬೇಕೆಂದು ಹೇಳಿದೆ. ಅವರ ಇಷ್ಟದಂತೆ ಸ್ನಾನಮಾಡಿ ಮಲಗಿದೆ. ಒಂದರ ಮೇಲೊಂದು ಸ್ವಪ್ನಗಳು ಬಂದುವು.—ನಾನು ನಮ್ಮ ಮನೆಯ ಒಂದು ಕೊಠಡಿಯಲ್ಲಿ ಓದುತ್ತಾ ಕುಳಿತಿದ್ದ ಹಾಗೂ, ಆ ನನ್ನ ಪ್ರೇಮಜ್ಯೋತಿಯು ಸಣ್ಣದೊಂದು ಬೆಳ್ಳಿಯ ತಟ್ಟೆಯಲ್ಲಿ ತಿಂಡಿಯನ್ನು ತಂದು ಮೇಜಿನ ಮೇಲಿಟ್ಟು ಮುಗುಳ್ನಗೆಯನ್ನು ಬೀರುತ್ತಾ ಪಕ್ಕದಲ್ಲಿ ನಿಂತಿರುವಂತೆಯೂ ಕಂಡಿತು. ಕಣ್ದೆರೆದು ನೋಡಿದೆ. ಯಾರೂ ಇರಲಿಲ್ಲ. ತಲೆಯ ಕಡೆ ದೀಪವು ಮಾತ್ರ ಸಣ್ಣಗೆ ಮಿನುಗುತ್ತಿತ್ತು. ನಾನು ಎದ್ದ ಸುಳಿವನ್ನು ತಿಳಿದ ನನ್ನ ಸ್ನೇಹಿತರು ಒಳಗೆ ಬಂದು ಊಟ ಮಾಡೆಂದರು. ನನಗೆ ಹಸಿವಿರಲಿಲ್ಲ. ಇನ್ನೂ ಸ್ವಲ್ಪ ಹೊತ್ತು ಮಲಗಬೇಕೆಂದೆ. ನನ್ನನ್ನು ಊಟಕ್ಕೆ ಹೆಚ್ಚು ಬಲಾತ್ಕರಿಸದೆ ಹೊರಟು ಹೋದರು. ಪುನಃ ಮಲಗಿದೆ. ಸ್ವಲ್ಪ ಹೊತ್ತು ನಿದ್ದೆ ಹತ್ತಲಿಲ್ಲ. ಜಾಗ್ರತಾವಸ್ಥೆಯಲ್ಲಿ ಕೂಡ ಪ್ರೇಮ ತರಂಗಗಳಲ್ಲಿ ತೇಲಾಡುತ್ತಿದ್ದಂತೆ ಕಂಡಿತು. ಸ್ವಲ್ಪ ಹೊತ್ತಿನಮೇಲೆ ನಿದ್ದೆ ಬಂತು. ಕಣ್ಮುಚ್ಚಿದೆ. ಕೂಡಲೆ, ನಾನು ಎಲ್ಲಿಯೋ ನನ್ನ ಬಂಧು ಮಿತ್ರರೊಡನೆ ಪ್ರಯಾಣ ಮಾಡುತ್ತಿದ್ದ ಹಾಗೂ ಮಧ್ಯಮಾರ್ಗದಲ್ಲಿ ನಾವೆಲ್ಲರೂ ಒಂದು ಛತ್ರದಲ್ಲಿ ತಂಗಿದ ಹಾಗೂ ಪುನಃ ಪ್ರಯಾಣ ಹೊರಟಾಗ ಕಾರಣಾಂತರದಿಂದ ನಾನು ಮತ್ತು ನನ್ನ ರತ್ನ ಇಬ್ಬರೂ ಸ್ವಲ್ಪ ಹಿಂದುಳಿದ ಹಾಗೂ, ಪುನಃ ಅವರನ್ನು ಹಿಂಬಾಲಿಸಿ ಹೊರಟ ಹಾಗೂ, ಮಧ್ಯದಲ್ಲಿ, ತುಂಬಿ ಹರಿಯುತ್ತಿದ್ದ ಸಣ್ಣದೊಂದು ಹೊಳೆಯನ್ನು ಹರಿಗೋಲಿನಲ್ಲಿ ದಾಟುತ್ತಿದ್ದ ಹಾಗೂ, ಹೊಳೆಯ ಮಧ್ಯಕ್ಕೆ

ಹೋದಾಗ ಹರಿಗೋಲು ಮುಗುಚಿಕೊಂಡು ನಾವಿಬ್ಬರೂ ನದಿಯ ಪ್ರವಾಹದಲ್ಲಿ ಮುಳುಗಿದ ಹಾಗೂ, ಸ್ವಲ್ಪ ಹೊತ್ತಿನ ಮೇಲೆ ನದಿಯ ದಡದಲ್ಲಿದ್ದ ಅರಣ್ಯ ಮಧ್ಯದಲ್ಲಿ ನಾನೊಬ್ಬನೇ ಕುಳಿತು ಅಳುತ್ತಿದ್ದ ಹಾಗೂ, ಅಷ್ಟರಲ್ಲಿಯೇ ಸನ್ಯಾಸಿಯೊಬ್ಬನು ಬಂದು ನನ್ನನ್ನು ಸಂತೈಸಿ ಆಕಾಶದ ಕಡೆ ಕೈ ತೋರಿಸಿದ. ಹಾಗೂ, ನಾನು ಮೇಲೆ ನೋಡಿದಾಗ ಗಗನಮಂಡಲದಲ್ಲಿ ಭಸ್ಮಧಾರಣೆ ಮಾಡಿದ್ದ ತೇಜಃಪುಂಜರಾದ ಆ ನನ್ನ ತಂದೆಯು ಪದ್ಮಾಸನವನ್ನು ಹಾಕಿ ಕುಳಿತು ದೇವತಾರ್ಚನೆಯನ್ನು ಮಾಡುತ್ತಿದ್ದ ಹಾಗೂ, ನಾನು ನನ್ನ ಚಿಕ್ಕ ವಯಸ್ಸಿನಲ್ಲಿ ನೋಡಿದ್ದ ನನ್ನ ಪ್ರಿಯಮಾತೆಯೂ ಮತ್ತು ಆ ನನ್ನ ಪ್ರೇಮ ರತ್ನವೂ ಪೂಜಾಸಾಮಗ್ರಿಗಳನ್ನು ಅಣಿಮಾಡಿಕೊಡುತ್ತಿದ್ದ ಹಾಗೂ, ಅವರ ಸುತ್ತಲೂ ಪ್ರಕಾಶಮಾನವಾದ ಶೀತಲ ಕಿರಣಗಳು ಹೊರಹೊಮ್ಮುತ್ತಿದ್ದ ಹಾಗೂ ಮೂವರೂ ಒಂದು ಬಾರಿ ನನ್ನ ಕಡೆ ನೋಡಿ ಕನಿಕರದಿಂದ ಕಣ್ಣೀರು ಸುರಿಸಿದ ಹಾಗೂ, ನಾನು ಅವರ ಸಾನ್ನಿಧ್ಯವನ್ನು ಸೇರುವ ಉತ್ಸಾಹದಿಂದ ಮೇಲಕ್ಕೆ ಹಾರಲು ಹೋದ ಹಾಗೂ ಆಗಿ ಥಟ್ಟನೆ ಎದ್ದು ಕುಳಿತೆ. ಎಲ್ಲವೂ ಶಾಂತವಾಗಿತ್ತು. ಕನಸಿನಲ್ಲಿ ಕಂಡದ್ದು ಮನಸ್ಸಿನಿಂದ ಇನ್ನೂ ಸಂಪೂರ್ಣವಾಗಿ ಅಳಿಸಿ ಹೋಗಿರಲಿಲ್ಲ. ಹಾಗೆಯೇ ಸ್ವಲ್ಪಹೊತ್ತು ಯೋಚಿಸಿದೆ. ಪ್ರಪಂಚದ ನಾಟಕ ರಂಗದಲ್ಲಿ ಎರಡು ಅಂಕಗಳನ್ನು ಮುಗಿಸಿದಂತೆ ಭಾಸವಾಯಿತು. ಕಡೆಯ ಒಂದು ಅಂಕದಲ್ಲಿ ಪಾತ್ರ ವಹಿಸುವ ಕಾಲವು ಸನ್ನಿಹಿತವಾಯಿತೆಂದು ತಿಳಿದೆ. ಬಾಗಿಲ ಬಳಿ ಬಂದು ನನ್ನ ಸ್ನೇಹಿತರನ್ನು ಕೂಗಿದೆ. ಅವರು ಬಂದು ಏನು ಬೇಕೆಂದು ಕೇಳಿದರು. ನಾನು "ನಮ್ಮ ಮನೆಗೆ ಹೋಗಬೇಕು." ಎಂದೆ. ಅವರು, "ಇನ್ನೂ ಕತ್ತಲೆ. ಒಂದು ಘಂಟೆಯೊಳಗಾಗಿ ಸ್ವಲ್ಪ ಬೆಳಕಾಗುವುದು. ಆಮೇಲೆ ಹೋಗೋಣ." ಎಂದರು. ನಾನು "ಹಾಗಲ್ಲ, ಈಗಲೇ ಹೋಗಬೇಕು." ಎಂದು ಹೇಳಿದೆ. ನನ್ನ ಮನಸ್ಸಿಗೆ ಬೇಸರಿಕೆಯನ್ನುಂಟು ಮಾಡಬಾರದೆಂಬ ಭಾವನೆಯಿಂದ ಅವರು ಲಾಂದ್ರವನ್ನು ತೆಗೆದುಕೊಂಡು ನನ್ನ ಜೊತೆಯಲ್ಲಿ ಬಂದರು. ಇಬ್ಬರೂ ನಮ್ಮ ಮನೆ

ಯಲ್ಲಿ ದೇವರ ಕೋಣೆಯೊಳಕ್ಕೆ ಹೋದೆವು. ಅಲ್ಲಿದ್ದ ಪೆಟ್ಟಿಗೆಯೊಂದನ್ನು ತೆಗೆದು ಅದರೊಳಗಿದ್ದ ಗಂಟೊಂದನ್ನು ಕೈಲಿ ಹಿಡಿದು ಮುಂದಾಸನ ದೊಳಗೆ ಬಾಡಿದ ಹೂಗಳ ಮಧ್ಯದಲ್ಲಿ ಮ್ಲಾನವಾಗಿ ಕಾಣುತ್ತಿದ್ದ ದೇವರ ವಿಗ್ರಹದ ಕಡೆ ಕೈ ತೋರಿಸಿ, ನನ್ನ ಸ್ನೇಹಿತನನ್ನು ಕುರಿತು "ಇದೋ, ನನ್ನ ಮತ್ತು ನಿನ್ನ ಪವಿತ್ರ ಸ್ನೇಹಕ್ಕೆ ದೇವರೇ ಸಾಕ್ಷಿ. ನಿನಗಿಂತಲೂ ಹೆಚ್ಚಾದ ಆಪ್ತಬಂಧುವು ನನಗೆ ಬೇರೊಬ್ಬರಿಲ್ಲ. ಈಗ ನಾನು ಹೇಳು ವುದನ್ನು ಕೇಳು—ಈ ಗಂಟಿನಲ್ಲಿ ನಮ್ಮ ತಂದೆ ಸದ್ವೃತ್ತಿಯಿಂದ ಗಳಿಸಿದ ಐನೂರು ರೂಪಾಯಿಗಳೂ ಮತ್ತು ಸಣ್ಣ ಪುಟ್ಟ ಕೆಲವು ಒಡವೆಗಳೂ ಇವೆ. ಇದರಲ್ಲಿ ಇನ್ನೂರು ರೂಪಾಯಿಗಳನ್ನು ತೆಗೆದುಕೊಂಡು ನಾನು ದೇಶಾಂ ತರ ಹೊರಡುತ್ತೇನೆ. ಈ ವಿಚಾರದಲ್ಲಿ ನೀನು ನನಗೆ ಯಾವ ಸಮಾಧಾನ ವನ್ನೂ ಹೇಳಬೇಡ. ಉಳಿದ ಹಣ ಮತ್ತು ಈ ಮನೆಯಲ್ಲಿರತಕ್ಕ ಎಲ್ಲಾ ಪದಾರ್ಥಗಳನ್ನೂ ನಿನ್ನಿಷ್ಟ ಬಂದಂತೆ ಮಾಡು. ನಾನು ಬೆಳಕು ಹರಿಯು ತ್ತಲೇ ಏಳು ಘಂಟೆ ರೈಲಿನಲ್ಲಿ ಪ್ರಯಾಣ ಮಾಡುತ್ತೇನೆ. ಎಂದು ಹೇಳಿ ಹಣದ ಗಂಟನ್ನು ಬಿಚ್ಚಿ ಇನ್ನೂರು ರೂಪಾಯಿಗಳನ್ನು ತೆಗೆದುಕೊಂಡು ಉಳಿದುದನ್ನು ನನ್ನ ಸ್ನೇಹಿತನ ಕೈಲಿ ಕೊಟ್ಟು ದೇವರಿಗೆ ಒಂದು ಬಾರಿ ನಮಸ್ಕರಿಸಿ ಹೊರಗೆ ಬಂದೆ.

ನನ್ನ ನಿರ್ಧಾರವನ್ನರಿತ ನನ್ನ ಸ್ನೇಹಿತನು ನನ್ನನ್ನು ತಡೆಯಲು ಯಾವ ಮಾತನ್ನೂ ಆಡದಿದ್ದರೂ ಒಂದಾವರ್ತಿ ತನ್ನ ಮನೆಯನ್ನು ಹೊಕ್ಕು ಅನಂತರ ರೈಲ್ವೆ ಸ್ಟೇಷನ್ನಿಗೆ ಹೋಗೋಣವೆಂದರು. ಮನೆಗೆ ಬೀಗ ವನ್ನು ಹಾಕಿ ಬೀಗದ ಕೈಯನ್ನು ಅವರ ಕೈಲಿ ಕೊಟ್ಟು ಇಬ್ಬರೂ ಅವರ ಮನೆಗೆ ಹೋದೆವು. ನಡುಮನೆಗೆ ಹೋಗಿ ಅಲ್ಲಿ "ಈಗ ನನ್ನಿಂದೇನಾಗ ಬೇಕು ?" ಎಂದೆ. ಅವರು ನನ್ನನ್ನು ಒಂದು ಪಕ್ಕಕ್ಕೆ ಕರೆದುಕೊಂಡು ಹೋಗಿ ಒಂದು ತೊಟ್ಟಿಲಿನ ಬಳಿ ನಿಲ್ಲಿಸಿ, ಕೈಲಿದ್ದ ಲಾಂದ್ರವನ್ನು ಹಿಡಿದು "ನೋಡು" ಎಂದರು. ಬೊಂಬೆಯಂತಿದ್ದ ಎಳೆಗೂಸು ಸುಖವಾಗಿ ನಿದ್ರಿಸುತ್ತಿತ್ತು. ಕ್ಷಣಕಾಲ ನೋಡಿದೆ. ನನ್ನ ಹೃದಯದಲ್ಲಿ ಸಂತೋಷವಾಗಲಿ, ವ್ಯಸನ

ವಾಗಲಿ, ವ್ಯಾಮೋಹವಾಗಲಿ ಯಾವ ಮನೋಭಾವನೆಯೂ ಉದಯಿಸ ಲಿಲ್ಲ. ಅನಂತರ ನನ್ನನ್ನೇ ನೋಡುತ್ತಿದ್ದ ನನ್ನ ಸ್ನೇಹಿತನ ಕಡೆ ತಿರುಗಿ "ನೋಡಿದ್ದಾಯಿತು. ಇನ್ನೇನಾಗಬೇಕು?" ಎಂದು ಕೇಳಿದೆ. "ಇಷ್ಟೆ. ಇನ್ನೇನೂ ಇಲ್ಲ." ಎಂದರು. ನಾನು ಹೊರಡಲು ಬಾಗಿಲಿಗೆ ಬಂದೆ. ನನ್ನ ಸ್ನೇಹಿತನ ಪತ್ನಿಯು ಏನೋ ಹೇಳಬೇಕೆಂಬ ಉತ್ಸಾಹದಿಂದ ನನ್ನನ್ನೇ ನೋಡುತ್ತಾ ನಿಂತಿದ್ದರು. ಅವರು ಮಾತನಾಡುವುದರೊಳಗಾಗಿ ನಾನೇ "ತಾಯಿ, ಹೊರಡುತ್ತೇನೆ" ಎಂದು ಹೇಳಿ ಹೊರಗೆ ಬಂದೆ.

ಇನ್ನೂ ಸ್ವಲ್ಪ ಕತ್ತಲು ಕತ್ತಲಾಗಿತ್ತು, ಹೆಚ್ಚು ಜನ ಸಂಚಾರವಿರಲಿಲ್ಲ. ಪಕ್ಷಿಗಳು ಮಾತ್ರ ಚಿಲಿಪಿಲಿಗುಟ್ಟುತ್ತಿದ್ದುವು. ಇಬ್ಬರೂ ಸ್ಟೇಷನ್ನಿಗೆ ಬಂದೆವು. ರೈಲು ಹೊರಡುವುದಕ್ಕೆ ಇನ್ನು ಕಾಲು ಘಂಟೆ ಮಾತ್ರ ಉಳಿ ದಿತ್ತು. ಗುಂತಕಲ್ಲಿಗೆ ಟಿಕೆಟ್ ತೆಗೆದುಕೊಂಡು ಬಂದೆ. ಅಷ್ಟು ಹೊತ್ತಿಗೆ ಆ ಕಡೆ ಹೊರಡುವ ಗಾಡಿಯು ಬಂದು ನಿಂತಿತು. ಗಾಡಿಯನ್ನು ಹತ್ತಿ ಒಳಗೆ ಕುಳಿತುಕೊಂಡೆ. ನನ್ನ ಸ್ನೇಹಿತನು ಹೊರಗಡೆ ಕಿಟಕಿಯಮೇಲೆ ಕೈ ಇಟ್ಟುಕೊಂಡು ನನ್ನನ್ನೇ ಸ್ವಲ್ಪ ಹೊತ್ತು ನೋಡಿದರು. ಯಾವ ಮಾತನ್ನೂ ಆಡಲಿಲ್ಲ. ರೈಲು ಹೊರಡಲು ಸಂಕೇತವಾಯಿತು. ಅವರ ಕಣ್ಣುಗಳಿಂದ ಎರಡು ತೊಟ್ಟು ನೀರು ನಿಷ್ಕಳಂಕ ಪ್ರೇಮದ ಗುರುತಾಗಿ ಕೆಳಗೆ ಬಿದ್ದುವು. ಗಾಡಿಯು ಜರುಗಿತು. ನನ್ನ ಸ್ನೇಹಿತರು ಕೈಯನ್ನು ಹಿಂದಕ್ಕೆ ತೆಗೆದುಕೊಂಡು ಗದ್ಗದ ಸ್ವರದಿಂದ "ಒಳ್ಳೆಯದು, ಹೋಗಿ ಬಾ, ಋಣಾನುಸಂಬಂಧವಿದ್ದರೆ ಪುನಃ ಒಬ್ಬರನ್ನೊಬ್ಬರು ಸಂಧಿಸೋಣ." ಎಂದರು. ಗಾಡಿಯು ರಭಸದಿಂದ ಹೊರಟಿತು.

ಬೆಂಗಳೂರನ್ನು ಬಿಟ್ಟ ನಂತರ ಸುಮಾರು ಹದಿನೈದು ವರ್ಷಕಾಲ ಆಸೇತುಹಿಮಾಚಲ ಪರ್ಯಂತ ಪ್ರವಾಸ ಮಾಡಿದೆ. ರಾಮೇಶ್ವರ, ಮಧುರೆ, ಕಂಚಿ, ಶ್ರೀರಂಗ ಮುಂತಾದ ಸ್ಥಳಗಳಲ್ಲಿ ಲಕ್ಷೋಪಲಕ್ಷ ಭಕ್ತರಿಂದ ಏಕ ಕಾಲದಲ್ಲಿ ಸೇವಿಸಲ್ಪಡುವಂಥ ವಿಶಾಲವಾದ ಮತ್ತು ಉನ್ನತ ಗೋಪುರ ಗಳಿಂದ ಕಂಗೊಳಿಸುತ್ತಿರುವ ದೇವ ಮಂದಿರಗಳನ್ನು ನೋಡಿದೆ. ಪರಮ

ಭಕ್ತನಾದ ಪಾಮರನಿಗೆ ಒಲಿದ ಶ್ರೀಕೃಷ್ಣ ಪರಮಾತ್ಮನ ಬಾಲ ಮೂರ್ತಿಯನ್ನು ಕನಕನ ಕಿಂಡಿಯಲ್ಲಿ ಕಂಡೆ. ಭಕ್ತಿಪರವಶರಾಗಿ ಮೈಮರೆತ ಭಕ್ತರೊಡನೆ ಪುಂಡರೀನಾಥನನ್ನು ಅಪ್ಪಿ ಅರ್ಚಿಸಿದೆ. ಹಿಂದೂ ಧರ್ಮದ ಸಮಸ್ತ ಕುಲಗೋತ್ರಗಳ ಸರಿಸಮಾನತೆಯನ್ನು ಲೋಕಕ್ಕೆ ತೋರಿಸುವಂತೆ ಭಕ್ತರೆಲ್ಲರ ಸ್ವಹಸ್ತದಿಂದ ಸೇವಿಸಲ್ಪಡುತ್ತಿರುವ ಕಾಶಿ ವಿಶ್ವನಾಥನನ್ನು ಅರ್ಚಿಸಿದೆ. ರತ್ನಾಕರ ಮಹೋದಧಿ ಮಹಾಸಾಗರಗಳ ಸಂಗಮದ ಧನುಷ್ಕೋಟಿಯಲ್ಲಿಯೂ, ತ್ರಿವೇಣಿ ಸಂಗಮದಲ್ಲಿಯೂ, ದೇವ ಗಂಗೆಯಲ್ಲಿಯೂ ಪುರಾಣ ಪ್ರಸಿದ್ಧವಾದ ಗಯ ಕ್ಷೇತ್ರದ ಶ್ರೀ ವಿಷ್ಣುಪಾದದಲ್ಲಿಯೂ ಪಿತೃತರ್ಪಣವನ್ನು ಸಲ್ಲಿಸಿದೆ. ಪಶ್ಚಿಮ ಘಟ್ಟಗಳಲ್ಲಿಯೂ ಹಿಮವತ್ಪರ್ವತದ ತಪ್ಪಲಿನಲ್ಲಿಯೂ ಋಷಿಗಳ ಆವಾಸಸ್ಥಾನವಾಗಿದ್ದ ರಮ್ಯವಾದ ವನಪ್ರದೇಶಗಳನ್ನು ನೋಡಿದೆ. ವಾಣಿಜ್ಯ ಕುಶಲತೆಯಿಂದಲೂ ಶ್ರಮಜೀವಿಗಳ ದುಡಿತದಿಂದಲೂ ಅತುಳೈಶ್ವರ್ಯದಲ್ಲಿ ಓಲಾಡುತ್ತಿರುವ ಬಂಡವಾಳಗಾರರ ವಿಲಾಸ ವೈಭವಗಳಿಗೆ ಆಕರವಾದ ಮಹಾ ನಗರಗಳನ್ನು ನೋಡಿದೆ. ದೆಹಲಿ, ಆಗ್ರಾ, ವಿಜಯನಗರಗಳಲ್ಲಿ ಇತಿಹಾಸ ಪ್ರಸಿದ್ಧವಾದ ಚಕ್ರಾಧೀಶ್ವರರ ಗತ ವೈಭವದ ಕುರುಹುಗಳನ್ನು ನೋಡಿದೆ.

ಎಲ್ಲವೂ ಒಂದು ಸಮಸ್ಯೆಯಾಗಿ ಕಂಡಿತು. ಆಂತರಿಕವಾದ ಶಾಂತಿಯೊಂದೇ ಪರಿಹಾರೋಪಾಯವೆಂದೂ ಅದರ ಸಾಧನೆಗೆ ಹೊರಗಿನ ಶಾಂತ ವಾತಾವರಣವು ಸಹಾಯವೆಂದೂ ಅಂಥಾ ವಾತಾವರಣವುಳ್ಳ ಪ್ರದೇಶವನ್ನು ಅರಸುತ್ತಾ ಹೊರಟೆ. ಜನ್ಮ ಭೂಮಿಯ ಮೇಲಿನ ಮಮತೆಯು ಈ ಕಡೆಗೆ ಎಳೆಯಿತು. ಶಿವಪುರದ ಪಕ್ಕದ ಪೇಟೆ ಪಾಠಶಾಲೆಯಲ್ಲಿ ನಾನು ಮುಖ್ಯೋಪಾಧ್ಯಾಯನಾಗಿ ಕೆಲಸ ಮಾಡುತ್ತಿದ್ದಾಗ ನನ್ನ ವಿದ್ಯಾರ್ಥಿಯಾಗಿದ್ದ ಶಿವಪುರದ ಕರಣಿಕರ ಮಗನ ಆಹ್ವಾನದಂತೆ ರಾಮೋತ್ಸವಕ್ಕೆ ಬಂದು ಯಾವ ಸ್ಥಳವು ನಿರ್ಮಲವಾದುದೆಂದು ಒಮ್ಮೆ ಭಾಸವಾಗಿತ್ತೋ ಆ ಸ್ಥಳಕ್ಕೇ ಅಕಸ್ಮಾತ್ ಬಂದೆ. ದೈವಾನುಗ್ರಹದಿಂದಲೋ ಪೂರ್ವ ಪುಣ್ಯ ವಿಶೇಷದಿಂದಲೋ ಕರಣಿಕರ ಸತ್ಸಂಗವು ಲಭಿಸಿತು. ಅವರ ಆಶ್ರಯದಲ್ಲಿ

ನೆಲಸಿವೆ. ಈ ವರೆಗೆ ನನ್ನ ಕೈಲಾದ ಸೇವೆಯನ್ನು ಕೆಲವು ಮಂದಿ ಬಾಲಕರಿಗಾದರೂ ಸಲ್ಲಿಸಿ ಮನಸ್ಸಿನ ಆಸೆಯನ್ನು ತೃಪ್ತಿಪಡಿಸಿಕೊಂಡೆ.

ಕೊನೆಯಲ್ಲಿ, ವಸತಿ ವಿದ್ಯಾಶಾಲೆಯ ಶಂಕುಸ್ಥಾಪನೆಯ ದಿವಸ ಸುಕೃತ ವಿಶೇಷದಿಂದ ಹೊಟ್ಟೆಯಲ್ಲಿ ಹುಟ್ಟಿದ ಮಗ ರಾಮಸ್ವಾಮಿಯ ಮುಖದರ್ಶನವೂ ಲಭಿಸಿತು. ಆದರೆ, 'ಋಣಾನುಸಂಬಂಧವಿದ್ದಲ್ಲಿ ಈ ಜನ್ಮದಲ್ಲಿಯೇ ಪುನಃ ಸಂಧಿಸೋಣ' ಎಂದು ಹೇಳಿದ್ದ ಪರಮ ಮಿತ್ರ ಚಿದಂಬರ ಶಾಸ್ತ್ರಿಯ ದರ್ಶನವು ಈ ಜನ್ಮದಲ್ಲಿ ಲಭ್ಯವಿಲ್ಲದೆ ಹೋಯಿತು. ಪರದಲ್ಲಿಯಾದರೂ ಹುಡುಕಿ ಆ ದಂಪತಿಗಳಿಗೆ ನನ್ನ ಕೃತಜ್ಞತೆಯನ್ನು ಬಿನ್ನವಿಸುವೆನು. ಜಗದೀಶ್ವರನು ಎಲ್ಲರಿಗೂ ಸುಖ ಶಾಂತಿಗಳನ್ನು ಅನುಗ್ರಹಿಸಲಿ."

"ಓಂ ಶಾಂತಿ ಶ್ಶಾಂತಿ ಶ್ಶಾಂತಿಃ"

ಅಲ್ಲಿಗೆ ಆತ್ಮ ಕಥೆಯು ಮುಗಿಯಿತು. ಓದುತ್ತಾ ಓದುತ್ತಾ ಕೊನೆಗೆ ಬಂದಾಗ ರಾಮಸ್ವಾಮಿಗೆ ಬಾಹ್ಯ ಪ್ರಪಂಚವು ಮರೆತು ಹೋಯಿತು. ಮುಖವು ವಿವರ್ಣವಾಯಿತು. ಆ ಪುಸ್ತಕವನ್ನು ಹಾಗೆಯೇ ಮೇಜಿನ ಮೇಲೆ ಹಾಕಿ, ತನ್ನ ಕೈಗಳನ್ನು ಮೇಜಿನ ಮೇಲೂರಿ ದಿಕ್ಕು ತೋಚದವನಂತೆ ನೆಟ್ಟ ದೃಷ್ಟಿಯಿಂದ ಎದುರು ಗೋಡೆಗೆ ಹಾಕಿದ್ದ, ಚಿದಂಬರ ಶಾಸ್ತ್ರಿಗಳು 'ತನ್ನ ಸ್ನೇಹಿತ ಮತ್ತು ಆತನ ಹೆಂಡತಿ'ಯೆಂದು ಹೇಳುತ್ತಿದ್ದ, ಯೌವನದ ತನ್ನ ನಿಜ ಮಾತಾಪಿತೃಗಳ ಭಾವಚಿತ್ರದ ಕಡೆಗೇ ನೋಡುತ್ತಿದ್ದರು. ಹೆಂಡತಿಯು ಕೋಣೆಯೊಳಗೆ ಬಂದು ಗಂಡನು ವ್ಯಸನಾಕ್ರಾಂತನಾಗಿರುವುದನ್ನು ಹಾಗೆಯೇ ನೋಡುತ್ತಿದ್ದಳು. ರಾಮಸ್ವಾಮಿಯ ಕಣ್ಣಲ್ಲಿ ಗಳಗಳನೆ ನೀರು ಸುರಿಯುತ್ತಿತ್ತು. ಇದನ್ನು ನೋಡಿ ಹೆಚ್ಚು ಹೊತ್ತು ಸಹಿಸಲಾರದ ಹೆಂಡತಿಯು ಹತ್ತಿರಕ್ಕೆ ಬಂದು ಮೆಲ್ಲನೆ "ಏನು ಸಮಾಚಾರ?" ಎಂದಳು. ರಾಮಸ್ವಾಮಿಯು ವಿಷಣ್ಣವದನನಾಗಿ ಹೆಂಡತಿಯ ಕಡೆ ತಿರುಗಿ "ಸರಸು, ನಾನು ತಂದೆಯ ಅಂತ್ಯ ದರ್ಶನಕ್ಕಾಗಿ ಶಿವಪುರಕ್ಕೆ ಹೋಗಿಬರುತ್ತೇನೆ" ಎಂದು ಹೇಳಿ, "ಅಲ್ಲಿಂದ ಬಂದಿದ್ದ ಹುಡುಗರಿಗೆ

ತಿಂಡಿ ಆಯಿತೆ?" ಎಂದು ಕೇಳಿದರು. "ಆಯಿತು, ನಿಮ್ಮ ಪ್ರತ್ಯುತ್ತರಕ್ಕಾಗಿ ಕಾದು ನಿಂತಿರುವರು" ಎಂದಳು. ಹಾಗಾದರೆ ಮರಿಗೌಡರ ಮೋಟಾರ್‌ಗಾಡಿಯಲ್ಲೇ ಹೋಗಿಬರುತ್ತೇನೆ" ಎಂದು ಹೇಳಿದಾಗ ಹಿಂದು ಮುಂದು ತಿಳಿಯದ ಹೆಂಡತಿಯು ತಾನೂ ಜೊತೆಯಲ್ಲಿಯೇ ಹೊರಟಳು.

ಇವರ ಆಗಮನವನ್ನೇ ನಿರೀಕ್ಷಿಸುತ್ತಿದ್ದ ಮರಿಗೌಡನು, ಗಾಡಿಯು ಆಶ್ರಮದ ಮುಂದೆ ಬಂದು ನಿಂತೊಡನೆಯೇ ಹತ್ತಿರ ಬಂದು ರಾಮುಸ್ವಾಮಿ ಯನ್ನು ಕುರಿತು "ಸ್ವಾಮಿ, ಇಂದಿಗೆ ನಮ್ಮೂರಿನ ಜ್ಞಾನ ಜ್ಯೋತಿಯು ನಂದಿಹೋಯಿತು. ಇನ್ನು ನಮ್ಮ ಮುಂದಿನ ಮಾರ್ಗವನ್ನು ದೇವರೇ ತೋರಿಸಬೇಕು."ಎಂದ. ರಾಮುಸ್ವಾಮಿಗೆ ಆ ಮಾತುಗಳೊಂದೂ ರುಚಿಸಲಿಲ್ಲ. ಗಾಡಿಯಿಂದಿಳಿದು "ಮರಿಗೌಡ, ಎಲ್ಲಿ? ಎಲ್ಲಿ? ಆ ನಮ್ಮ ತಂದೆಯ ಮುಖವನ್ನು ತೋರಿಸು" ಎಂದು ಹೇಳುತ್ತಾ ಕೈ ಬರಹದ ಪುಸ್ತಕವನ್ನು ಅವನಿಗೆ ಕೊಟ್ಟು ಹೆಂಡತಿಯೊಡನೆ ಆಶ್ರಮದ ಕಡೆ ಹೊರಟರು.

ಇಬ್ಬರೂ ಜನಸಂದಣಿಯನ್ನು ಭೇದಿಸಿಕೊಂಡು ಶವದ ಸಮೀಪ ವನ್ನು ಸೇರಿದರು. ರಾಮುಸ್ವಾಮಿಯು ಗುರುಗಳ ಪಾದದ ಹತ್ತಿರ ಮಂಡಿ ಯೂರಿ ಕುಳಿತು ರೋದಿಸುತ್ತಾ "ತಂದೆಯೇ, ಈ ನನ್ನ ಪ್ರತಿಯೊಂದು ನರ ದಲ್ಲಿಯೂ ನಿನ್ನ ರಕ್ತವು ಪ್ರವಹಿಸುತ್ತಿದೆ. ಪ್ರಾಪ್ತ ವಯಸ್ಕನಾಗಿ ಐಶ್ವ ರ್ಯದ ಜೊತೆಗೆ ತಕ್ಕಮಟ್ಟಿನ ಕೀರ್ತಿಯನ್ನೂ ಗಳಿಸಿದ ಕಾಲದಲ್ಲಿ ಅದನ್ನು ನೋಡಿ ಸಂತೋಷಪಡುವ ನಿನಗಾಗಲೀ ಸಾಕುತಂದೆಗಾಗಲೀ ಶುಶ್ರೂಷೆ ಮಾಡುವ ಸೌಭಾಗ್ಯವು ನನಗೆ ಲಭ್ಯವಿಲ್ಲದೆ ಹೋಯಿತು. ವಿದ್ಯಾಶಾಲೆಯ ಶಂಕುಸ್ಥಾಪನೆಯ ದಿನ ನಿನ್ನ ದರ್ಶನಾರ್ಥವಾಗಿ ಬಂದ ನನಗೆ ನಮ್ಮಿಬ್ಬರ ಪರಸ್ಪರ ಬಾಂಧವ್ಯವನ್ನು ತಿಳಿಸಲು ನಿನಗೆ ಮನ ಬರಲಿಲ್ಲ. ಇದರಲ್ಲಿ ನಿನ್ನ ಉದ್ದೇಶವೇನಿದ್ದಿತೋ ಅದು ಭಗವಂತನಿಗೇ ಗೊತ್ತು. ಆದುದಾಯಿತು. ಸ್ವಾರ್ಥತ್ಯಾಗಿಯೂ ಸಾತ್ವಿಕಶಿರೋಮಣಿಯೂ ಆದ ನಿನ್ನ ನಿಷ್ಕಳಂಕ ವಿಶ್ವಪ್ರೇಮವೇ ನನ್ನಲ್ಲಿಯೂ ಮೂಡುವಂತೆ ಅನುಗ್ರಹಿಸು. ದೇವರು ನಿನ್ನ ಆತ್ಮಕ್ಕೆ ಶಾಂತಿಯನ್ನೀಯಲಿ." ಎಂದು ಹೇಳುತ್ತಾ ತಂದೆಯ ಪಾದಗಳಿಗೆ ಸಾಷ್ಟಾಂಗ ಪ್ರಣಾಮ ಮಾಡಿದರು.

ಇದೆಲ್ಲವನ್ನೂ ನೋಡುತ್ತಾ ನಿಂತಿದ್ದ ಮರಿಗೌಡನಿಗೂ ನರಸಿಂಹ ಮೂರ್ತಿಗೂ ಆಶ್ಚರ್ಯ ಉಂಟಾಯಿತು. ರಾಮಸ್ವಾಮಿಯವರು ಮೇಲೆದ್ದು ತಮ್ಮ ಕಡೆ ತಿರುಗಿದಾಗ "ಏನು ಸಮಾಚಾರ?" ಎಂದು ಕೇಳಿದರು. ರಾಮಸ್ವಾಮಿಯವರು ಮರಿಗೌಡನನ್ನು ಕುರಿತು "ಮರಿಗೌಡ, ಈ ನನ್ನ ತಂದೆಯ ಅಂತ್ಯ ಸಂಸ್ಕಾರಗಳನ್ನಾದರೂ ಮಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ನಾನು ನಿಮಗೆ ತುಂಬಾ ಕೃತಜ್ಞನಾಗಿದ್ದೇನೆ. ನಿಮ್ಮ ಕೈಲಿ ಕೊಟ್ಟಿರುವ ಕೈ ಬರಹದ ಪುಸ್ತಕವನ್ನು ಓದಿದರೆ ಎಲ್ಲವೂ ವ್ಯಕ್ತವಾಗುವುದು. ನೀವು ದಯಮಾಡಿ ಅನುಮತಿಯನ್ನು ಕೊಟ್ಟರೆ ಈ ಕಳೇಬರವನ್ನು ಬೆಂಗಳೂರಿಗೆ ತೆಗೆದುಕೊಂಡು ಹೋಗುತ್ತೇನೆ." ಎಂದರು. ಅದಕ್ಕೆ ಮರಿಗೌಡನು "ಸ್ವಾಮಿ, ಅವರ ಅಂತ್ಯ ಸಂಸ್ಕಾರಗಳನ್ನು ನೆರವೇರಿಸಲು ನಿಮಗಿಂತಲೂ ಹೆಚ್ಚಿನ ಉತ್ಸಾಹವು ನಮ್ಮೆಲ್ಲರಿಗೂ ಇರುವುದು. ತಾವು ಪರಿಭಾವಿಸದೆ ಇಲ್ಲಿಯೇ ನಿಂತು ಮುಂದಿನ ಕಾರ್ಯಗಳಲ್ಲಿ ಸಹಕರಿಸುವುದಾದರೆ ನಮ್ಮೆಲ್ಲರಿಗೂ ಬಹಳ ಸಮಾಧಾನ." ಎಂದನು. ರಾಮಸ್ವಾಮಿಯು ವಿಧಿಯಿಲ್ಲದೆ ಅದಕ್ಕೊಪ್ಪಿದರು.

ದಹನ ಕಾರ್ಯವೂ ಮತ್ತು ಉತ್ತರಕ್ರಿಯಾದಿಗಳೂ ಸಾಂಗವಾಗಿ ನೆರವೇರಿದುವು. ಅವರೆಗೂ ರಾಮಸ್ವಾಮಿಯೂ ಅವರ ಹೆಂಡತಿಯೂ ಅತಿಥಿಗಳ ಬಿಡಾರಕ್ಕಾಗಿ ತೋಟದ ಒಂದು ಪಾರ್ಶ್ವದಲ್ಲಿ ಮರಿಗೌಡನು ಕಟ್ಟಿಸಿದ್ದ ಮನೆಯಲ್ಲಿಯೇ ಉಳಿದಿದ್ದರು. ಗುರುಗಳ ಗೌರವಾರ್ಥವಾಗಿ ವಿದ್ಯಾಶಾಲೆಯ ಪಾಠಪ್ರವಚನಗಳು ಹನ್ನೆರಡು ದಿನಗಳ ವರೆಗೆ ನಿಲ್ಲಿಸಲ್ಪಟ್ಟವು. ಕಡೆಯ ದಿನ ಗುರುಗಳ ಆರಾಧನೆಯಲ್ಲಿ ಕೃಷ್ಣಮೂರ್ತಿಯಾದಿಯಾಗಿ ಶಿವಪುರದ ಗ್ರಾಮವಾಸಿಗಳೆಲ್ಲರೂ ಭಾಗಿಗಳಾಗಿ ಗುರುಗಳಲ್ಲಿ ತಮಗಿದ್ದ ಅನನ್ಯ ಭಕ್ತಿಯನ್ನು ವ್ಯಕ್ತಗೊಳಿಸಿದರು. ಅಷ್ಟರೊಳಗಾಗಿ ಆಶ್ರಮವಿದ್ದ ಸ್ಥಳದಲ್ಲಿ ಎಲ್ಲರೂ ಸೇರಿ ಒಂದು ಬೃಂದಾವನವನ್ನೂ ಅದರ ಸುತ್ತಲೂ ವಿಶಾಲವಾದ ಅಶ್ವತ್ಥ ಕಟ್ಟೆಯನ್ನೂ ನಿರ್ಮಿಸಿದರು. ಮಾರನೆಯ ದಿನ ರಾಮಸ್ವಾಮಿಯು ಎಲ್ಲರನ್ನೂ ವಂದಿಸಿ ಎಲ್ಲರಿಂದಲೂ ಬೀಳ್ಕೊಟ್ಟು ಹೆಂಡತಿಯೊಡನೆ ಬೆಂಗಳೂರಿಗೆ ಹಿಂದಿರುಗಿದರು.

೧೦. ಮುಂದುವರಿದ ಹಳ್ಳಿ

ಕಾಲಗತಿಯನ್ನನುಸರಿಸಿ ಕರಣಿಕರೂ ಗುರುಗಳೂ ಪರಂಧಾಮವ ನ್ನೈದಿದಂತೆ ಕೆಲವು ಕಾಲದ ಮೇಲೆ ಧರ್ಮಪ್ರಕಾಶ ಪಟೇಲ್ ತಿಮ್ಮೆ ಗೌಡರೂ ತಮ್ಮ ಕೀರ್ತಿಯು ಆಚಂದ್ರಾರ್ಕವಾಗಿ ನಿಲ್ಲುವಂಥ ದಾನಧರ್ಮ ಗಳನ್ನು ಮಾಡಿ ಇಹಲೋಕವನ್ನು ಬಿಟ್ಟು ಧನ್ಯರಾದರು. ಅವರ ಮರಣಾನಂತರ ಅವರ ಹೆಂಡತಿಯು ಗಂಡನ ಮರಣಶಾಸನದಲ್ಲಿ ಬರೆದಿ ದ್ದಂತೆ ತಾನು ಬದುಕಿರುವವರೆಗೂ ತಮ್ಮ ಮನೆಯಲ್ಲಿ ವಾಸಿಸಲು ಅವಕಾಶ ವಿದ್ದರೂ, ಮನೆಯನ್ನು ಸಹಕಾರ ಸಂಘ, ಪುಸ್ತಕಭಂಡಾರ, ವಾಚ ನಾಲಯ, ಗ್ರಾಮ ಸಭೆ ಮುಂತಾದ ಸಾರ್ವಜನಿಕ ಕಾರ್ಯಕಲಾಪಗಳಿ ಗಾಗಿ ಬಿಟ್ಟುಕೊಟ್ಟು ಮಗಳ ಮನೆಯಲ್ಲಿಯೇ ವಾಸಿಸತೊಡಗಿದರು.

ಕರಣಿಕರ ಸಾಲವೆಲ್ಲವೂ ಮರಿಗೌಡನ ಮೇಲ್ವಿಚಾರಣಾ ವಿಚಕ್ಷಣತೆ ಯಿಂದ ನಿರೀಕ್ಷಿಸಿದ್ದ ಅವಧಿಯೊಳಗಾಗಿಯೇ ತೀರಿ ಪಿತ್ರಾರ್ಜಿತವಾದ ಜಮೀನುಗಳೆಲ್ಲವೂ ನರಸಿಂಹಮೂರ್ತಿಯ ವಶಕ್ಕೆ ಬಂದುವು. ನರಸಿಂಹ ಮೂರ್ತಿಗೆ ಹೆಚ್ಚು ತೊಂದರೆ ಇಲ್ಲದಂತೆ ಆತನ ಜಮೀನುಗಳಿಂದ ಮರಿಗೌಡನು ನಿಗದಿಮಾಡಿದ್ದ ದವಸಧಾನ್ಯಗಳು ಕಾಲ ಕಾಲಕ್ಕೆ ಸರಿಯಾಗಿ ಬರುತ್ತಿದ್ದವು. ಕೃಷ್ಣಮೂರ್ತಿಯು ತನ್ನ ಒಳ್ಳೆಯ ನಡತೆಯಿಂದಲೂ ಕಾರ್ಯ ತತ್ಪರತೆಯಿಂದಲೂ ಮೇಲಿನ ಅಧಿಕಾರಿಗಳ ಮೆಚ್ಚುಗೆಯನ್ನು ಪಡೆದು ಈಗ ಮುನ್ಸೀಫರಾಗಿ ತನ್ನ ಸಂಸಾರದೊಂದಿಗೆ ಸುಖವಾಗಿದ್ದಾನೆ. ಎಲ್ಲಿ ಕೆಲಸದಲ್ಲಿದ್ದಾಗ್ಯೂ ವೈಶಾಖ ಮಾಸದಲ್ಲಿ ಊರಿಗೆ ಬಂದು ಗುರುಗಳ ಆರಾಧ ನೆಯಲ್ಲಿ ಭಾಗವಹಿಸಿ ನಾಲ್ಕಾರು ದಿನ ಶಿವಪುರದಲ್ಲಿದ್ದು ಹೋಗುತ್ತಾನೆ.

ತಿಮ್ಮೆಗೌಡರ ಮರಣಾನಂತರ ಗ್ರಾಮದ ಪಟೇಲಿ ಅಧಿಕಾರವನ್ನು ವಹಿಸುವವರು ಯಾರೂ ಇಲ್ಲದಂತಾಯ್ತು. ಹಕ್ಕುದಾರಿಯನ್ನು ಸಾಧಿಸುವ ಅವರ ದಾಯಾದಿಗಳು ಯಾರೂ ಇರಲಿಲ್ಲ. ಗುರುಗಳ ಆರಾಧನೆಗಾಗಿ ಊರಿಗೆ ಬಂದಿದ್ದ ತಮ್ಮನೊಡನೆ ನರಸಿಂಹಮೂರ್ತಿಯು ಈ ವಿಚಾರವನ್ನು

ಆಲೋಚಿಸಿ ಉಭಯತ್ರರೂ ಒಪ್ಪಿ ಒಂದು ನಿರ್ಧಾರಕ್ಕೆ ಬಂದು ಆ ತಮ್ಮ ನಿರ್ಧಾರವನ್ನು ಗ್ರಾಮದಲ್ಲಿ ಹಿರಿಯರೂ ತಿಳಿವಳಿಕೆಯುಳ್ಳವರೂ ಆದ ನಾಲ್ಕಾರು ಮಂದಿಯೊಡನೆ ಚರ್ಚಿಸಿ ಅವರು ಅಭಿಪ್ರಾಯಪಟ್ಟಂತೆ ಒಂದು ದಿನ ಗ್ರಾಮದವರೆಲ್ಲರೂ ಸಭೆ ಸೇರಿ ಮರಿಗೌಡನನ್ನು ಅಲ್ಲಿಗೆ ಬರಮಾಡಿ ಕೊಂಡು, ಮರಿಗೌಡನೇ ಊರಿನ ಪಟೇಲಿ ಅಧಿಕಾರವನ್ನು ವಹಿಸಿಕೊಳ್ಳ ಬೇಕೆಂದು ಕೇಳಿಕೊಂಡರು. ಊರಿನವರೆಲ್ಲರ ಅಭಿಮತದಂತೆ ನಡೆದು ಕೊಳ್ಳಲು ಮರಿಗೌಡನು ಸಮ್ಮತಿಸಿದನು. ಸರ್ಕಾರದ ಅಂಗೀಕಾರವೂ ದೊರೆತನಂತರ ಮರಿಗೌಡನು ಪಟೇಲಿ ಅಧಿಕಾರ ಸೂತ್ರಗಳನ್ನು ವಹಿಸಿ ಕೊಂಡನು. ತಮ್ಮ ಜಮೀನಿನಲ್ಲಿ ತರಕಾರಿ ಹಣ್ಣು ಮುಂತಾದುವನ್ನು ಬೆಳೆಯಲು ಅಣ್ಣನ ಸಹಾಯಕ್ಕೆ ತಕ್ಕ ಸಿಬ್ಬಂದಿಯನ್ನು ಗೊತ್ತು ಮಾಡಿ, ಅವುಗಳನ್ನು ಕಾಲಕ್ಕೆ ಸರಿಯಾಗಿ ಬೆಂಗಳೂರಿಗೆ ಸಾಗಿಸಲು ಅಣ್ಣನ ಮಗನಿಗೆ ಬೇಕಾದ ತರಪೇತನ್ನು ಕೊಟ್ಟು, ಮರಿಗೌಡನು ಗ್ರಾಮಾಭಿವೃದ್ಧಿ ಕಾರ್ಯದ ಕಡೆ ತಿರುಗಿದನು. ಮನೆಯ ಒಳಾಡಳಿತವನ್ನು ನಿರ್ವಹಿಸುತ್ತಾ ಶಾರದೆಯು ತನ್ನ ವಿರಾಮ ಕಾಲದಲ್ಲಿ ಗಂಡನ ಗ್ರಾಮೋದ್ಧಾರ ಕಾರ್ಯಕಲಾಪಗಳಲ್ಲಿ ನೆರವಾಗುತ್ತಾ ಬಂದಳು.

ರೈತರು ನಾಗರಿಕ ಪ್ರಪಂಚದಲ್ಲಿ ಉದ್ಧಾರವಾಗಲು ಅವರಿಗೆ ಸರಿಯಾದ ತಿಳಿವಳಿಕೆ ಬೇಕು. ಅದನ್ನು ಸ್ವಶಕ್ತಿಯಿಂದ ಸಂಪಾದಿಸಲು ಓದುಬರಹವನ್ನು ಕಲಿಯಬೇಕು. ಅದಿಲ್ಲದೆ, ಅವರಿಗೆ ಕಣ್ಣುಗಳಿದ್ದರೂ ಅವರು ಕುರುಡರೇ ಸರಿ. ಹೀಗೆ ಅವರೆಲ್ಲರನ್ನೂ ಆವರಿಸಿರುವ ಅಂಧಕಾರ ಮಯವಾದ ಅಜ್ಞಾನದ ಹೊದಿಕೆಯನ್ನು ಚೂರು ಚೂರಾಗಿ ಕತ್ತರಿಸಲು ಮಕ್ಕಳ ಬಲಾತ್ಕಾರ ವಿದ್ಯಾಭ್ಯಾಸ ಮತ್ತು ವಯಸ್ಕರ ವಿದ್ಯಾಭ್ಯಾಸವೆಂಬ ಹರಿತವಾದ ಎರಡು ಅಲಗುಗಳುಳ್ಳ ಕತ್ತರಿಯನ್ನು ಪ್ರಯೋಗಿಸಬೇಕು. ಇದನ್ನರಿತ ಮರಿಗೌಡನು ಊರಿನ ಎಲ್ಲಾ ಮಕ್ಕಳನ್ನೂ ಪಾಠಶಾಲೆಗೆ ತಪ್ಪದೆ ಕಳುಹಿಸುವಂತೆ ಹಿರಿಯರನ್ನು ಪ್ರೇರೇಪಿಸಿದನು. ವಯಸ್ಕರಾದ ಗಂಡಸರು ಓದುಬರಹವನ್ನು ಕಲಿಯಲು ರಾತ್ರಿ ಪಾಠಶಾಲೆಗಳನ್ನು

ಏರ್ಪಡಿಸಿ ವಸತಿ ವಿದ್ಯಾಶಾಲೆಯ ವಿದ್ಯಾರ್ಥಿಗಳು ಬಂದು ಪಾಠ ಹೇಳುವಂತೆ ಏರ್ಪಡಿಸಿದನು. ಶಾರದೆಯ ಮೇಲ್ವಿಚಾರಣೆಯಲ್ಲಿ ಗ್ರಾಮದ ಹೆಂಗಸರೂ ಓದುಬರಹವನ್ನು ಕಲಿಯಲು ಅನುಕೂಲವಾಗುವಂತೆ ಪಾಠಶಾಲೆಗಳನ್ನು ಏರ್ಪಡಿಸಿ ಅವುಗಳನ್ನೂ ವಸತಿ ವಿದ್ಯಾಶಾಲೆಯ ವಿದ್ಯಾರ್ಥಿಗಳೇ ನಡೆಸುವಂತೆ ವ್ಯವಸ್ಥೆ ಮಾಡಲಾಯಿತು. ಈ ರೀತಿಯ ಕಾರ್ಯಕ್ರಮವನ್ನು ಕೈಗೊಂಡ ಐದಾರು ವರ್ಷಗಳೊಳಗಾಗಿ ಗ್ರಾಮದ ಅನಕ್ಷರತೆಯು ನಿರ್ಮೂಲವಾಯಿತು.

ಪ್ರತಿ ದಿನವೂ ಸಾಯಂಕಾಲ ಸಹಕಾರ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಪುಸ್ತಕಭಂಡಾರ ಮತ್ತು ವಾಚನಾಲಯಗಳಲ್ಲಿ ಊರಿನ ರೈತರು ಸೇರುವ ಪದ್ಧತಿಯನ್ನು ಅನುಸರಿಸಿದ್ದಾರೆ. ಹೆಚ್ಚಿನ ಪ್ರಪಂಚ ವ್ಯವಹಾರವನ್ನು ತಿಳಿಸಲು ವಸತಿ ವಿದ್ಯಾಶಾಲೆಯ ಉಪಾಧ್ಯಾಯರುಗಳು ಹೊಸ ವಿಷಯಗಳನ್ನು ಕುರಿತು ಆಗಾಗ ಉಪನ್ಯಾಸ ಮಾಡುತ್ತಾರೆ. ಕಟ್ಟಡದ ಆವರಣದಲ್ಲಿ ಸ್ಥಾಪಿಸಲ್ಪಟ್ಟಿರುವ ರೇಡಿಯೋ ಮೂಲಕ ಉಪನ್ಯಾಸಗಳನ್ನೂ ಸಂಗೀತವನ್ನೂ ಕೇಳಲು ಅನುಕೂಲವಾಗಿದೆ. ಶಿಕ್ಷಣಪ್ರದವಾದ ಮತ್ತು ವಿನೋದದಾಯಕವಾದ ವಾಕ್ಚಿತ್ರಗಳು ಪ್ರದರ್ಶಿಸಲ್ಪಡುತ್ತವೆ. ಇವುಗಳಲ್ಲದೆ ಸಹಕಾರ ಸಂಘವು ದವಸಧಾನ್ಯಗಳನ್ನು ಸಾಗಿಸಲು ಇಟ್ಟಿರುವ ಮೋಟಾರ್ ಲಾರಿಯನ್ನು ಜನಗಳು ಕುಳಿತುಕೊಳ್ಳುವಂತೆ ಮಾರ್ಪಡಿಸಿ ರೈತರು ತಮಗೆ ವಿರಾಮ ದೊರೆತಾಗ ದೊಡ್ಡ ಪಟ್ಟಣಗಳನ್ನೂ, ಪುಣ್ಯಕ್ಷೇತ್ರಗಳನ್ನೂ, ಆಧುನಿಕ ವ್ಯವಸಾಯ ಮತ್ತು ಕೈಗಾರಿಕಾ ಕ್ಷೇತ್ರಗಳನ್ನೂ ನೋಡಲು ಪ್ರವಾಸ ಮಾಡುತ್ತಾರೆ. ಪ್ರತಿ ಸೋಮವಾರವೂ ಆರಂಭದ ಕೆಲಸದಿಂದ ವಿಶ್ರಾಂತಿ ಹೊಂದಿ ದೇವಸ್ಥಾನಗಳಲ್ಲಿ ಪೂಜೆ, ಸಾಯಂಕಾಲದಲ್ಲಿ ಭಜನೆ, ಹರಿಕಥೆ, ಭಾರತವಾಚನ ಮುಂತಾದವುಗಳಲ್ಲಿ ಭಾಗ ವಹಿಸುತ್ತಾರೆ.

ತಿಮ್ಮೆಗೌಡರ ದ್ರವ್ಯ ಸಹಾಯದಿಂದ ಸ್ಥಾಪಿತವಾದ ಸಹಕಾರ ಸಂಘದಲ್ಲಿ ಶಿವಪುರದ ರೈತರೆಲ್ಲರೂ ತಮ್ಮ ಹಣಕಾಸಿನ ವ್ಯವಹಾರವನ್ನು

ನಡೆಸುತ್ತಾರೆ. ತಾವು ಬೆಳೆದ ದವಸಧಾನ್ಯಗಳ ಮಾರಾಟವನ್ನು ಸಹಕಾರ ಸಂಘದ ಮುಖಾಂತರವೇ ನಡೆಸುತ್ತಾರೆ. ತಮಗೆ ಬೇಕಾದ ವ್ಯವಸಾಯದ ಮುಟ್ಟುಗಳು, ಬಟ್ಟೆ, ತಾವು ಬೆಳೆಯದ ಇತರ ಅವಶ್ಯಕವಾದ ವಸ್ತುಗಳನ್ನು ಸಹಕಾರ ಸಂಘದಿಂದಲೇ ಪಡೆಯುತ್ತಾರೆ. ಕ್ರಮೇಣ ಒಬ್ಬರಾದ ಮೇಲೊಬ್ಬರು ಮರಿಗೌಡನ ಪ್ರೋತ್ಸಾಹದಿಂದ ಅವನ ಮಾದರಿಯನ್ನೇ ಅನುಸರಿಸಿ ತಮ್ಮ ತಮ್ಮ ಜಮೀನುಗಳಲ್ಲಿ ಆಳವಾದ ಭಾವಿಗಳನ್ನಿಳಿಸಿ ವಿದ್ಯುಚ್ಛಕ್ತಿಯ ಸಹಾಯದಿಂದ ನೀರೆತ್ತಿ ಹೊಸ ಹೊಸ ಬೆಳೆಗಳನ್ನು ಬೆಳೆಯುತ್ತಾರೆ. ಇವುಗಳೆಲ್ಲದರ ದೆಸೆಯಿಂದ ರೈತರ ಆರ್ಥಿಕ ಸ್ಥಿತಿಯು ಉತ್ತಮವಾಗಿ ಅವರು ಪೇಟೆಯ ವರ್ತಕರಲ್ಲಿ ಮಾಡಿದ್ದ ಸಾಲಗಳನ್ನೆಲ್ಲಾ ತೀರಿಸಿ ಅವರ ವಜ್ರಮುಷ್ಟಿಯಿಂದ ಪಾರಾಗಿದ್ದಾರೆ.

ಹಳೆಯ ಊರಿನಲ್ಲಿ ಸಾಧ್ಯವಾದ ಕಡೆಗಳಲ್ಲಿ ಬೀದಿಗಳನ್ನು ವಿಸ್ತರಿಸಿ ಮನೆಗಳಲ್ಲಿ ಧಾರಾಳವಾಗಿ ಗಾಳಿ ಬೆಳಕುಗಳ ಪ್ರವೇಶಕ್ಕೆ ಅನುಕೂಲಿಸುವಂತೆ ಮನೆಗಳಿಗೆ ಕಿಟಕಿಗಳನ್ನಿಡಿಸಿದ್ದಾರೆ. ಇಕ್ಕಟ್ಟಾದ ಸ್ಥಳಗಳನ್ನು ಬಿಟ್ಟು ಕೆಲವರು ತಮ್ಮ ಜಮೀನುಗಳಲ್ಲಿಯೇ ಮನೆಗಳನ್ನು ಕಟ್ಟಿಸಿ ಅಲ್ಲಿ ವಾಸಿಸುತ್ತಾರೆ. ಊರೊಳಗೆ ಬಚ್ಚಲ ನೀರು ಕೊಳೆತು ನಾರದಂತೆ ಚರಂಡಿಗಳನ್ನು ಕಟ್ಟಿಸಿದ್ದಾರೆ. ಇದಕ್ಕವಕಾಶವಿಲ್ಲದವರು ಹಿತ್ತಲಲ್ಲಿಯೇ ಇಮುದು ಗುಂಡಿಗಳನ್ನು ಕಟ್ಟಿಸಿಕೊಂಡಿದ್ದಾರೆ. ಗೊಬ್ಬರದ ಶೇಖರಣೆಗಾಗಿ ಹೊಸ ರೀತಿಯ ಕಣಜಗಳನ್ನು ಕಟ್ಟಿಸಿ ಅದರ ಸಾರವು ಕೆಡದಂತೆ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾರೆ. ಬೀದಿಯಲ್ಲಿ ವಿದ್ಯುದ್ದೀಪಗಳು ಮಿನುಗುತ್ತಿರುವುವಲ್ಲದೆ ಅನೇಕರ ಮನೆಗಳಲ್ಲಿಯೂ ವಿದ್ಯುದ್ದೀಪಗಳು ಬೆಳಗುತ್ತಿವೆ. ಊರಿಗೆ ಪಶ್ಚಿಮ ದಿಕ್ಕಿನಲ್ಲಿ ಭೈರವ ಗಿರಿಗೆ ಸಮೀಪವಾಗಿ ಸ್ವರ್ಣಮುಖಿಯ ದಡದ ಮೇಲೆ, ಕಾರಣಾಂತರದಿಂದ ಶಿವಪುರಕ್ಕೆ ಬರಬಹುದಾದ ಪ್ರವಾಸಿಗಳ ಸೌಕರ್ಯಕ್ಕಾಗಿ ಪುಟ್ಟದೊಂದು ವಸತಿ ಗೃಹವನ್ನೂ ಅದರ ಸುತ್ತಲೂ ರಮ್ಯವಾದ ಹೂದೋಟವನ್ನೂ ನಿರ್ಮಿಸಲಾಗಿದೆ.



ಈ ರೀತಿಯಲ್ಲಿ ದಿನೇ ದಿನೇ ಅಭಿವೃದ್ಧಿಯಾಗುತ್ತಿರುವ ಶಿವಪುರವನ್ನು ನೋಡಲು ಕುತೂಹಲಪಟ್ಟು ಮುಖ್ಯ ಮಂತ್ರಿಗಳು ಒಮ್ಮೆ ಅಲ್ಲಿಗೆ ದಯಮಾಡಿಸಿದರು. ಗ್ರಾಮದವರೆಲ್ಲರೂ ಅವರನ್ನು ಉಚಿತರೀತಿಯಲ್ಲಿ ಸ್ವಾಗತಿಸಿ ಸತ್ಕರಿಸಿದರು. ವಸತಿ ವಿದ್ಯಾಶಾಲೆಯ ಸುವ್ಯವಸ್ಥಿತ ಆಡಳಿತವನ್ನೂ ರೈತರ ಆಧುನಿಕ ರೀತಿಯ ವ್ಯವಸಾಯ ಕ್ರಮವನ್ನೂ, ಗ್ರಾಮ

ನೈರ್ಮಲ್ಯದ ಏರ್ಪಾಟನ್ನೂ, ವಿರಾಮ ಕಾಲವನ್ನು ಜ್ಞಾನಾರ್ಜನೆ ಗಾಗಿಯೂ ಉತ್ತಮ ರೀತಿಯ ವಿನೋದಕ್ಕಾಗಿಯೂ ವಿನಿಯೋಗಿಸುತ್ತಿರುವ ರೀತಿಯನ್ನೂ, ಅವರಲ್ಲಿರುವ ದೈವಭಕ್ತಿಯನ್ನೂ ಐಕಮತ್ಯವನ್ನೂ ಎಲ್ಲಕ್ಕೂ ಮೇಲಾಗಿ ಎಲ್ಲರ ಮುಖದಲ್ಲಿಯೂ ನಲಿದಾಡುತ್ತಿರುವ ಉತ್ಸಾಹ ವನ್ನೂ ಸಂತೋಷವನ್ನೂ ಕಂಡು ಸುಪ್ರೀತರಾದ ಮಂತ್ರಿಗಳು ಶಿವಪುರ ವನ್ನು ಮಾದರಿ ಗ್ರಾಮವನ್ನಾಗಿ ಪರಿಗಣಿಸುವುದಾಗಿಯೂ, ವಸತಿ ವಿದ್ಯಾ ಶಾಲೆಯಲ್ಲಿ ಗ್ರಾಮಾಭಿವೃದ್ಧಿ ಶಿಕ್ಷಣ ಶಾಖೆಯೊಂದನ್ನು ತೆರೆಯುವುದಕ್ಕೂ ಅಲ್ಲಿನ ಕಾರ್ಯ ಕಲಾಪಗಳನ್ನು ಚಿತ್ರಿಸುವ ವಾರಪತ್ರಿಕೆಯೊಂದನ್ನು ಹೊರಡಿಸುವುದಕ್ಕೂ ಬೇಕಾದ ಸೌಲಭ್ಯಗಳನ್ನು ಘನಸರ್ಕಾರದಿಂದ ಕೊಡು ವುದಾಗಿ ಭರವಸೆ ಇತ್ತರು. ಕಾಲಾನುಕ್ರಮದಲ್ಲಿ ಅವೂ ಕೈಗೂಡಿದುವು.

ವಸಂತನು ನಾಲ್ಕು ವರ್ಷ ಕಾಲ ಅಮೆರಿಕದಲ್ಲಿ ಮೊದಲೇ ನಿರ್ಧರಿಸಿ ದ್ದಂತೆ ವ್ಯಾಸಂಗ ಮಾಡಿ ಡಾಕ್ಟರ್ ಪದವೀಧರನಾಗಿ ಅಲ್ಲಿಂದ ಹೊರಟನು. ಹೊರಡುವಾಗ ಅವನೊಡನೆ ಮೂರು ವರ್ಷವೂ ಸಹಪಾಠಿಯಾಗಿ ವ್ಯಾಸಂಗ ಮಾಡುತ್ತಿದ್ದು ಸ್ನೇಹವನ್ನು ಬೆಳೆಸಿದ್ದ ಅಮೆರಿಕದ ಶ್ರೀಮಂತನ ಮಗ ನೊಬ್ಬನು ಹಿಂದೂ ದೇಶವನ್ನು ನೋಡುವ ಉತ್ಸಾಹದಿಂದ ವಸಂತನೊಡನೆ ಹೊರಟನು. ಶ್ರೀಮಂತನು ಇವರ ಪ್ರಯಾಣಕ್ಕೆಂದೇ ತೆಗೆದುಕೊಟ್ಟ ವಿಮಾನ ಒಂದರಲ್ಲಿ ಇಬ್ಬರೂ ಪ್ರಯಾಣ ಬೆಳೆಸಿದರು. ಅವರೆಗೆ ವಿಮಾನ ನಡೆಸು ವುದನ್ನು ಕಲಿತಿದ್ದ ವಸಂತನೇ ವಿಮಾನವನ್ನು ನಡೆಸುತ್ತಾ ಬರುವಾಗ ಜರ್ಮ ದೇಶವನ್ನು ಹೊಕ್ಕು ಅಲ್ಲಿ ಕೆಲವು ದಿನಗಳಿದ್ದು ಅಲ್ಲಿನ ಕೆಲವು ಸುಲಭಸಾಧ್ಯವಾದ ಗೃಹಕೈಗಾರಿಕೆಗಳನ್ನೂ ನೋಡಿಕೊಂಡು ಅಲ್ಲಿಂದ ಹೊರಟರು. ಶಿವಪುರದ ವಸತಿ ವಿದ್ಯಾಶಾಲೆಯ ದಾನಿಗಳ ದಿನಾಚರಣೆಯ ಸಮಯಕ್ಕೆ ಸರಿಯಾಗಿ ಅಲ್ಲಿಗೆ ವಾಯುಮಾರ್ಗವಾಗಿ ಬರುವುದಾಗಿಯೂ, ವಿಮಾನವು ಇಳಿಯುವುದಕ್ಕೆ ಅನುಕೂಲಿಸುವಂತೆ ವಿದ್ಯಾಶಾಲೆಯ ಆಟದ ಮೈದಾನವನ್ನು ಸ್ವಲ್ಪ ಸಿದ್ಧಪಡಿಸುವಂತೆಯೂ ವಸಂತನು ಮೊದಲೇ ತಂದೆಗೆ ತಿಳಿಸಿದ್ದನು. ಆ ದಿನ ಊರಿನವರೆಲ್ಲರೂ ಅವನ ಆಗಮನವನ್ನೇ

ಇದಿರು ನೋಡುತ್ತಿದ್ದರು. ಬೆಳಗಿನ ಉಪಾಹಾರವನ್ನು ಮುಗಿಸಿಕೊಂಡು ಮದರಾಸಿನಿಂದ ಹೊರಟ ಸ್ನೇಹಿತರು ಹತ್ತು ಗಂಟೆಗೆ ಸರಿಯಾಗಿ ಆಕಾಶಮಾರ್ಗದಿಂದ ಶಿವಪುರದಲ್ಲಿ ಇಳಿದರು.

ವಸಂತನನ್ನು ನೋಡಲು ಊರಿನವರೆಲ್ಲರೂ ಒಂದು ಪಕ್ಕದಲ್ಲಿ ಸಾಲಾಗಿ ನಿಂತಿದ್ದರು. ವಸಂತನು ವಿಮಾನದಿಂದ ಕೆಳಗಿಳಿದೊಡನೆಯೇ ಅವನ ತಾಯ್ತಂದೆ ಮತ್ತು ತಾತ ವಿಮಾನದ ಬಳಿ ಬಂದರು. ವಸಂತನು ಮೊದಲು ತಾತನಿಗೂ ಅನಂತರ ತಾಯ್ತಂದೆಗಳಿಗೂ ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸಿದನು. ಮೊದಲು ತಾತನಿಗೆ ಮೊಮ್ಮಗನ ಗುರುತು ಸಿಕ್ಕಲಿಲ್ಲ. ತಲೆಗೂ ಕಣ್ಣಿಗೂ ಹಾಕಿಕೊಂಡಿದ್ದ ರಕ್ಷಣಾ ಕವಚಗಳನ್ನು ತೆಗೆದಾಗ ಗುರುತು ಸಿಕ್ಕಿತು. ಸೊಂಟಕ್ಕೊಂದು ತುಂಡು ಪಂಚೆಯನ್ನು ಸುತ್ತಿಕೊಂಡು ಹೆಗಲ ಮೇಲೆ ದುಪಟಿಯೊಂದನ್ನು ಹಾಕಿಕೊಂಡು ನಿಂತಿದ್ದ ಬೋರೆಗೌಡನ ಕಡೆ ಕೈ ತೋರಿಸುತ್ತಾ, "ಇವರ ಉಡುಪನ್ನು ನೋಡಿದರೆ ಗಾಂಧಿಯನ್ನೇ ಅನುಸರಿಸುತ್ತಿರುವಂತೆ ಕಾಣುವುದು" ಎಂದು ಅಮೆರಿಕದ ಸ್ನೇಹಿತನು ಹೇಳಿದನು. ವಸಂತನು "ಅದು ಹಾಗಲ್ಲ, ನಮ್ಮ ದೇಶದ ತೊಂಭತ್ತು ಭಾಗ ರೈತರೆಲ್ಲರೂ ಧರಿಸುವುದು ಇದೇ ಉಡುಪು. ತಾನು ಇವರೆಲ್ಲರ ಪ್ರತಿನಿಧಿ ಎಂದು ತೋರಿಸಲು ಮಹಾತ್ಮ ಗಾಂಧಿಯವರು ಇವರ ಉಡುಪಿನ ಮಾದರಿಯನ್ನೇ ಅನುಸರಿಸಿರುವರು" ಎಂದು ಉತ್ತರ ಕೊಟ್ಟನು.

ಕೆಲವು ದಿನಗಳೊಳಗಾಗಿ ವಸಂತನು ಸ್ನೇಹಿತನೊಡನೆ ವಾಯುಮಾರ್ಗವಾಗಿ ಹೊರಟು ಹಿಂದೂದೇಶದಲ್ಲಿ ನೋಡಬೇಕಾದ ಮುಖ್ಯಸ್ಥಳಗಳನ್ನೆಲ್ಲಾ ನೋಡಿ ಊರಿಗೆ ಹಿಂದಿರುಗಿದನು. ಅದುವರೆಗೂ ವಸಂತನ ಆತಿಥ್ಯದಲ್ಲಿಯೇ ಇದ್ದು ಮತ್ತೆ ಒಂದೆರಡು ದಿವಸ ವಿಶ್ರಮಿಸಿಕೊಂಡು ಸ್ನೇಹಿತನು ತನ್ನ ದೇಶಕ್ಕೆ ಹೊರಡುವುದಾಗಿ ಹೇಳಿದನು. ವಸಂತನು ಸ್ನೇಹಿತನು ಹೊರಡುವಾಗ ತಮ್ಮ ಸ್ನೇಹದ ಜ್ಞಾಪಕಾರ್ಥವಾಗಿ, ಹಿಂದೂ ದೇಶದ ಕಲಾಕೌಶಲವನ್ನು ತೋರಿಸುವಂತೆ ನಖಾಸೆಯಿಂದ ಮಾಡಲ್ಪಟ್ಟ ಊಟ ಮತ್ತು ತಿಂಡಿಗಳಿಗಾಗಿ ಉಪಯೋಗಿಸುವಂಥ ಒಂದು ಸೆಟ್ ಬೆಳ್ಳಿಯ

ಸಾಮಾನುಗಳನ್ನು ಬಹುಮಾನವಾಗಿ ಕೊಟ್ಟನು. ಅದಕ್ಕೆ ಪ್ರತಿಯಾಗಿ ಅವನು ತಾವು ಪ್ರಯಾಣ ಮಾಡಿಕೊಂಡು ಬಂದಿದ್ದ ವಿಮಾನವನ್ನೇ ವಸಂತನಿಗೆ ಬಹುಮಾನವಾಗಿ ಕೊಟ್ಟು ಮತ್ತೊಮ್ಮೆ ತಾಯ್ತಂದೆಗಳೊಡನೆ ತಮ್ಮ ದೇಶಕ್ಕೆ ಬರುವಂತೆ ಆಹ್ವಾನಿಸಿ ಅಲ್ಲಿಂದ ಹೊರಟನು. ವಸಂತನೂ ಅವನ ತಾಯಿತಂದೆಗಳೂ ಅವನ ಸ್ನೇಹಿತನನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಅಲ್ಲಿಂದ ವಾಯುಮಾರ್ಗವಾಗಿ ಅಮೆರಿಕಾಕ್ಕೆ ಹೊರಡುವಾಗ ಅವನಿಗೆ ಸುಖಪ್ರಯಾಣವನ್ನು ಬಯಸಿ ಬೀಳ್ಕೊಟ್ಟು ಹಿಂದಿರುಗಿದರು.

ಹಾಲು ಬೆಣ್ಣೆಗಳ ಉತ್ಪತ್ತಿಗಾಗಿ ಒಳ್ಳೆಯ ದನಗಳನ್ನು ತಾನು ಸಾಕಿದುದು ಮಾತ್ರವಲ್ಲದೆ ವಸಂತನು ಶಿವಪುರದ ರೈತರೆಲ್ಲರೂ ಸಾಕುವಂತೆ ಪ್ರೋತ್ಸಾಹಿಸಿದನು. ಹಾಲನ್ನು ಕಡೆಯುವ ಯಂತ್ರ ಒಂದನ್ನು ಇಟ್ಟು, ಸರಿಯಾದ ಬೆಲೆಗೆ ರೈತರಿಂದ ಹಾಲನ್ನು ಕೊಂಡು ಯಂತ್ರದ ಸಹಾಯದಿಂದ ಹಾಲನ್ನೂ ಬೆಣ್ಣೆಯನ್ನೂ ಪ್ರತ್ಯೇಕಿಸಿ ಅವುಗಳನ್ನು ಬೆಂಗಳೂರಿಗೆ ಕಳುಹಿಸಲುಪಕ್ರಮಿಸಿದನು. ಉತ್ತಮ ಜಾತಿಯ ಕೋಳಿಗಳನ್ನು ತರಿಸಿ ರೈತರೆಲ್ಲರೂ ಸಾಕುವಂತೆ ಪ್ರೋತ್ಸಾಹಿಸಿ ಮೊಟ್ಟೆಗಳನ್ನು ಬೆಂಗಳೂರಿಗೆ ಸಾಗಿಸುವಂತೆ ಏರ್ಪಡಿಸಿದನು. ಬೆಂಗಳೂರಿನ ಮುಖ್ಯವಾದ ಆಸ್ಪತ್ರೆಗಳಿಗೂ ಹೊಟೇಲುಗಳಿಗೂ ಹಾಲು ಬೆಣ್ಣೆ ಮೊಟ್ಟೆಗಳನ್ನು ಕ್ರಮವಾಗಿ ಒದಗಿಸುವಂತೆ ಒಪ್ಪಂದ ಮಾಡಿಕೊಂಡನು. ಇದಲ್ಲದೆ ರೈತರು ತಮ್ಮ ವಿರಾಮ ಕಾಲದಲ್ಲಿ ವಿದ್ಯುಚ್ಛಕ್ತಿಯ ಸಣ್ಣ ಸಣ್ಣ ಯಂತ್ರಗಳ ಸಹಾಯದಿಂದ ಕಾಲುಚೀಲಗಳನ್ನು ನೇಯುವುದು, ಬಣ್ಣದ ಸಾಮಾನುಗಳನ್ನು ಮಾಡುವುದು ಇವೇ ಮುಂತಾದ ಸಣ್ಣ ಪುಟ್ಟ ಕೈಗಾರಿಕೆಗಳನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸಿದನು. ಇವುಗಳ ದೆಸೆಯಿಂದ ರೈತರ ಆರ್ಥಿಕ ಸ್ಥಿತಿಯೂ ಅವರ ಜೀವನದ ಮಟ್ಟವೂ ಉತ್ತಮಗೊಂಡವು.

ಮಾಘ ಶುದ್ಧ ದಶಮಿ. ಸಾಯಂಕಾಲ ಆರೂವರೆ ಗಂಟೆ ಸಮಯ. ತೋಟದ ಕಲ್ಲು ಭಾವಿಯ ಸುತ್ತಲೂ ಹಾಕಿದ್ದ ಹಾಸುಗಲ್ಲಿನ ಮೇಲೆ, ಮರಿಗೌಡರೂ ಅವರ ಜೊತೆಯಲ್ಲಿ ಓದುತ್ತಿದ್ದು, ಈಗ ಆ ತಾಲ್ಲೂಕಿಗೆ ಅಮಲ್ದಾರರಾಗಿ ಬಂದಿದ್ದ ಸ್ನೇಹಿತರೊಬ್ಬರೂ ತಮ್ಮ ಚಿಕ್ಕಂದಿನ ಆಟ ಪಾಟಗಳ

ಮೊದಲುಗೊಂಡು ತಮ್ಮ ಈಗಿನ ಗೃಹಕೃತ್ಯಗಳವರೆಗೂ ಮಾತನಾಡುತ್ತಾ ಕುಳಿತಿದ್ದರು. ಬೆಳಕು ಕಡಿಮೆಯಾಗುತ್ತಾ ಬಂದಂತೆ ಪಕ್ಷಿಗಳ ಚಿಲಿಪಿಲಿ ಶಬ್ದವೂ ನಿಂತು ಹೋಯಿತು. ಪಕ್ಕದ ಹಳ್ಳದಲ್ಲಿ ಬಂಡೆಯನ್ನು ಸುತ್ತಿ ಹರಿಯುತ್ತಿದ್ದ ನೀರಿನ ಜುಳು ಜುಳು ಶಬ್ದವು ಮಾತ್ರ ಕೇಳಿಬರುತ್ತಿತ್ತು. ತೋಟದ ಫಲವೃಕ್ಷಗಳನ್ನು ಹಾದು ಸುಗಂಧಯುಕ್ತವಾದ ತಂಬೆಲರು ನಿಧಾನವಾಗಿ ಬೀಸುತ್ತಿತ್ತು. ಚಲಿಸದೆ ನಿಂತಿದ್ದ ನೀರಿನಲ್ಲಿ ಚಂದ್ರನು ಪ್ರತಿಬಿಂಬಿಸಿ ಕಾಣುತ್ತಿದ್ದನು. ಬಂಗಲೆಯ ಕಡೆಯಿಂದ ರೇಡಿಯೊ ಮೂಲಕ ನಾಗಸ್ವರದಲ್ಲಿ ಪೂರ್ವಿಕಲ್ಯಾಣಿ ರಾಗದ ಆಲಾಪನೆಯು ಇಂಪಾಗಿ ಕೇಳಿಬರುತಿತ್ತು. ಇಂಥಾ ನಿಸರ್ಗ ಸೌಂದರ್ಯ ರಾಸಿಯಿಂದ ಮುಗ್ಧನಾದ ಸ್ನೇಹಿತನು ಮರಿಗೌಡರನ್ನು ಕುರಿತು, “ ಮಿತ್ರ, ‘ ಸಾಯಂಕಾಲೇ ವನಾಂತೇ ಕುಸುಮಿತ ಸುಮಯೇ ಸೈಕತೇ ಚಂದ್ರಿಕಾಯಾಂ ’ ಎಂದು ಕವಿಗಳು ವರ್ಣಿಸಿರುವ ಸೌಂದರ್ಯ ರಾಸಿಯನ್ನು ಸ್ವಹಸ್ತದಿಂದ ನಿರ್ಮಿಸಿಕೊಂಡು ಅದರ ಮಧ್ಯೆ ಸುಖಪಡುತ್ತಿರುವ ನೀನೇ ಧನ್ಯ. ನಮ್ಮ ಸ್ನೇಹಿತರಲ್ಲಿ ಬಹುಮಂದಿಗೆ ಈ ಭಾಗ್ಯವಿಲ್ಲ. ನಿನ್ನ ಸುಖ ಜೀವನವನ್ನು ನೋಡಿ ಆನಂದಿಸುವ ಸುಯೋಗವಾದರೂ ನನಗೆ ಲಭಿಸಿತು. ನಿನ್ನಂಥ ವಿದ್ಯಾವಂತರೂ, ಕಷ್ಟಸಹಿಷ್ಣುಗಳೂ, ದೃಢಚಿತ್ತರೂ, ದೇಶಾಭಿಮಾನಿಗಳೂ ಆದ ರೈತರಿಂದಲೇ ನಮ್ಮ ಭರತಖಂಡವು ಉದ್ಧಾರವಾಗಬೇಕು. ವಸತಿ ವಿದ್ಯಾಶಾಲೆಯಲ್ಲಿ ಶಿಕ್ಷಣಪಡೆಯುತ್ತಿರುವ ವಿದ್ಯಾರ್ಥಿಗಳಲ್ಲಿ ಹತ್ತರಲ್ಲಿ ಒಬ್ಬನಂತೆಯಾದರೂ ಜೀವನದಲ್ಲಿ ಈ ಆದರ್ಶವನ್ನನುಸರಿಸಿ ನೆಲಸುವುದಾದರೆ ನವಯುಗವೇ ಪ್ರಾರಂಭವಾಯಿತೆಂದು ಹೇಳಬಹುದು.” ಎಂದರು.

ಮರಿಗೌಡರು ಗಾಂಭೀರ್ಯದಿಂದ ಮುಗುಳ್ನಗೆಯನ್ನು ಸೂಸುತ್ತಾ “ ಎಲ್ಲವೂ ದೈವಾನುಗ್ರಹ ಮತ್ತು ಹಿರಿಯರ ಆಶೀರ್ವಾದ ” ಎಂದು ಉತ್ತರ ಕೊಟ್ಟರು.

ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು ಸಿಟಿ.

ಕೆಲವು ಅಭಿಪ್ರಾಯಗಳು

ಶ್ರೀ. ಎರ್. ಬಾಲಕೃಷ್ಣಯ್ಯ, ಬಿ.ಎ., ಎಲ್‌ಎಲ್.ಬಿ.,
ಅಧ್ಯಕ್ಷರು. ಮೈಸೂರು ಸಂಸ್ಥಾನದ ವಯೋಜನ ವಿದ್ಯಾಸಮಿತಿ.

"........ಇದರಲ್ಲಿ ಬರುವ ವ್ಯಕ್ತಿಗಳು ನಮ್ಮ ಮಕ್ಕಳಿಗೆ ಆದರ್ಶ
ಪ್ರಾಯರಾಗಿ
ಮಾಡುವ

ಡಾ॥ ಎಂ. ಸಿ

"......
ಯರು
ಸ್ಪಷ್ಟವ

ಶ್ರೀ ಜೆ. ಬಿ.
ವಿಶೇಷಾಧಿ

"......
ನಿರೀಕ್ಷೆ
....ಸ್ವ

ಕನ್ನ
ಸೌಹಾರ್ದ
ಭೂತಕ್ಕೆ ಧ
ಕಾಲದಲ್ಲಿ ಸ
ಮಾಡಿದ್ದಾರೆ

ಕರ್ನಾ
ಅವುಗಳ ಸ
ಸಂಶಯಪಡ
ಪಡೆಯಬಹು

ವಿಶ್ವ
ಜಟಿಲವಾಗು
ಉಪಕಾರ ಮಾಡಿದ್ದಾರೆ........

ಗುಡಿಸಲ ಗುರು

ಈ ಪುಸ್ತಕವು ಮೈಸೂರು ಸಂಸ್ಥಾನದ ರೆವಿನ್ಯೂ ಕಮೀಷನರ್‌ರ L. Dis. A. 5. 3419/44—45 ನೇ ನಂಬರ್ 17-4-1945 ತಾರೀಖು ಹುಕುಮು ಪ್ರಕಾರ ಸಂಸ್ಥಾನದ ಗ್ರಾಮ ಪಂಚಾಯಿತಿಗಳಿಗೆ ಅಂಗೀಕರಿಸಲ್ಪಟ್ಟಿದೆ.

ದಪ್ಪ ಕಾಗದದ ದಪ್ಪರಟ್ಟಿನ ಪ್ರತಿ ರೂ. 1-0-0 } ಲೈಬ್ರರಿಗಳಿಗೆ
ಡಿಟೋ ಪೂರ್ತಿ ಕ್ಯಾಲಿಕೊ ಬೈಂಡಾದದ್ದು 1-8-0 }

ಮಾರಾಟಗಾರರು :— ಶ್ರೀರಾಮಚಂದ್ರ ಬುಕ್ ಡಿಪೋ
ಮೈಸೂರು.

ಪುರಾವಶೇಷಗಳು ೧